24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 52 | ನವದೆಹಲಿ | ಬೆಲೆ ₹ 10 | ಆಗಸ್ಟ್ 19, 2026, ಬುಧವಾರ



## ನಿತ್ಯ ಪಂಚಾಂಗ 19.08.2026 ಬುಧವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ-ವಸಂತ ಋತು, ಚಾಂದ್ರಮಾನ, ಚೈತ್ರ-ವೈಶಾಖ ಮಾಸ

**ಶೀತಲ ಸಪ್ತಮಿ ತುಳಸೀದಾಸ ಜಯಂತಿ, ಶಿವಮುಷ್ಟಿ ವ್ರತ, ಸೂರ್ಯ ಪವಿತ್ರಾರೋಪಣ ವಿನೀತ ಕುಮಾರಸ್ವಾಮಿ ಪುಣ್ಯದಿನ**

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 – 12.00 | 1.30 – 3.00 |
| ಮಂಗಳ | 3.00 – 4.30 | 9.00 – 10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 – 12.00 |
| ಗುರು | 1.30 – 3.00 | 6.00 – 7.30 | 9.00 – 10.30 |
| ಶುಕ್ರ | 10.30 – 12.00 | 3.00 – 4.30 | 7.30 – 9.00 |
| ಶನಿ | 9.00 – 10.30 | 1.30 – 3.00 | 6.00 – 7.30 |

# ದಕ್ಷಿಣ ಭಾರತದ ರಾಜ್ಯಗಳ ಒಗ್ಗಟ್ಟು: ಸಿಎಂ ಡಿ.ಕೆ.ಶಿವಕುಮಾರ್ ಪ್ರತಿಪಾದನೆ



**ಬೆಂಗಳೂರು, ಆ.18:** "ಪ್ರಧಾನಿಗಳು ದೇಶವನ್ನು ಆರ್ಥಿಕ ಶಕ್ತಿಯನ್ನಾಗಿಸಬೇಕು ಅಂದರೆ, ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳು ಒಗ್ಗಟ್ಟಾಗಿದ್ದರೆ ಮಾತ್ರ ಸಾಧ್ಯ. ನಮ್ಮಲ್ಲಿರುವ ಪ್ರತಿಭಾ ಸಾಮರ್ಥ್ಯ ಅಸಾಮಾನ್ಯ" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಹೇಳಿದರು.

ಉಪಸಭಾಧ್ಯಕ್ಷರ ಆಯ್ಕೆಯ ನಂತರ ವಿಧಾನಸಭೆಯಲ್ಲಿ ಸಿಎಂ ಮಂಗಳವಾರ ಮಾತನಾಡಿದರು. "ಪ್ರಧಾನಿ ಮೈಸೂರಿಗೆ ಬಂದಿದ್ದಾಗ. ಅವರ ಬಳಿ, ರಾಜ್ಯದ ಹಿತಕ್ಕಾಗಿ ಏನೇನು ಕೆಲಸ ಆಗಬೇಕು ಎನ್ನುವುದನ್ನ ಹೇಳಿದ್ದೇನೆ. ಇತಿಹಾಸದಲ್ಲಿ ಏನೇನೆಲ್ಲಾ ಆಗಿದೆ ಎನ್ನುವುದನ್ನು ಅವರ ಗಮನಕ್ಕೆ ತಂದಿದ್ದೇನೆ. ನಮ್ಮಲ್ಲಿರುವ ಪ್ರತಿಭೆ ಬಗ್ಗೆ, ಅದರ ಶಕ್ತಿಯ ಬಗ್ಗೆ ಅವರ ಗಮನ ಸೆಳೆದಿದ್ದೇನೆ" ಎಂದರು.

"ಅಧಿಕಾರ ಯಾವತ್ತಿಗೂ ಶಾಶ್ವತ ಅಲ್ಲ ಅನ್ನೋ ಸತ್ಯ ನನಗೆ ತಿಳಿದಿದೆ. ನನ್ನ ಪಾಲಿಗೆ ದೊರೆತ ಸ್ಥಾನಕ್ಕೆ ಗೌರವ ಸಲ್ಲಿಸುತ್ತಾ ಬಂದಿದ್ದರಿಂದ ಇವತ್ತು ಈ ಸ್ಥಾನದಲ್ಲಿ ಕುಳಿತಿದ್ದೇನೆ. ನನ್ನ ಹೃದಯ ನಿಷ್ಕಲ್ಮಶವಾಗಿದೆ. ಮನಸ್ಸಿನಲ್ಲಿ ಯಾವುದೇ ದ್ವೇಷಾಸೂಯೆಗಳು ಇಲ್ಲದೆ ಈ ನಾಡಿನ ಜನರ ಸೇವೆ ಮಾಡಬೇಕು ಅಂತ ಸಂಕಲ್ಪ ಮಾಡಿದ್ದೇನೆ" ಎಂದರು.

"ರಾಜಕೀಯದಲ್ಲಿ ಅಧಿಕಾರ ದುರಪಯೋಗ ಆಗಬಾರದು. ರಾಜ್ಯದ ಹಿತಾಸಕ್ತಿಗೆ ಎಲ್ಲರೂ ಬಹಳ ಮುಖ್ಯ. ವಿರೋಧ ಪಕ್ಷಗಳ ಟೀಕೆ, ಟಿಪ್ಪಣಿಗಳು, ನಿಮ್ಮವರ ಸಲಹೆಗಳು ಎಲ್ಲವೂ ಬೇಕು. ನಾವೆಲ್ಲ ಸೇರಿ ಈ ರಾಜ್ಯದ ಹಿತಾಸಕ್ತಿಯಾಗಿ ಕೆಲಸ ಮಾಡೋಣ. ಇಬ್ಬರ ಉದ್ದೇಶ ಒಂದೇ. ಜನಸೇವೆ" ಎಂದರು.

**ಬಿಡದಿ ಟೌನ್‌ಶಿಪ್ ಚರ್ಚೆ ಮಾಡೋಣ:**

"ಬಿಡದಿ ವಿಚಾರದಲ್ಲಿ ಚರ್ಚೆ ಮಾಡೋಣ ಅಂತ ಹೇಳಿದ್ದೀರಿ. ಸಂತೋಷ. ತೊಂದರೆ ಕೊಡುವ ಜಾಯಮಾನ ನನ್ನದಲ್ಲ. ಕುಮಾರಸ್ವಾಮಿ ಅವರ ಆವತ್ತಿನ ಬಿಡದಿ ಟೌನ್‌ಶಿಪ್ ನಿರ್ಧಾರನ ನಾನು ಒಪ್ಪಿದ್ದೆ. 2028ಕ್ಕೆ ಜನ ಏನು ತೀರ್ಮಾನ ಮಾಡುತ್ತಾರೋ ಅದನ್ನು ನೀವು, ನಾವು ಇಬ್ಬರೂ ಒಪ್ಪಿಕೊಳ್ಳಬೇಕು. ಇಡೀ ದೇಶದಲ್ಲಿ ಸಮಸ್ಯೆಗಳು ಬೇಕಾದಷ್ಟು ಇವೆ. ನಾವು ಟೀಮ್ ಕರ್ನಾಟಕವಾಗಿ ಅದರ ಪರಿಹಾರಕ್ಕಾಗಿ ಒಟ್ಟಾಗಿ ಹೋರಾಟ ಮಾಡೋಣ" ಎಂದರು.

ಕುಮಾರಸ್ವಾಮಿ ಬಿಡದಿ ಸೇರಿದಂತೆ ಐದು ಟೌನ್ ಶಿಪ್ ಮಾಡಲು ಮುಂದಾದರು. ಅವರ ಆಲೋಚನೆ ತಪ್ಪಲ್ಲ. ಆದರೆ ಅದನ್ನು ಮಾಡಲು ಯಾಕೆ ಸಾಧ್ಯವಾಗಲಿಲ್ಲ. ಮಹಾರಾಷ್ಟ್ರ ಸಿಎಂ 80 ಸಾವಿರ ಎಕರೆ ಭೂಸ್ವಾಧೀನ ಮಾಡಿದ್ದಾರೆ. ಮೋದಿ ಅವರು ಗಿಫ್ಟ್ ಸಿಟಿ ಮಾಡುತ್ತಿದ್ದಾರೆ. ನಮಗೂ ನೀಡಿ ಎಂದು ಕೇಳಿದೆ, ಕೊಡಲಿಲ್ಲ. ಆಂಧ್ರ ಸಿಎಂ ಕೂಡ ಹೊಸನಗರ ನಿರ್ಮಿಸುತ್ತಿದ್ದಾರೆ. ನಮ್ಮಲ್ಲಿ ಎಲೆಕ್ಟ್ರಾನಿಕ್ ಸಿಟಿ, ಐಟಿಪಿಎಲ್ ಕೂಡ ರೈತರ ಜಮೀನು. ಪೆರಿಫೆರಲ್ ರಿಂಗ್ ರಸ್ತೆ ಕೂಡ ರೈತರ ಜಮೀನು. ಈ ಯೋಜನೆಗಳು ದೂರದೃಷ್ಟಿ ಯೋಜನೆಗಳು. ನೈಸ್‌ರಸ್ತೆ ಇಲ್ಲವಾಗಿದ್ದರೆ ಬೆಂಗಳೂರು ನಗರ ಸಂಚಾರ ಪರಿಸ್ಥಿತಿ ಏನಾಗುತ್ತಿತ್ತು ನೀವೇ ಹೇಳಿ. ಯೋಜನೆ ಲೋಪದೋಷ ವಿರುದ್ಧ ಕ್ರಮ ಕೈಗೊಳ್ಳೋಣ" ಎಂದರು.

"ಇಡೀ ದೇಶದಲ್ಲಿ ರಾಜಸ್ಥಾನ ಬಳಿಕ ಅತಿಹೆಚ್ಚು ಒಣಭೂಮಿ ಇರುವ ರಾಜ್ಯ ಕರ್ನಾಟಕ. ನಾವು ರೈತರ ಬಗ್ಗೆ ಆಲೋಚನೆ ಮಾಡಬೇಕು, ಅವರನ್ನು ಬದುಕಿಸಬೇಕು. ಹೀಗಾಗಿ ಅತ್ಯಾಧುನಿಕ ತಂತ್ರಜ್ಞಾನ ಮೂಲಕ ರೈತರಿಗೆ ಮಾರ್ಗದರ್ಶನ ನೀಡಲು ಮುಂದಾಗಿದ್ದೇವೆ. ಬೆಂಗಳೂರಿನ ನಗರ ವಿದ್ಯಾರ್ಥಿಗಳಿಗೆ ಹಳ್ಳಿ, ರೈತನ ಬದುಕು ಪರಿಚಯಿಸಬೇಕು ಎಂದು ಕೃಷಿ ವಿವಿಗೆ ಹೇಳಿ 3 ದಿನ ಪ್ರವಾಸದ ಪಠ್ಯಕ್ರಮ ಕಾರ್ಯಕ್ರಮ ಏರ್ಪಡಿಸಲಾಗುವುದು" ಎಂದು ತಿಳಿಸಿದರು.

"ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾದಾಗ ಬೆಂಗಳೂರು ಜನಸಂಖ್ಯೆ 7–8 ಲಕ್ಷ ಇತ್ತು. ಪೊಲೀಸ್ ಕಮೀಷನರೇಟ್ ಆರಂಭವಾದಾಗ 10 ಲಕ್ಷ ಇತ್ತು. ಇವತ್ತು ಬೆಂಗಳೂರ ಜನಸಂಖ್ಯೆ 1.5 ಕೋಟಿ ಆಗಿದೆ. 1.4 ಕೋಟಿ ವಾಹನಗಳಿವೆ. ಇಷ್ಟು ಜನರು ವಾಸಿಸುವುದಕ್ಕೆ ಸ್ಥಳ, ನೀರು ಒದಗಿಸಬೇಕು. ಇಲ್ಲಿಗೆ ಬಂದವರು ಯಾರೂ ಕೂಡ ಮತ್ತೆ ಊರಿಗೆ ವಾಪಸ್ಸು ಹೋಗುತ್ತಿಲ್ಲ. ನನ್ನನ್ನೂ ಒಳಗೊಂಡಂತೆ ಹೊರಗಡೆ ಇಂದ ಬೆಂಗಳೂರಿಗೆ ಬಂದವರು, ಈ ವಾತಾವರಣ, ಪರಿಸರ, ಜ್ಞಾನಕ್ಕೆ ಮಾರುಹೋಗಿ ಹೊರಗಡೆಗೆ ಹೋಗುತ್ತಿಲ್ಲ. ಬೆಂಗಳೂರಿನ ಎಲ್ಲಾ ಸಮಸ್ಯೆ ಪರಿಹಾರಕ್ಕೆ ನಾವೆಲ್ಲರೂ ಒಗ್ಗಟ್ಟಾಗಿ ಕಾರ್ಯನಿರ್ವಹಿಸಬೇಕಾಗಿದೆ" ಎಂದರು.

"ಮುಂದಿನ 25 ವರ್ಷಗಳಲ್ಲಿ ಕರ್ನಾಟಕವನ್ನು ದೇಶದಲ್ಲಿ ಶಕ್ತಿಯುತ ರಾಜ್ಯವನ್ನಾಗಿ ರೂಪಿಸಲು ಆಡಳಿತ ಪಕ್ಷ – ವಿರೋಧ ಪಕ್ಷಗಳು ಎರಡೂ ಸಾಮರಸ್ಯದಿಂದ ಒಟ್ಟಿಗೆ ಕೆಲಸ ಮಾಡಿದರೆ ಮಾತ್ರ ಸಾಧ್ಯ. ನಾವು ಒಕ್ಕೂಟ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಪ್ರಧಾನಿಗಳು ಬೆಂಗಳೂರಿನ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ. ಅವರು ನನ್ನ ಬಳಿ ವಿಶ್ವದ ಎಲ್ಲಾ ನಾಯಕರು, ಹೂಡಿಕೆದಾರರು ಬೆಂಗಳೂರನ್ನೇ ಬಯಸುತ್ತಿದ್ದಾರೆ ಎಂದಿದ್ದರು. ಸುಪ್ರಿಂ ಕೋರ್ಟ್ ದೆಹಲಿಯಲ್ಲಿದೆ. ಆದರೆ, ಕಾನೂನು ಕಾಲೇಜು ಬೆಂಗಳೂರಲ್ಲಿ ಏಕಿದೆ? ಇಸ್ರೋ ಏಕೆ ಬೆಂಗಳೂರಲ್ಲಿ ಶುರುವಾಯಿತು? ವಿವೇಕಾನಂದರು– ಜೆಮ್‌ಶೆಡ್ ಜೀ ಟಾಟಾ ಅವರೊಂದಿಗೆ ಸಂಭಾಷಣೆಯಿಂದ ಮೈಸೂರು ಮಹಾರಾಜರು ವಿಜ್ಞಾನದಿಂದ ಅಭಿವೃದ್ಧಿ ಸಾಧ್ಯ ಅನ್ನೋದನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿನಲ್ಲಿ ಜಾಗ ಕೊಟ್ಟರು" ಎಂದು ಹೇಳಿದರು.

"ನಮ್ಮ ವಿರೋಧ ಪಕ್ಷದಲ್ಲಿರುವವರೂ ಕೂಡ ಒಂದು ಕಾಲದಲ್ಲಿ ವಿವಿಧ ಸಚಿವ ಸ್ಥಾನಗಳನ್ನು ಅಲಂಕರಿಸಿದವರು. ಬೆಂಗಳೂರಲ್ಲಿ 26 ಲಕ್ಷ ಐಟಿ ವೃತ್ತಿಪರರು ಇದ್ದಾರೆ. 2 ಲಕ್ಷ ವಿದೇಶಿ ಪಾಸ್‌ಪೋರ್ಟ್ ದಾರರು ಇದ್ದಾರೆ. ಎಷ್ಟೋ ಜನ ಮೆಡಿಕಲ್ ಕಾಲೇಜುಗಳನ್ನು ನಡೆಸುತ್ತಿದ್ದಾರೆ. 13,940 ವೈದ್ಯರು ಬೆಂಗಳೂರಲ್ಲಿ ತಯಾರಾಗುತ್ತಿದ್ದಾರೆ. 1ಲಕ್ಷ ಪ್ಯಾರಾ ಮೆಡಿಕಲ್ ಸ್ಟಾಫ್ ತಯಾರಾಗುತ್ತಿದ್ದಾರೆ. ಇಡೀ ಭಾರತದಲ್ಲಿ ಬೆಂಗಳೂರಂಥ ಟ್ಯಾಲೆಂಟ್ ಪೂಲ್ ಎಲ್ಲಿದೆ? ಇಂಥ ಪ್ರತಿಭೆಗಳಿಗೆ ನಾವು ಯಾವ ರೀತಿ ಮಾನ್ಯತೆ ಕೊಡಬೇಕು? ಈ ಬಗ್ಗೆ ನಾವು–ನೀವೆಲ್ಲಾ ಚಿಂತನೆ ಮಾಡಬೇಕಾಗಿದೆ. ವಿಶ್ವ ಬೆಂಗಳೂರನ್ನು ನೋಡುತ್ತಿದೆ. ಬೆಂಗಳೂರು, ಕರ್ನಾಟಕದ ಮೂಲಕ ದೇಶ ಅಭಿವೃದ್ಧಿಯಾಗಬೇಕು ಅಂತ ಪ್ರಧಾನಿ ಅವರಿಗೆ ನಾನೇ ಹೇಳಿದ್ದೇನೆ. ಇವೆಲ್ಲ ಸಾಧ್ಯವಾಗಿಸಲು ನಾವೆಲ್ಲ ಸೇರಿ ಜೊತೆಯಲ್ಲಿ ಕೆಲಸ ಮಾಡೋಣ ಮುಖ್ಯಮಂತ್ರಿಗಳು ಸದನಕ್ಕೆ ಮನವಿ ಮಾಡಿದರು" ಎಂದರು.

"ಈಶಾನ್ಯ ಭಾಗದವರು ಬೆಂಗಳೂರಲ್ಲಿ ಬಂದು ನೆಲೆಸಿದ್ದಾರೆ. ಹೊಸಕೋಟೆಯಲ್ಲಿ ಅಸ್ಸಾಂನವರು 10 ಸಾವಿರ ಯುವಕರಿಗೆ ತರಬೇತಿ ಕೊಟ್ಟಿದ್ದಾರೆ. ಈ ರಾಜ್ಯಕ್ಕೆ ಇರುವ ಸಂಪತ್ತನ್ನು ಉಳಿಸಿಕೊಳ್ಳಬೇಕು. ನಾವು ರಾಜಕಾರಣವನ್ನು ಹೊರಗೆ ಮಾಡೋಣ. ಮುಂದಿನ ಯುವಜನಾಂಗದ ಭವಿಷ್ಯಕ್ಕಾಗಿ ನಾವು ಕೆಲಸ ಮಾಡಬೇಕು" ಎಂದು ಹೇಳಿದರು.

**ಬೆಂಗಳೂರಿಗೆ ನೀರು ಬೇಕು:**

"ಬೆಂಗಳೂರಿಗೆ ನೀರು ಒದಗಿಸುವುದು ಸವಾಲಿನ ಕೆಲಸ. ಅದನ್ನು ನಾವು ಮಾಡುತ್ತಿದ್ದೇವೆ. ಹಿಂದೆ ನಾನು ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿದ್ದಾಗ ಹೆಬ್ಬಾಳದ ನಂತರದ ಪ್ರದೇಶಗಳಿಗೆ ಜಲಮಂಡಳಿಯಿಂದ ನೀರು ಒದಗಿಸುವುದು ಬೇಡ ಅಂತ ತೀರ್ಮಾನಿಸಿ, ನಾನೇ ಆದೇಶಕ್ಕೆ ಸಹಿಹಾಕಿದ್ದೆ. ಆದರೆ ಇಂದು ಬೆಂಗಳೂರು ಅಗಾಧವಾಗಿ ಬೆಳೆದಿದೆ. ಹೆಸರಘಟ್ಟ ಕೆರೆ, ಹೊಸಕೋಟೆ ಕೆರೆ, ತಿಪ್ಪಗೊಂಡನಹಳ್ಳಿಯಂಥ ಐದಾರು ಕೆರೆಗಳನ್ನು ಅಭಿವೃದ್ಧಿಗೊಳಿಸಿ, ಅಂತರ್ಜಲ ಹೆಚ್ಚಿಸಿ ಬೆಂಗಳೂರು ಜನರ ನೀರಿನ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವ ಪ್ರಯತ್ನಕ್ಕೆ ನಮ್ಮ ಸರ್ಕಾರ ಕೈಹಾಕುತ್ತಿದೆ" ಎಂದರು.

"ಕಾವೇರಿ ವಿಚಾರದಲ್ಲಿ ಸಹಕಾರ ಕೊಟ್ಟ ನಿಮಗೆ ಧನ್ಯವಾದಗಳು. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲ ಆಗಲ್ಲ ಎಂದು ಈ ಹಿಂದೆ ಹೇಳಿದ್ದೆ. ನಾವು ನೀವು ಎಲ್ಲರೂ ಸೇರಿ ಪ್ರಕೃತಿಗೆ ಪ್ರಾರ್ಥಿಸೋಣ" ಎಂದರು.

"ನಮ್ಮಲ್ಲಿರುವ ಪ್ರತಿಭೆಗಳು ಪ್ರಪಂಚದಲ್ಲಿ ಇಲ್ಲ. ಕ್ಯಾಲಿಫೋರ್ನಿಯದಲ್ಲಿರುವ ಇಂಜಿನಿಯರ್ ಗಳ ಪೈಕಿ ಮೂವರಲ್ಲಿ ಇಬ್ಬರು ಭಾರತೀಯರು, ಅದರಲ್ಲೂ ಹೆಚ್ಚು ಕರ್ನಾಟಕದವರು. ಇದು ನಮ್ಮ ಶಕ್ತಿ, ಇದನ್ನು ಕಾಪಾಡಬೇಕು. ನಾವು ರಾಜ್ಯದ 350 ಕಿ.ಮೀ ಉದ್ದದ ಕರಾವಳಿಯನ್ನು ಪ್ರವಾಸೋದ್ಯಮಕ್ಕೆ ಬಳಸಿಕೊಳ್ಳುತ್ತಿದ್ದೇವೆ. ಕೇರಳ, ಗೋವಾ ರಾಜ್ಯಗಳು ಕರಾವಳಿ ಭಾಗವನ್ನು ಹೇಗೆ ಬಳಸಿಕೊಂಡಿದ್ದಾರೆ. ಇದಕ್ಕಾಗಿ ಪ್ರತ್ಯೇಕ ಪ್ರವಾಸೋದ್ಯಮ ನೀತಿ ರೂಪಿಸುತ್ತಿದ್ದೇವೆ. ಹೀಗೆ ನಾವು ರೈತರು, ನೀರಾವರಿ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ" ಎಂದರು.

**ಕುಮಾರಸ್ವಾಮಿ, ಯಡಿಯೂರಪ್ಪ, ಬೊಮ್ಮಾಯಿ ಅವರ ಯೋಜನೆ ಮುಂದುವರಿಸುತ್ತೇವೆ:**

"ನಮ್ಮದು ಸಿದ್ದರಾಮಯ್ಯ ಅವರ ಸರ್ಕಾರದ ಮುಂದುವರಿದ ಭಾಗ. ಹೊಸ ಆಲೋಚನೆ ಹೊಂದಿದ್ದೇವೆ. ಈ ಹಿಂದೆ ಕುಮಾರಸ್ವಾಮಿ, ಯಡಿಯೂರಪ್ಪ, ಬೊಮ್ಮಾಯಿ ಅವರ ಆಲೋಚನೆಯನ್ನು ನಾವು ಬಿಡದೆ ಮುಂದುವರಿಸುತ್ತೇವೆ. ಕುಮಾರಸ್ವಾಮಿ ಅವರ ಬಿಡದಿ, ದೇವೇಗೌಡರ ನೈಸ್ ಯೋಜನೆಯನ್ನು ನಾವು ಮುಂದುವರಿಸುತ್ತೇವೆ. ಈ ಯೋಜನೆಗಳಲ್ಲಿ ತಪ್ಪಾಗಿದ್ದರೆ ಸರಿ ಮಾಡೋಣ" ಎಂದರು.

ಈ ಮಧ್ಯೆ ಬಿಜೆಪಿ ಶಾಸಕ ಸುನೀಲ್ ಕುಮಾರ್, ನಿಮ್ಮ ಈ ಯೋಜನೆ ಮಾಡಲು ನಿಮ್ಮ ಪಕ್ಷದವರೇ ಬಿಡಲ್ಲ ಎಂದಾಗ, "ನೋಡಿ ಸುನೀಲ್, ನನಗೆ ಇತಿಹಾಸ ಓದಕ್ಕೆ ಬರೆಯುವುದಕ್ಕೆ ಇಷ್ಟ ಇಲ್ಲ. ಇತಿಹಾಸ ಸೃಷ್ಟಿಸುವುದಕ್ಕೆ ಹೆಚ್ಚು ಆಸಕ್ತಿ ಇದೆ. ನಾನು ನನ್ನ ಕೈಲಾದ ಪ್ರಯತ್ನ ಮಾಡುವೆ. ಯಾವುದು ಸುಲಭವಲ್ಲ. ಅಧಿಕಾರಿಗಳು ಸುಲಭವಾಗಲು ಬಿಡಲ್ಲ, ಕೋರ್ಟ್‌ಗಳಲ್ಲಿ ಒಂದಷ್ಟು ಪ್ರಕರಣ ಇವೆ" ಎಂದರು.

"ನೀವು ಏನು ಟೀಕೆ ಮಾಡುತ್ತೀರೋ ಮಾಡಿ. ಆದರೆ ಮುಂದಿನ 25 ವರ್ಷಗಳಿಗೆ ಅಗತ್ಯವಾದ ನೀಲನಕ್ಷೆ ರೂಪಿಸೋಣ. ನಾವು ಇಲ್ಲಿಗೆ ಬಂದಿರೋದು ಜನರ ಸೇವೆಗಾಗಿ. ಬಿಜೆಪಿ ಕಾಲದಲ್ಲಿ ಸಾಕಾಲ ಎಂದು ಮಾಡಿದ್ದಿರಿ. ನಾನು ಅದಕ್ಕೆ ಹೊಸ ರೂಪ ನೀಡಿ ಪ್ರಜಾಸೇವೆ ಇಲಾಖೆ ಆರಂಭಿಸುತ್ತಿದ್ದೇವೆ. ವಿಧಾನಸೌಧಕ್ಕೆ ಬರಲು ಆಗದ ಜನರ ಬಳಿಗೆ ಸರ್ಕಾರ ತೆಗೆದುಕೊಂಡು ಹೋಗುವ ಉದ್ದೇಶ ನಮ್ಮದು. ನಮ್ಮ ಬಳಿ ಜನರ ಸಮಸ್ಯೆಯೊಂದಿಗೆ ಬರುತ್ತಾರೆ. ಅವರಿಗೆ ಸಾಧ್ಯವಾದಷ್ಟು ಪರಿಹಾರ ನೀಡಲು ಪ್ರಯತ್ನಿಸುತ್ತೇವೆ" ಎಂದರು.

"ಸಂವಿಧಾನ ಜಾರಿ ಆದಾಗ ಅದು ಉತ್ತಮವಾಗಿರುತ್ತದೆ. ನನ್ನ ಈ ಅಧಿಕಾರವನ್ನು ಯಾರ ವಿರುದ್ಧವು ಬಳಸುವುದಿಲ್ಲ. ಅಧಿಕಾರದಲ್ಲಿದ್ದಾಗ ನಾವು ಹೆಚ್ಚು ಗೆಳೆಯರು ಅಥವಾ ಹೆಚ್ಚು ಶತ್ರುಗಳನ್ನು ಮಾಡಿಕೊಳ್ಳಬಹುದು. ನಾನು ಸ್ನೇಹಿತರನ್ನು ಗಳಿಸಲು ಬಯಸುವೆ. ನನ್ನ ಕೈಲಿ ಸಾಧ್ಯವಾದಷ್ಟು ಸಹಾಯ ಮಾಡುವೆ. ದೇವರು ನನಗೆ ಹಾಗೂ ನನ್ನ ಕುಟುಂಬಕ್ಕೆ ಸಾಕಷ್ಟು ಶಕ್ತಿ ನೀಡಿದ್ದಾನೆ. ನಾನು ಇಲ್ಲಿ ಸಿಎಂ ಆಗಿರುವುದು" ಎಂದು ಹೇಳಿದರು.

**ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ:**

"ನನಗೆ ರಾಗ–ದ್ವೇಷಗಳು ಎಳ್ಳಷ್ಟೂ ಇಲ್ಲ. ಎಷ್ಟೋ ಜನರು ರಾಜಕೀಯ ಮಾಡುತ್ತಿದ್ದಾರೆ . ನಾನು ನನ್ನ ಜೀವನದಲ್ಲಿ ರಾಜಕೀಯ, ಕೋರ್ಟ್ ಪ್ರಕರಣಗಳು, ಟೀಕೆಗಳನ್ನು ಅನುಭವಿಸಿ ಮಾಗಿದ್ದೇನೆ. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ ಅನ್ನೋದು ಕಟ್ಟ ಕಡೆಯ ಸತ್ಯ. ತಪ್ಪು ದಾರಿಗೆ ಹೋದರೆ ಸರಿದಾರಿಗೆ ತರುವುದಕ್ಕೆ ಮಾಧ್ಯಮಗಳಿವೆ. ನಾವು, ನೀವು ತಪ್ಪು ಮಾಡಿದರೆ ಎದುರಿಗೆ ಹೈ ಕೋರ್ಟ್ ಇದೆ" ಎಂದರು.

"ನಾಡಿನ ಎಲ್ಲಾ ಜಲ್ವಂತ ಸಮಸ್ಯೆಗಳಿಗೂ ನೀವೆಲ್ಲ ಸೇರಿ ರಚನಾತ್ಮಕವಾದ ಪರಿಹಾರ ಕೊಡಿ. ಮೊದಲ ಸಲ ಶಾಸಕರಲ್ಲೂ ಹೊಸ ಚಿಂತನೆ ಇರಬಹುದು. ನಾನು 8ಸಲ, ಆರ್. ಅಶೋಕ್ 10 ಸಲ ಶಾಸಕರಾಗಿದ್ದಾರೆ. ನಾವೇ ಬುದ್ಧಿವಂತರು ಎನ್ನುವಂತಿಲ್ಲ. ಮಕ್ಕಳೇ ಶಿಕ್ಷಕರಿಗೆ ಪಾಠ ಮಾಡುವ ಕಾಲದಲ್ಲಿ ನಾವಿದ್ದೇವೆ. ಜಗತ್ತು ಕರ್ನಾಟಕವನ್ನು, ಬೆಂಗಳೂರನ್ನು ನೋಡುತ್ತಿದೆ ಎನ್ನುವ ಅರಿವು ನಮಗಿರಲಿ" ಎಂದರು.

## ಮುಂದಿನ ವರ್ಷದಿಂದ ಶಾಸಕರ ದಿನಾಚರಣೆ: ಸಭಾಪತಿ ಸಲೀಂ



**ಬೆಂಗಳೂರು, ಆ.18:** ರಾಜ್ಯದಲ್ಲಿ ಶಾಸಕರ ಪ್ರತಿಭೆ ಹಾಗೂ ಕೌಶಲ್ಯಗಳನ್ನು ಹೊರತರಲು ಮುಂದಿನ ವರ್ಷದಿಂದ ಶಾಸಕರ ದಿನಾಚರಣೆ'ಯನ್ನು ಆಚರಿಸಲು ನಿರ್ಧರಿಸಲಾಗಿದೆ ಎಂದು ವಿಧಾನಪರಿಷತ್ ಕಾರ್ಯಾಧ್ಯಕ್ಷ ಸಲೀಂ ಅಹಮದ್ ತಿಳಿಸಿದ್ದಾರೆ. ಉಪಸಭಾಪತಿ ಉಮಾಶ್ರೀ ಅವರನ್ನು ಬಿಜೆಪಿಯ ಡಾ.ಧನಂಜಯ್ ಸರ್ಜಿ ಅಭಿನಂದಿಸುವ ವೇಳೆ ಸಭೆಯಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಅವರು, 2006ರ ನಂತರ ರಾಜ್ಯದಲ್ಲಿ ಶಾಸಕರ ದಿನಾಚರಣೆಯನ್ನು ಆಚರಿಸಲಾಗಿಲ್ಲ. ಹೀಗಾಗಿ ಮುಂದಿನ ವರ್ಷದಿಂದ ಈ ಆಚರಣೆಯನ್ನು ಮತ್ತೆ ಆರಂಭಿಸಲು ಚಿಂತಿಸಲಾಗಿದ್ದು, ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಶೀಘ್ರವೇ ಚರ್ಚಿಸಿ ಅಂತಿಮ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

## ಮಾಜಿ ಶಾಸಕ ನಾಗೇಶ್ ವಿಧಿವಶ ಕೇಂದ್ರ ಸಚಿವ ಸೋಮಣ್ಣ ಸಂತಾಪ



**ತುಮಕೂರು:** ಬಿಜೆಪಿ ಮುಖಂಡ ಹಾಗೂ ಮಾಜಿ ಸಚಿವ ಬಿ.ಸಿ ನಾಗೇಶ್ ಅವರು ಮಂಗಳವಾರ ವಿಧಿವಶರಾಗಿದ್ದಾರೆ. ಕಳೆದ ಬಿಜೆಪಿ ಸರ್ಕಾರದಲ್ಲಿ ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾಗಿದ್ದ ನಾಗೇಶ್ ಉತ್ತಮವಾಗಿ ಕಾರ್ಯನಿರ್ವಹಿಸಿದ್ದರು. ಶಿಕ್ಷಣ ಕ್ಷೇತ್ರದಲ್ಲಿನ ಸುಧಾರಣೆ ಮಾತ್ರವಲ್ಲದೆ ತಿಪಟೂರು ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗಾಗಿಯೂ ಸಾಕಷ್ಟು ಶ್ರಮಿಸಿದ್ದರು ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

**ಎಂ.ಡಿ.ಎಲ್ ಸಂತಾಪ:** ಸರಳ ಸಜ್ಜನಿಕೆಯ ವ್ಯಕ್ತಿತ್ವದ, ಮಾಜಿ ಶಾಸಕರೂ ಹಾಗು ಶಿಕ್ಷಣ ಸಚಿವರಾಗಿ ಅತ್ಯಂತ ಸಮರ್ಥವಾಗಿ ಸೇವೆ ಸಲ್ಲಿಸಿದ್ದ ತಿಪಟೂರಿನ ಬಿ.ಸಿ. ನಾಗೇಶ್ ಅವರ ನಿಧನಕ್ಕೆ ಮಾಜಿ ಶಾಸಕ ಎಂ.ಡಿ ಲಕ್ಷ್ಮೀನಾರಾಯಣ ಸಂತಾಪ ವ್ಯಕ್ತಪಡಿಸಿದ್ದಾರೆ.

# ಪಶು ವೈದ್ಯಾಧಿಕಾರಿ ನೇಮಕಾತಿ ಹಗರಣ: ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್, ಸದಸ್ಯೆ ಶಾಂತಾ ಹೊಸಮನಿ ನಿವಾಸ ಸೇರಿ 21 ಕಡೆ ಇ.ಡಿ ದಾಳಿ



**ಬೆಂಗಳೂರು, ಆ.18:** ಜಾರಿ ನಿರ್ದೇಶನಾಲಯದ ಬೆಂಗಳೂರು ವಲಯದ ಕಚೇರಿ ಅಧಿಕಾರಿಗಳು ಇಂದು, ಪಶು ವೈದ್ಯಾಧಿಕಾರಿಗಳ ಆಯ್ಕೆ, ಅಕ್ರಮಕ್ಕೆ ಸಂಬಂಧಿಸಿದಂತೆ, ಹಣದುರ್ಬಳಕೆ ತಡೆ ಕಾಯಿದೆಯಡಿ, ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರ ನಿವಾಸ ಸೇರಿದಂತೆ, ಬೆಂಗಳೂರಿನ 21 ಕಡೆ ದಾಳಿ ಮತ್ತು ಶೋಧ ಕಾರ್ಯ ನಡೆಸಿದರು. ಇಡಿ ಅಧಿಕಾರಿಗಳು, ಕೆಪಿಎಸ್‌ಸಿಯ ಸದಸ್ಯೆ ಶಾಂತಾ ಹೊಸಮನಿ, ಮಧ್ಯವರ್ತಿಗಳು ಹಾಗೂ ಎಜ್ಯು ಟೆಸ್ಟ್ ಸೊಲ್ಯುಷನ್ ಸಂಸ್ಥೆ ಸೇರಿದಂತೆ, ಹಲವರ ನಿವಾಸ ಹಾಗೂ ಕಚೇರಿಗಳಿಗೆ ತೆರಳಿ, ಶೋಧ ನಡೆಸಿದರು. ಪಶು ವೈದ್ಯಾಧಿಕಾರಿಗಳ ನೇಮಕಕ್ಕೆ ನಡೆಸಿದ ಪರೀಕ್ಷೆಯಲ್ಲಿ, ಸಾಕಷ್ಟು ಅವ್ಯವಹಾರ ನಡೆದಿವೆ ಎಂದು ಹಲವರು ಸಲ್ಲಿಸಿರುವ ದೂರುಗಳನ್ನು ಆಧರಿಸಿ, ಎಫ್.ಐ.ಆರ್ ಗಳನ್ನು ದಾಖಲಿಸಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ, ಒಎಂಆರ್ ಪ್ರತಿ ತಿದ್ದುವುದು ಸೇರಿದಂತೆ, ಹಲವು ಅಕ್ರಮಗಳನ್ನು ನಡೆಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ನಿಬಂಧನೆಗಳ ಅಡಿಯಲ್ಲಿ ಬೆಂಗಳೂರು, ಹಾಸನ, ಚಿತ್ರದುರ್ಗ, ದಾವಣಗೆರೆ, ರಾಯಚೂರು, ಕಾರವಾರ, ಕಲಬುರಗಿ ಹಾಗೂ ಬೆಳಗಾವಿ ಸೇರಿದಂತೆ ಸುಮಾರು 21 ಕಡೆಗಳಲ್ಲಿ ಇ.ಡಿ. ಅಧಿಕಾರಿಗಳು ಶೋಧ ಮತ್ತು ತನಿಖೆ ಮುಂದುವರೆಸಿದ್ದಾರೆ. ಗುಜರಾತ್‌ನ ಅಹಮದಾಬಾದ್‌ನಲ್ಲೂ ಕೆಲವು ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ.

ಬೆಂಗಳೂರಿನ ಪ್ರತಿಷ್ಠಿತ ಡಾಲರ್ಸ್ ಕಾಲೋನಿಯಲ್ಲಿರುವ ಹೊಯ್ಸಳ ಡ್ರಿಂಕ್ಸ್ ಅಪಾರ್ಟ್‌ಮೆಂಟ್‌ನಲ್ಲಿರುವ ಶಿವಶಂಕರಪ್ಪ ಸಾಹುಕಾರ್ ಅವರ ನಿವಾಸದ ಮೇಲೆ ಇ.ಡಿ.ಯ 8 ಅಧಿಕಾರಿಗಳ ತಂಡವು ಏಕಕಾಲಕ್ಕೆ ದಾಳಿ ನಡೆಸಿದೆ. ಬೆಳಿಗ್ಗೆಯಿಂದಲೇ ಮನೆಯೊಳಗೆ ಪ್ರವೇಶಿಸಿರುವ ಅಧಿಕಾರಿಗಳು, ಹಗರಣಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ಪರಿಶೀಲಿಸುತ್ತಿದ್ದು, ಪ್ರಮುಖ ಕಡತಗಳನ್ನು ಮತ್ತು ಡಿಜಿಟಲ್ ಸಾಕ್ಷ್ಯಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಕೆಪಿಎಸ್‌ಸಿ ಮಧ್ಯವರ್ತಿಗಳ ಮನೆಗಳ ಮೇಲೂ ದಾಳಿ ನಡೆದಿದ್ದು, ಬೆಂಗಳೂರು ಸೇರಿದಂತೆ ರಾಜ್ಯದ ಒಟ್ಟು 21 ಕಡೆಗಳಲ್ಲಿ ಏಕಕಾಲಕ್ಕೆ ಶೋಧ ಕಾರ್ಯ ಮುಂದುವರಿದಿದೆ. ಅಧಿಕಾರ ದುರುಪಯೋಗ, ಸ್ವಜನಪಕ್ಷಪಾತ ಹಾಗೂ ನೇಮಕಾತಿ ಪ್ರಕ್ರಿಯೆಗಳಲ್ಲಿ ವ್ಯವಸ್ಥಿತ ಅಕ್ರಮ ಎಸಗಿರುವ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಶಿವಶಂಕರಪ್ಪ ಸಾಹುಕಾರ್ ವಿರುದ್ಧದ ತನಿಖೆ ಈಗ ಮತ್ತಷ್ಟು ತೀವ್ರಗೊಂಡಿದೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಲ್ಲಿ 400 ಪಶುವೈದ್ಯಾಧಿಕಾರಿ ಹುದ್ದೆ?ಗಳ ನೇಮಕಾತಿ ಪ್ರಕ್ರಿಯೆಯಲ್ಲಿ ವ್ಯಾಪಕ ಅಕ್ರಮ ಹಾಗೂ ಹಣಕಾಸು ವಹಿವಾಟು ನಡೆದಿರುವ ಗಂಭೀರ ಆರೋಪಗಳು ಕೇಳಿಬಂದಿದ್ದವು. ಈ ಕುರಿತು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಪ್ರಕರಣದ ತನಿಖೆಯನ್ನು ಅಪರಾಧ ತನಿಖಾ ದಳಕ್ಕೆ ವರ್ಗಾಯಿಸಲಾಗಿತ್ತು. ಓಎಂಆರ್ ಶೀಟ್ ತಿರುಚುವಿಕೆ ಮತ್ತು ಮಧ್ಯವರ್ತಿಗಳ ನಂಟಿನ ಕುರಿತು ತನಿಖೆ ನಡೆಯುತ್ತಿದೆ. ನೇಮಕಾತಿ ವಿವಾದ ಹಾಗೂ ಇತರ ಗಂಭೀರ ಆರೋಪಗಳ ಹಿನ್ನೆಲೆಯಲ್ಲಿ ಜು.13ರಂದು ರಾಜ್ಯಪಾಲರು ಶಿವಶಂಕರಪ್ಪ ಎಸ್.ಸಾಹುಕಾರ್ ಅವರನ್ನು ಕೆಪಿಎಸ್‌ಸಿ ಅಧ್ಯಕ್ಷ ಸ್ಥಾನದಿಂದ ಅಮಾನತುಗೊಳಿಸಿದ್ದರು.

ಕೆಪಿಎಸ್‌ಸಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ತಮ ಕುಟುಂಬದ ಸದಸ್ಯರಿಗೆ ಸರ್ಕಾರಿ ಹುದ್ದೆ?ಗಳನ್ನು ಕೊಡಿಸಲು ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂಬ ಆರೋಪಗಳು ಕೇಳಿಬಂದಿದ್ದವು. ಇದರ ಬೆನ್ನಲ್ಲೇ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ 400 ಪಶುವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಯಲ್ಲಿ ಭಾರೀ ಗೋಲ್‌ಮಾಲ್ ನಡೆದಿದೆ ಎಂಬ ಸ್ಫೋಟಕ ಅಂಶಗಳು ಹೊರಬಿದ್ದವು. ಆಯ್ಕೆ ಪ್ರಕ್ರಿಯೆಯಲ್ಲಿ ಓಎಂಆರ್ ಶೀಟ್‌ಗಳ ತಿದ್ದುಪಡಿ, ಮಧ್ಯವರ್ತಿಗಳ ಹಸ್ತಕ್ಷೇಪ ಮತ್ತು ಆಯ್ದ ಅಭ್ಯರ್ಥಿಗಳಿಗೆ ಅಕ್ರಮವಾಗಿ ಅನುಕೂಲ ಮಾಡಿಕೊಟ್ಟಿರುವ ಕುರಿತು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಪಶುವೈದ್ಯಾಧಿಕಾರಿಗಳ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಸಿಐಡಿ ತಂಡವು, ಅಕ್ರಮದಲ್ಲಿ ಶಾಮೀಲಾಗಿದ್ದಾರೆನ್ನಲಾದ 29 ಅಭ್ಯರ್ಥಿಗಳು ಹಾಗೂ ಸಂಬಂಧಪಟ್ಟ ಮಾಜಿ ಅಧ್ಯಕ್ಷರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲು ಸಿದ್ಧತೆ ನಡೆಸಿದೆ.

### ಸಿಐಡಿ ತನಿಖೆಯ ಬೆನ್ನಲ್ಲೇ ಇ.ಡಿ ಎಂಟ್ರಿ

ಈ ಹಗರಣಕ್ಕೆ ಸಂಬಂಧಿಸಿದಂತೆ ಸಿಐಡಿ ತನಿಖೆಯ ಬೆನ್ನಲ್ಲೇ ಇದೀಗ ಕೇಂದ್ರ ತನಿಖಾ ಸಂಸ್ಥೆಯಾದ ಜಾರಿ ನಿರ್ದೇಶನಾಲಯ ಕೂಡ ಅಖಾಡಕ್ಕಿಳಿದಿದ್ದು, ಅಕ್ರಮ ಹಣ ವರ್ಗಾವಣೆ ಮತ್ತು ಹವಾಲಾ ಜಾಲದ ಬಗ್ಗೆಯೂ ತನಿಖೆ ತೀವ್ರಗೊಳಿಸಿದೆ. ಒಟ್ಟಿನಲ್ಲಿ ಕೆಪಿಎಸ್‌ಸಿ ನೇಮಕಾತಿ ಅಕ್ರಮ ಪ್ರಕರಣವು ರಾಜ್ಯ ರಾಜಕೀಯ ಹಾಗೂ ಶೈಕ್ಷಣಿಕ ವಲಯದಲ್ಲಿ ತೀವ್ರ ಸಂಚಲನ ಮೂಡಿಸಿದೆ.

ಸಾಹುಕಾರ್ ಅವರು ಅಧ್ಯಕ್ಷರಾದಾಗಿನಿಂದ ನಡೆದ ವಿವಿಧ ನೇಮಕಾತಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ಹಣಕಾಸು ಅವ್ಯವಹಾರ ನಡೆದಿದೆ ಎಂಬ ಆರೋಪಗಳು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದವು.

ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ಆಯ್ಕೆ ಮಾಡಲು ಮಧ್ಯವರ್ತಿಗಳು ಪ್ರತಿ ಅಭ್ಯರ್ಥಿಗೆ 85 ಲಕ್ಷ ರೂಪಾಯಿಗಳವರೆಗೆ ಲಂಚದ ಬೇಡಿಕೆ ಇಟ್ಟಿದ್ದಾರೆ ಎಂಬ ಗಂಭೀರ ಆರೋಪವಿತ್ತು. ನೇಮಕಾತಿಯಲ್ಲಿ ಮೋಸಹೋದ ಮತ್ತು ಅನ್ಯಾಯಕ್ಕೊಳಗಾದ ನೊಂದ ಅಭ್ಯರ್ಥಿಗಳು ಒಗ್ಗೂಡಿ ವಿಧಾನಸೌಧ ಪೊಲೀಸ್ ಠಾಣೆಗೆ ಅಧಿಕೃತವಾಗಿ ದೂರು ದಾಖಲಿಸಿದ್ದರು. ಶಿವಶಂಕರಪ್ಪ ಸಾಹುಕಾರ್ ಅವರು ತಮ ಪುತ್ರಿಗೆ ಸಿಗಬಾರದ ಮೀಸಲಾತಿಯನ್ನು ಅಕ್ರಮವಾಗಿ ಒದಗಿಸಿಕೊಂಡಿದ್ದಾರೆ ಎಂಬ ಆರೋಪವೂ ಅವರ ಅಮಾನತಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿತ್ತು.

## ಕೆಪಿಎಸ್‌ಸಿ ಮೇಲೆ ಇ.ಡಿ.ದಾಳಿ ಸ್ವಾಗತಾರ್ಹ, ಸಿಬಿಐ ತನಿಖೆ ಅಗತ್ಯ: ಬಿ.ವೈ.ವಿಜಯೇಂದ್ರ



**ಬೆಂಗಳೂರು, ಆ.18:** ಕರ್ನಾಟಕ ಲೋಕಸೇವಾ ಆಯೋಗದ ಕಚೇರಿ ಮೇಲೆ ನಡೆದಿರುವ ದಾಳಿಯನ್ನು ಬಿಜೆಪಿ ಸ್ವಾಗತಿಸುತ್ತದೆ. ಕೆಪಿಎಸ್‌ಸಿಯಲ್ಲಿ ಹಲವು ವರ್ಷಗಳಿಂದ ಪರೀಕ್ಷೆಗಳು ವಿಳಂಬವಾಗುವುದು, ಫಲಿತಾಂಶ ಪ್ರಕಟಿಸಲು ವರ್ಷಗಟ್ಟಲೆ ಸಮಯ ತೆಗೆದುಕೊಳ್ಳುವುದು ಹಾಗೂ ಸಂದರ್ಶನ ಪ್ರಕ್ರಿಯೆ ವಿಳಂಬವಾಗುವುದು ಸೇರಿದಂತೆ ಅಭ್ಯರ್ಥಿಗಳಿಗೆ ನಿರಂತರ ಅನ್ಯಾಯವಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ. ಲಕ್ಷಾಂತರ ಯುವಕರು ಹಗಲು–ರಾತ್ರಿ ಶ್ರಮಿಸಿ ಪರೀಕ್ಷೆಗಳನ್ನು ಬರೆದು ಫಲಿತಾಂಶಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ. ಅವರ ಭವಿಷ್ಯದ ಜೊತೆ ಆಟವಾಡುವ ವ್ಯವಸ್ಥೆಗೆ ಕಡಿವಾಣ ಹಾಕುವುದು ಸರ್ಕಾರದ ಕರ್ತವ್ಯ. ಕೆಪಿಎಸ್‌ಸಿ ಅಧ್ಯಕ್ಷರು ಅಥವಾ ಸದಸ್ಯರನ್ನು ಯಾವ ಸರ್ಕಾರ ನೇಮಕ ಮಾಡಿತ್ತು ಎಂಬುದು ಮುಖ್ಯವಲ್ಲ. ಯಾವ ಸರ್ಕಾರದ ಅವಧಿಯಲ್ಲಿ ನೇಮಕವಾಗಿದ್ದರೂ, ಅಕ್ರಮ ನಡೆದಿದ್ದರೆ ನಿಷ್ಪಕ್ಷಪಾತ ತನಿಖೆ ನಡೆಯಲೇಬೇಕು. ಈ ಹಿನ್ನೆಲೆಯಲ್ಲಿ ಕೆಪಿಎಸ್‌ಸಿ ಅಕ್ರಮಗಳ ಕುರಿತು ರಾಜ್ಯ ಸರ್ಕಾರ ಕೂಡಲೇ ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಿಸಿದ್ದಾರೆ. ಸರ್ಕಾರಿ ಉದ್ಯೋಗಕ್ಕಾಗಿ ವರ್ಷಗಟ್ಟಲೆ ಕಾಯುತ್ತಿರುವ ಲಕ್ಷಾಂತರ ಅಭ್ಯರ್ಥಿಗಳ ಭವಿಷ್ಯವನ್ನು ರಕ್ಷಿಸಲು ಪಾರದರ್ಶಕ, ನಿಷ್ಪಕ್ಷಪಾತ ಹಾಗೂ ಕಾಲಮಿತಿಯ ನೇಮಕಾತಿ ವ್ಯವಸ್ಥೆಯನ್ನು ರೂಪಿಸಬೇಕು. ಯುವಕರಿಗೆ ನ್ಯಾಯ ಒದಗಿಸುವುದು ಸರ್ಕಾರದ ಜವಾಬ್ದಾರಿ ಎಂದು ವಿಜಯೇಂದ್ರ ತಿಳಿಸಿದ್ದಾರೆ. ಮೂರು ಪ್ರಮುಖ ಬೇಡಿಕೆಗಳಿಗೆ ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಳ್ಳಲಿ. ಹನೂರು ಎನ್‌ಕೌಂಟರ್ ಪ್ರಕರಣದಲ್ಲಿ ನ್ಯಾಯಾಂಗ ತನಿಖೆ, ಮೃತ ಕುಟುಂಬಗಳಿಗೆ ತಲಾ 1 ಕೋಟಿ ಪರಿಹಾರ ಹಾಗೂ ಕುಟುಂಬದ ಒಬ್ಬರಿಗೆ ಸರ್ಕಾರಿ ಉದ್ಯೋಗ, ಮತ್ತು ಕೆಪಿಎಸ್‌ಸಿ ಅಕ್ರಮಗಳ ಕುರಿತು ಸಿಬಿಐ ತನಿಖೆ–ಈ ಮೂರು ಪ್ರಮುಖ ವಿಚಾರಗಳಲ್ಲಿ ರಾಜ್ಯ ಸರ್ಕಾರ ಕೂಡಲೇ ಸ್ಪಷ್ಟ ಹಾಗೂ ನ್ಯಾಯಸಮ್ಮತ ನಿರ್ಧಾರ ಕೈಗೊಳ್ಳಬೇಕು. ಸತ್ಯ ಹೊರಬರಬೇಕು. ತಪ್ಪಿತಸ್ಥರು ಯಾರೇ ಆಗಿದ್ದರೂ ಕಾನೂನಿನ ಮುಂದೆ ನಿಲ್ಲಬೇಕು. ಮೃತ ಕುಟುಂಬಗಳಿಗೆ ನ್ಯಾಯ ದೊರಕಬೇಕು. ಯುವಕರ ಭವಿಷ್ಯವನ್ನು ರಕ್ಷಿಸಬೇಕು. ಇದೇ ಬಿಜೆಪಿಯ ಸ್ಪಷ್ಟ ಆಗ್ರಹ ಎಂದು ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.



ಟಿಬೆಟ್ ಸಂಸದ ಚೋಪೆಲ್ ಥುಪೆನ್ ಅವರು ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರಿನಲ್ಲಿ ಮಂಗಳವಾರ ಭೇಟಿ ಮಾಡಿದ್ದರು.

## ರಾಷ್ಟ್ರ ನಿರ್ಮಾಣದಲ್ಲಿ ಇಂಜಿನಿಯರ್‌ಗಳದ್ದು ಮಹತ್ವದ ಪಾತ್ರ, ಗುಣಮಟ್ಟಕ್ಕೆ ಆದ್ಯತೆ ನೀಡಿ: ಸಚಿವ ಖಂಡ್ರೆ ಸಲಹೆ

**ಬೆಂಗಳೂರು, ಆ.18:** ರಾಷ್ಟ್ರ ನಿರ್ಮಾಣದಲ್ಲಿ ಎಂಜಿನಿಯರುಗಳ ಪಾತ್ರ ಮಹತ್ವದ್ದಾಗಿದ್ದು, ಸದಾ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ಪ್ರತಿಪಾದಿಸಿದ್ದಾರೆ. ವಿಧಾನಸೌಧದಲ್ಲಿಂದು ನೂತನವಾಗಿ ಆಯ್ಕೆಯಾಗಿರುವ 13 ಸಹಾಯಕ ಎಂಜಿನಿಯರುಗಳು ಮತ್ತು 40 ಕಿರಿಯ ಎಂಜಿನಿಯರುಗಳಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಎಂಜಿನಿಯರುಗಳು ರಾಷ್ಟ್ರ ನಿರ್ಮಾತೃಗಳಾಗಿದ್ದು, ಅವರು ವಿನ್ಯಾಸ ಮಾಡುವ ಅಣೆಕಟ್ಟೆ, ವಿಮಾನ ನಿಲ್ದಾಣ, ರೈಲುನಿಲ್ದಾಣ, ರಸ್ತೆ, ಸೇತುವೆ ಇತ್ಯಾದಿ ಗಟ್ಟಿಮುಟ್ಟಾಗಿ, ದೀರ್ಘಾವಧಿ ಬಾಳಿಕೆ ಬಂದರೆ, ಜನ ಅವರನ್ನು ಖಂಡಿತಾ ಸ್ಮರಿಸುತ್ತಾರೆ ಎಂದರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಹೊಸದಾಗಿ ಎಂಜಿನಿಯರುಗಳಾಗಿ ನೇಮಕಗೊಂಡಿರುವ ನಿಮಗೆ ಮಹಾತ್ಮಾ ಗಾಂಧೀ ಅವರ ಕನಸಿನ ಗ್ರಾಮ ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿಯ ಅವಕಾಶ ಸಿಕ್ಕಿದೆ. ನೀವು ಪ್ರಾಮಾಣಿಕತೆಯಿಂದ ದಕ್ಷತೆಯಿಂದ ಮತ್ತು ಸಮರ್ಪಣಾ ಮನೋಭಾವದಿಂದ ಕೆಲಸ ಮಾಡಿದರೆ ಪ್ರತಿಯೊಂದು ಹಳ್ಳಿಯೂ ಅಭಿವೃದ್ಧಿ ಆಗುತ್ತದೆ ಎಂದರು.

ಶ್ರೇಷ್ಠ ಎಂಜಿನಿಯರ್ ಯಾರು ಎಂದರೆ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಹೆಸರು ಹೇಳುತ್ತೇವೆ. ಸರ್.ಎಂ.ವಿ. ನಮ್ಮನ್ನಗಲಿ 65 ವರ್ಷವಾದರೂ ನಾವು ಅವರನ್ನು ಸ್ಮರಿಸುತ್ತೇವೆ. ಸಾಧಕರನ್ನು ಮತ್ತು ಪ್ರಾಮಾಣಿಕರನ್ನು ಸಮಾಜ ಸದಾ ಕೃತಜ್ಞತೆಯಿಂದ ನೆನೆಯುತ್ತದೆ. ನೀವೂ ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿ ಜಗತ್ತು ಸ್ಮರಿಸುವಂತೆ ಮಾಡಿ ಎಂದು ಈಶ್ವರ ಖಂಡ್ರೆ ಹೇಳಿದರು.

ನಾಗರಿಕತೆ ಬೆಳೆಯಲು ಎಂಜಿನಿಯರುಗಳು ಕಾರಣ. ಆಧುನಿಕ ಯುಗಮಾನದ ಅವಶ್ಯಕತೆಯನ್ನು ಅವರು ಪೂರೈಸುತ್ತಿದ್ದಾರೆ. ಇಲಾಖೆಯ ಎಂಜಿನಿಯರುಗಳು ಕೆಲಸದಲ್ಲಿ ರಾಜೀ ಮಾಡಿಕೊಳ್ಳಬಾರದು. ನೂರಾರು ವರ್ಷ ಬಾಳಿಕೆ ಬರುವಂತಹ ಶಾಶ್ವತ ಆಸ್ತಿಗಳನ್ನು ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸಬೇಕು. ಭವಿಷ್ಯದ ಚಿಂತನೆ ಇರಬೇಕು. ನೀವು ಇಂದು ಮಾಡುವ ವಿನ್ಯಾಸ, ಮುಂದಿನ 30 ವರ್ಷಗಳಲ್ಲಿ ಆಗಬಹುದಾದ ಜನಸಂಖ್ಯೆಯ ಹೆಚ್ಚಳ, ವಾಹನಗಳ ಒತ್ತಡ ಹೀಗೆ ಎಲ್ಲವನ್ನೂ ಒಳಗೊಂಡಿರಬೇಕು. ನೀವು ನಿರ್ಮಿಸುವ ಓವರ್‌ಹೆಡ್ ಟ್ಯಾಂಕ್ ಗಳಿರಲಿ, ಕೊಳವೆ ಮಾರ್ಗವಿರಲಿ ಗಟ್ಟಿಯಾಗಿ ನಿಲ್ಲಬೇಕು. ಜನ ಮೆಚ್ಚುವಂತೆ ಇರಬೇಕು ಎಂದು ತಿಳಿಸಿದರು. ಎಲ್ಲ ನಾಗರಿಕತೆಗಳೂ ಹುಟ್ಟಿದ್ದು ನದಿಗಳ ತಟದಲ್ಲಿ. ಮನುಷ್ಯ ನೀರಿಲ್ಲದೆ ಬದುಕಲು ಸಾಧ್ಯವೇ ಇಲ್ಲ. ನೀರು ಅಮೃತ ಸಮಾನ. ಆದರೆ ಇಂದು ನದಿ, ಕೆರೆ, ಕುಂಟೆ ಎಲ್ಲವೂ ಕಲುಷಿತವಾಗುತ್ತಿದೆ. ಜಲ ಮೂಲಗಳು ಹಾಳಾಗದಂತೆಎಚ್ಚರ ವಹಿಸಬೇಕು. ಮುಂದಿನ 30 ವರ್ಷಗಳ ನೀರಿನ ಅಗತ್ಯವನ್ನು ಮನಗಂಡು ಯೋಜನೆ ರೂಪಿಸಬೇಕು ಎಂದರು.

ನೀರಿಗಾಗಿ ಯುದ್ಧ ನಡೆಯುತ್ತದೆ ಎಂದು ಹಿರಿಯರು ಹೇಳುತ್ತಿದ್ದರು. ಅದನ್ನು ನಾವು ನೋಡುತ್ತಿದ್ದೇವೆ. ಕಾವೇರಿ, ಕೃಷ್ಣ ಮಹಾದಾಯಿಗಾಗಿ ನೆರೆ ರಾಜ್ಯಗಳೊಂದಿಗೆ ಸಂಘರ್ಷ ನಡೆಯುತ್ತಿದೆ. ಪಾಕಿಸ್ತಾನ– ಭಾರತ ನಡುವೆಯೂ ನದಿ ನೀರಿಗಾಗಿ ಹೋರಾಟ ಇದೆ. ಹೀಗಾಗಿ ಜೀವಜಲ ನೀರಿನ ಸಂರಕ್ಷಣೆ ಆಗಬೇಕು ಎಂದರು. ರಾಜ್ಯದ ಅರ್ಧದಷ್ಟು ಜನ ಗ್ರಾಮೀಣ ಪ್ರದೇಶದಲ್ಲಿದ್ದು, ಪ್ರತಿಯೊಬ್ಬರಿಗೂ ಪ್ರತಿ ನಿತ್ಯ 100 ಲೀಟರ್ ನೀರು ಪೂರೈಸಬೇಕಾಗುತ್ತದೆ ಇಲ್ಲವೇ ಕನಿಷ್ಠ 55 ಲೀಟರ್ ಆದರೂ ಪೂರೈಕೆ ಮಾಡಬೇಕು. ಈ ನಿಟ್ಟಿನಲ್ಲಿ ಎಂಜಿನಿಯರುಗಳ ಯೋಜನೆ ಅತ್ಯಂತ ಮಹತ್ವದ್ದು ಎಂದರು.

Managing Editor : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಆಗಸ್ಟ್ 19, 2026, ಬುಧವಾರ

## ಒಳಪುಟಗಳಲ್ಲಿ

ಪ್ರತಿಭಟನಾನಿರತರ ಜತೆ ಜಾರ್ಖಂಡ್ ಸರ್ಕಾರದ ಸಂಧಾನ: ರಾಹುಲ್ ಗಾಂಧಿ ಸ್ವಾಗತ- ಪು.4

ಫ್ರೀಡಂ ಪಾರ್ಕ್‌ನಲ್ಲಿ ರೈತರ ರಣಕಹಳೆ: ಬಿಡದಿ ಟೌನ್‌ಶಿಪ್, ಸ್ಮೈಸ್ ಯೋಜನೆ ಅಕ್ರಮದಲ್ಲಿ ಡಿಕೆಶಿ ನೇರ ಶಾಮೀಲು: ಎಚ್.ಡಿ.ಕೆ ವಾಗ್ದಾಳಿ- ಪು.5

# ಸಚಿವ ನಾಗೇಂದ್ರ ಕೈಬಿಡುವಂತೆ ಎರಡನೇ ದಿನವೂ ಪ್ರತಿಪಕ್ಷಗಳ ಆಗ್ರಹ

**ಬೆಂಗಳೂರು, ಆ.18:** ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ಅಕ್ರಮವಾಗಿ ಹಣ ವರ್ಗಾವಣೆ ಪ್ರಕರಣದಲ್ಲಿ ಆರೋಪಿಯಾಗಿರುವ ಸಚಿವ ಬಿ. ನಾಗೇಂದ್ರ ಅವರನ್ನು ಮಂತ್ರಿಮಂಡಲದಿಂದ ಕೈಬಿಡಬೇಕೆಂದು ವಿಪಕ್ಷ ಸದಸ್ಯರು ವಿಧಾನಮಂಡಲದಲ್ಲಿ ಆಗ್ರಹಿಸಿದರು. ಉಭಯ ಸದನಗಳಲ್ಲಿ ಎರಡನೇ ದಿನವಾದ ಮಂಗಳವಾರವೂ ಬಿ. ನಾಗೇಂದ್ರ ವಿಚಾರ ಪ್ರತಿಧ್ವನಿಸಿತು.

ವಿಧಾನಸಭೆಯಲ್ಲಿ ಭೋಜನ ವಿರಾಮದ ನಂತರ ಸದನ ಸೇರಿದಾಗ ಪ್ರತಿ ಪಕ್ಷಗಳು ಸದಸ್ಯರು ಮತ್ತೆ ಸಚಿವ ನಾಗೇಂದ್ರ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಸಭಾಪತಿ ಜಿಎಸ್ ಪಾಟೀಲ್ ಅವರು ಸದನ ನಡೆಯಲು ಅವಕಾಶ ನೀಡಬೇಕೆಂದು ಪ್ರತಿಪಕ್ಷಗಳ ಸದಸ್ಯರಲ್ಲಿ ಪದೇಪದೇ ಮನವಿ ಮಾಡಿದರು.

ಆಗ ಪ್ರತಿಪಕ್ಷದ ನಾಯಕ ಆರ್ ಅಶೋಕ್, ನಾವು ಸದನ ನಡೆಸಲು ಅಡ್ಡಿಪಡಿಸುವುದಿಲ್ಲ. ಅವರು ಸ್ಥಾನದಲ್ಲಿರುವ ಸಚಿವ ನಾಗೇಂದ್ರ ಅವರು ಮೊದಲು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇದು ನಮ್ಮ ಸ್ಪಷ್ಟ ನಿಲುವು. ಇಲ್ಲದಿದ್ದರೆ ನಮ್ಮ ನಿರ್ಧಾರದಿಂದ ಹಿಂದಿ ಸರಿಯುವುದಿಲ್ಲ ಎಂದರು. ಈ ವೇಳೆ ಸಚಿವ ಕೃಷ್ಣ ಬೈರೇಗೌಡರು ರಾಜ್ಯದಲ್ಲಿ ಸಾಕಷ್ಟು ಸಮಸ್ಯೆಗಳು ಇವೆ. ಬರಗಾಲದ ಬಗ್ಗೆ ಅನೇಕ ಸದಸ್ಯರು ಚರ್ಚೆ ನಡೆಸಬೇಕು .ಸರ್ಕಾರ ಇದಕ್ಕೆ ಉತ್ತರ ಕೊಡಬೇಕು ಪ್ರತಿಪಕ್ಷದ ಸದಸ್ಯರು ಮೊದಲು ಒಂದು ನೋಟಿಸ್ ನೀಡಲಿ ನಂತರ ಅದಕ್ಕೆ ಸಮರ್ಪಕವಾದ ಉತ್ತರ ನೀಡಲಿದೆ ಎಂದು ಹೇಳಿದರು.

ಸದನದಲ್ಲಿ ಮತ್ತೆ ಗಲಾಟೆ ಉಂಟಾದಾಗ ಸಭಾಧ್ಯಕ್ಷರು ಪುನಃ ಸದನವನ್ನು ಕೆಲ ಹೊತ್ತು ಮುಂದೂಡಿದರು. ಬಳಿಕ ಸದನ ಸೇರಿದಾಗ ಪ್ರತಿಪಕ್ಷಗಳು ಸದಸ್ಯರ ಪ್ರತಿಭಟನೆಯ ನಡುವೆ ಸದನದಲ್ಲಿ ಕಾಗದಪತ್ರಗಳು, ಗಮನ ಸೆಳೆಯುವ ಸೂಚನೆಗಳು ಮಂಡಿಸಲಾಯಿತು. ಈ ವೇಳೆ ಹಲವಾರು ಸದಸ್ಯರು ಸಂಬಂಧಪಟ್ಟ ಸಚಿವರಿಗೆ ಕೆಲವು ಗಮನ ಸೆಳೆಯುವ ಪ್ರಶ್ನೆಗಳನ್ನು ಕೇಳಿ ಸಚಿವರಿಂದ ಉತ್ತರ ಪಡೆದುಕೊಂಡರು. ಉಪಮುಖ್ಯಮಂತ್ರಿ ಡಾ.ಜಿ ಪರಮೇಶ್ವರ್ ಅವರು 2026ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ, 2026ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ, ಹಾಗೂ 2026 ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರ ಮಂಡನೆ ಮಂಡಿಸಿದರು.

ಗದ್ದಲದ ನಡುವೆಯೇ ಸಭಾಪತಿ ಜಿಎಸ್ ಪಾಟೀಲ್ ಅವರು ವಿವೇಕಗಳನ್ನು ಅಂಗೀಕಾರವಾಗಿದೆ ಎಂದು ಘೋಷಿಸಿದರು.

### ಗದ್ದಲದ ನಡುವೆ ವಿಧಾನಸಭೆಯಲ್ಲಿ ಮೂರು ವಿಧೇಯಕಗಳಿಗೆ ಅಂಗೀಕಾರ



### ಮೇಲ್ಮನೆಯಲ್ಲಿ ಪಟ್ಟು

ಸಚಿವ ಬಿ. ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡುವಂತೆ ಆಗ್ರಹಿಸಿ ಪ್ರತಿಪಕ್ಷ ಸದಸ್ಯರು ಮೇಲ್ಮನೆಯಲ್ಲಿಂದು ಮತ್ತೆ ಪಟ್ಟು ಹಿಡಿದರು. ಭೋಜನ ವಿರಾಮದ ನಂತರ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಳ್ಳಲು ಸಭಾಪತಿ ಸಲೀಂ ಅಹ್ಮದರ್ ಮುಂದಾದರು. ಈ ವೇಳೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮೊದಲು ಕಳಂಕಿತ ಸಚಿವ ಬಿ.ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡಬೇಕು. ಅಲ್ಲಿಯವರೆಗೂ ನಾವು ಹೋರಾಟ ಮುಂದುವರೆಸುತ್ತೇವೆ ಎಂದರು. ಆಗ ಸಲೀಂ ಅಹ್ಮದ್ ಅವರು, ನಾನು ಚರ್ಚೆಗೆ ಅವಕಾಶ ನೀಡುತ್ತೇನೆ. ಇತ್ತ ಆಡಳಿತಾರೂಢ ಸದಸ್ಯರು ಬಿ.ನಾಗೇಂದ್ರ ವಿರುದ್ಧ ಯಾವುದೇ ಆರೋಪ ಸಾಬೀತು ಆಗಿಲ್ಲ. ಉದ್ದೇಶ ಪೂರಕವಾಗಿ ಗುರಿಯಾಗಿಸಲಾಗಿದೆ ಎಂದು ಗದ್ದಲ ಎಬ್ಬಿಸಿದರು. ಈ ವೇಳೆ ಬಿಜೆಪಿ ಸದಸ್ಯರು ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ಈ ಹಂತದಲ್ಲಿ ಪ್ರತಿಪಕ್ಷ ಸದಸ್ಯರು ಗದ್ದಲ ಹೆಚ್ಚಿಸಿದ ಹಿನ್ನೆಲೆ ಸಭಾಪತಿ ಅವರು ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದರು. ಆನಂತರ ಸದನ ಸೇರಿದಾಗ ಆಡಳಿತ ಹಾಗೂ ಪ್ರತಿಪಕ್ಷಗಳು ಪರಸ್ಪರ ಘೋಷಣೆ, ಟೀಕೆ, ವಾಗ್ದಾಳಿ ಮುಂದುವರೆಸಿದ ಹಿನ್ನೆಲೆ ಸದನವನ್ನು ಬುಧವಾರ ಬೆಳಗ್ಗೆ 11 ಗಂಟೆಗೆ ಮುಂದೂಡಿದರು.

# ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಒಬ್ಬ ಆರ್‌ಎಸ್‌ಎಸ್ ನಾಯಕನ ಹೆಸರು ಹೇಳಿ: ಖರ್ಗೆ ಸವಾಲು



**ನವದೆಹಲಿ, ಆ.18:** ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕೊಡುಗೆಯನ್ನು ಪ್ರಶ್ನಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಆರ್‌ಎಸ್‌ಎಸ್‌ನ ಒಬ್ಬ ನಾಯಕನ ಹೆಸರನ್ನಾದರೂ ಹೇಳಿ ಎಂದು ಸವಾಲೆಸೆದಿರುವ ಖರ್ಗೆ, ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಾಗವಹಿಸದ ಆರ್‌ಎಸ್‌ಎಸ್ ಹಾಗೂ ಬಿಜೆಪಿ ನಾಯಕರು ಇಂದು ಕಾಂಗ್ರೆಸ್‌ಗೆ ದೇಶಭಕ್ತಿಯ ಪಾಠ ಹೇಳಲು ಮುಂದಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕ್ವಿಟ್ ಇಂಡಿಯಾ ಚಳವಳಿಯ ಐತಿಹಾಸಿಕ ದಿನಗಳನ್ನು ಸ್ಮರಿಸಿದ ಖರ್ಗೆ, ಮಹಾತ್ಮ ಗಾಂಧೀಜಿಯವರ ಮಾಡು ಇಲ್ಲವೇ ಮಡಿ' ಕರೆಗೆ ಇಡೀ ದೇಶವೇ ಸ್ಪಂದಿಸಿ ಹೋರಾಟಕ್ಕೆ ಧುಮುಕಿದ್ದಾಗ ಆರ್‌ಎಸ್‌ಎಸ್ ಬ್ರಿಟಿಷರ ಪರವಾಗಿ ನಿಂತಿತ್ತು ಮತ್ತು ಹೋರಾಟದಿಂದ ದೂರ ಉಳಿದಿತ್ತು ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ಲಕ್ಷಾಂತರ ಕಾರ್ಯಕರ್ತರು ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮತ್ತು ಜೈಲು ವಾಸ ಅನುಭವಿಸಿದ್ದಾರೆ, ಆದರೆ ಆರ್‌ಎಸ್‌ಎಸ್‌ನಿಂದ ಅಂತಹ ಯಾವುದೇ ಕೊಡುಗೆ ಸಿಕ್ಕಿಲ್ಲ ಎಂದು ಪ್ರತಿಪಾದಿಸಿದರು. ರಾಜ್ಯ ಸಚಿವ ಪ್ರಿಯಾಂಕ್ ಖರ್ಗೆ ಕೂಡ ಆರ್‌ಎಸ್‌ಎಸ್ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರವೇನು ಎಂದು ಪ್ರಶ್ನಿಸಿದ್ದು, ಸೈದ್ಧಾಂತಿಕ ಚರ್ಚೆಯನ್ನು ಮತ್ತಷ್ಟು ಕಾವೇರಿಸಿದ್ದಾರೆ.

ಮತ್ತೊಂದೆಡೆ ಕಾಂಗ್ರೆಸ್‌ನ ಈ ಸವಾಲು ಮತ್ತು ಆರೋಪಗಳಿಗೆ ತಿರುಗೇಟು ನೀಡಿರುವ ಬಿಜೆಪಿ ನಾಯಕರು, ದೇಶ ಸೇವೆ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಆರ್‌ಎಸ್‌ಎಸ್‌ನ ಸ್ವಯಂಸೇವಕರ ಕೊಡುಗೆ ಅನನ್ಯವಾದದ್ದು ಮತ್ತು ಕಾಂಗ್ರೆಸ್ ರಾಜಕೀಯ ಲಾಭಕ್ಕಾಗಿ ಇತಿಹಾಸವನ್ನು ತಿರುಚುತ್ತಿದೆ ಎಂದು ಪ್ರತ್ಯಾರೋಪ ಮಾಡಿದ್ದಾರೆಯೇ ಹೊರತು ಯಾರೊಬ್ಬರ ಹೆಸರನ್ನು ಗುರುತಿಸುತ್ತಿಲ್ಲ.

# ಉಪಸಭಾಪತಿಯಾಗಿ ಉಮಾಶ್ರೀ, ಉಪಸಭಾಧ್ಯಕ್ಷರಾಗಿ ಮಂಕಾಳ ವೈದ್ಯ ಅವಿರೋಧ ಆಯ್ಕೆ





**ಬೆಂಗಳೂರು, ಆ.18:** ನಿರೀಕ್ಷೆಯಂತೆ ಮೇಲ್ಮನೆ ಉಪಸಭಾಪತಿಯಾಗಿ ಮಾಜಿ ಸಚಿವೆ ಉಮಾಶ್ರೀ ಹಾಗೂ ವಿಧಾನಸಭೆ ಉಪಸಭಾಧ್ಯಕ್ಷರಾಗಿ ಮಾಜಿ ಸಚಿವ ಮಂಕಾಳ ವೈದ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿಧಾನಪರಿಷತ್‌ನಲ್ಲಿ ಕಲಾಪ ಪ್ರಾರಂಭವಾಗುತ್ತಿದ್ದಂತೆ ಸಭಾಪತಿ ಸಲೀಂ ಅವರು ಉಪಸಭಾಪತಿ ಸ್ಥಾನಕ್ಕೆ ಚುನಾವಣಾ ಪ್ರಕ್ರಿಯೆ ಆರಂಭಿಸಿದರು. ಸಭಾನಾಯಕ ಡಾ.ಯತೀಂದ್ರ ಅವರು ಉಮಾಶ್ರೀ ಅವರ ಹೆಸರನ್ನು ಪ್ರಸ್ತಾವನೆ ಮಾಡಿದರು. ಈ ಪ್ರಸ್ತಾವನೆಗೆ ಸದಸ್ಯರಾದ ಎಫ್.ಎಚ್. ಜಕ್ಕಪ್ಪನವರ್, ಪಿ.ಸಿ.ಮೋಹನ್, ಬಸನಗೌಡ ಬಾದರ್ಲಿ, ಎ.ವಿ.ಗಾಯತ್ರಿ ಶಾಂತೇಗೌಡ, ಜಗದೇವ್ ಗುತ್ತೇದಾರ್, ರಾಮೋಜಿ ಗೌಡ ಹಾಗೂ ರಾಜಣ್ಣ ಅವರು ಸೂಚಿಸಿದರು. ಸದಸ್ಯರ ಅನುಮೋದನೆಯನ್ನು ಕಾಂಗ್ರೆಸ್ ಸದಸ್ಯರಾದ ಡಾ.ಆರತಿ ಕೃಷ್ಣ ಅವರು ಅನುಮೋದಿಸಿದರು. ಬಳಿಕ ಸಭಾಪತಿ ಸಲೀಂ ಅವರು ಉಮಾಶ್ರೀ ಅವರು ಉಪಸಭಾಪತಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಅಧಿಕೃತವಾಗಿ ಘೋಷಣೆ ಮಾಡಿದರು. ಉಮಾಶ್ರೀ ಅವರನ್ನು ಸದನವು ಪಕ್ಷಭೇದ ಮರೆತು ಅಭಿನಂದಿಸಿತು. ಮಾಜಿ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಯು.ಟಿ.ಖಾದರ್, ಜೆಡಿಎಸ್ ಸದಸ್ಯ ಭೋಜೇಗೌಡ, ಟಿ.ಎ.ಶರವಣ ಮತ್ತಿತರರು ಅಭಿನಂದಿಸಿದರು.

ವಿಧಾನಸಭೆಯ ಕಲಾಪ ಆರಂಭವಾಗುತ್ತಿದ್ದಂತೆ, ಸ್ಪೀಕರ್ ಜಿ.ಎಸ್. ಪಾಟೀಲ್, ಉಪಸಭಾಧ್ಯಕ್ಷರ ಚುನಾವಣಾ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಪಾಧ್ಯಕ್ಷರ ಸ್ಥಾನಕ್ಕೆ ಮಂಕಾಳ ವೈದ್ಯ ಅವರ ಹೆಸರನ್ನು ಸೂಚಿಸಿದರು. ಸಚಿವ ಲಕ್ಷ್ಮಣ ಸವದಿ, ಆ ಪ್ರಸ್ತಾವವನ್ನು ಅನುಮೋದಿಸಿದರು.ಮಂಕಾಳ ವೈದ್ಯ ಅವರೊಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ, ಅವರನ್ನು ಧ್ವನಿಮತದ ಮೂಲಕ ಆಯ್ಕೆ ಮಾಡಲಾಗಿದೆ ಎಂದು ಸ್ಪೀಕರ್ ಪ್ರಕಟಿಸಿದರು. ನಂತರ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಸೇರಿದಂತೆ ಎಲ್ಲ ಸದಸ್ಯರು, ಮಂಕಾಳ ವೈದ್ಯ ಅವರನ್ನು ಅಭಿನಂದಿಸಿದರು.

# ಗಣಿಗಾರಿಕೆ – ಖನಿಜಗಳ ತಿದ್ದುಪಡಿ ಮಸೂದೆ ಹಿಂಪಡೆಯಲು ಆಗ್ರಹ



■ ರಾಜ್ಯಗಳ ಖನಿಜ ಹಕ್ಕುಗಳಿಗೆ ಧಕ್ಕೆ: ಪ್ರಧಾನಿ ಹಾಗೂ ಗಣಿಸಚಿವರಿಗೆ ಡಿಸಿಎಂ ಡಾ.ಜಿ. ಪರಮೇಶ್ವರ್ ಪತ್ರ

**ಬೆಂಗಳೂರು, ಆ.18:** ಗಣಿಗಾರಿಕೆ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ 2026ರಿಂದ ರಾಜ್ಯಗಳ ಖನಿಜ ಹಕ್ಕುಗಳಿಗೆ ಧಕ್ಕೆಯಾಗಲಿದೆ. ಕೂಡಲೇ ಕೇಂದ್ರ ಸರ್ಕಾರ ಈ ಮಸೂದೆಯನ್ನು ಹಿಂಪಡೆಯಬೇಕು ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಆಗ್ರಹಿಸಿದ್ದಾರೆ.

ಈ ಸಂಬಂಧ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಜಿ. ಕಿಶನ್‌ರೆಡ್ಡಿ ಅವರಿಗೆ ಪತ್ರ ಬರೆದಿದ್ದಾರೆ.

ಮಸೂದೆಯಲ್ಲಿರುವ ಕೆಲವು ಪ್ರಸ್ತಾವನೆಗಳು ಖನಿಜ ಹಕ್ಕುಗಳು ಮತ್ತು ಖನಿಜ ಸಂಪತ್ತು ಹೊಂದಿರುವ ಭೂಮಿಯ ಮೇಲಿನ ತೆರಿಗೆ ವಿಧಿಸುವ ರಾಜ್ಯಗಳ ಅಧಿಕಾರವನ್ನು ಸೀಮಿತಗೊಳಿಸುತ್ತವೆ. ಖನಿಜ ಸಂಪನ್ಮೂಲಗಳ ವಿಚಾರದಲ್ಲಿ ರಾಜ್ಯಗಳಿಗೆ ಸಂವಿಧಾನ ನೀಡಿರುವ ಅಧಿಕಾರವನ್ನು ಕೇಂದ್ರದ ಪ್ರಸ್ತಾವನೆ ದುರ್ಬಲಗೊಳಿಸಲಿದೆ ಎಂದು ಹೇಳಿದ್ದಾರೆ.

ಸಂವಿಧಾನದ ರಾಜ್ಯಪಟ್ಟಿಯ 49 ಮತ್ತು 50ನೇ ನಮೂದುಗಳು ಖನಿಜಗಳ ಮೇಲಿನ ಶಾಸನಾತ್ಮಕ ಹಾಗೂ ಆರ್ಥಿಕ ಅಧಿಕಾರವನ್ನು ರಾಜ್ಯಗಳಿಗೆ ನೀಡಿವೆ. ಇದೇ ವಿಚಾರದಲ್ಲಿ 2024ರ ಸುಪ್ರೀಂ ಕೋರ್ಟ್ ತೀರ್ಪು ರಾಜ್ಯಗಳ ಹಕ್ಕನ್ನು ಮತ್ತಷ್ಟು ಸ್ಪಷ್ಟಪಡಿಸಿದೆ ಎಂದು ಪತ್ರದಲ್ಲಿ ಗಮನ ಸೆಳೆದಿದ್ದಾರೆ.

ಮಸೂದೆಯ ವಿಚಾರದಲ್ಲಿ ರಾಜ್ಯ ಸರ್ಕಾರಗಳೊಂದಿಗೆ ಸಮರ್ಪಕ ಚರ್ಚೆ ನಡೆಸದೆ ಕೇಂದ್ರ ಕೈಗೊಳ್ಳುತ್ತಿರುವ ಕ್ರಮ ಒಕ್ಕೂಟ ವ್ಯವಸ್ಥೆಯ ಮೂಲ ಆಶಯಕ್ಕೆ ವಿರುದ್ಧವಾಗಿದೆ. ಇಂತಹ ನಿರ್ಧಾರಗಳು ರಾಜ್ಯಗಳ ಆರ್ಥಿಕ ಸ್ವಾಯತ್ತತೆಯ ಮೇಲೂ ಪರಿಣಾಮ ಬೀರಬಹುದು ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಮಸೂದೆಯನ್ನು ಹಿಂಪಡೆದು ಎಲ್ಲಾ ರಾಜ್ಯಗಳೊಂದಿಗೆ ಸಮಾಲೋಚನೆ ನಡೆಸಬೇಕು. ಖನಿಜ ಕ್ಷೇತ್ರದ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುವುದರ ಜೊತೆಗೆ ರಾಜ್ಯಗಳ ಸಾಂವಿಧಾನಿಕ ಹಾಗೂ ಆರ್ಥಿಕ ಹಕ್ಕುಗಳಿಗೆ ಯಾವುದೇ ಧಕ್ಕೆಯಾಗದಂತೆ ಹೊಸ ಚೌಕಟ್ಟು ರೂಪಿಸಬೇಕು ಎಂದು ಮನವಿ ಮಾಡಿದ್ದಾರೆ.


# ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಪೂರ್ಣ ಹಾಡಲ್ಲ

**ನವದೆಹಲಿ, ಆ.18:** ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಗೀತೆಯನ್ನು ಪೂರ್ಣವಾಗಿ ಹಾಡುವುದಿಲ್ಲ. ಎರಡು ಪ್ಯಾರಾಗಳನ್ನಷ್ಟೇ ಹಾಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸ್ಪಷ್ಟಪಡಿಸಿದ್ದಾರೆ. ವಂದೇ ಮಾತರಂಗೆ ಕಾಂಗ್ರೆಸ್ ವಿರೋಧವಿಲ್ಲ ಎಂದಿರುವ ಅವರು, ಬಂಕಿಮಚಂದ್ರ ಚಟರ್ಜಿ ಬರೆದಿರುವ ಗೀತೆಯ ಎರಡು ಪ್ಯಾರಾಗಳನ್ನು ಮಾತ್ರ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಹಾಡುತ್ತೇವೆ ಎಂದು ಹೇಳಿದ್ದಾರೆ.

ಸೋನಿಯಾ ಗಾಂಧಿ ಅವರು ವಂದೇ ಮಾತರಂಗೆ ಅಪಮಾನ ಮಾಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಪ್ರತಿಕ್ರಿಯಿಸಿದ ಹರಿಪ್ರಸಾದ್, ನೇಣುಹಾಕಿದರೂ, ಜೈಲಿಗೆ ಹಾಕಿದರೂ ನಾವು ಹಾಡುವುದು ಎರಡು ಪ್ಯಾರಾ ಎಂದು ಹೇಳಿದ್ದಾರೆ.

ವಂದೇ ಮಾತರಂ ಅನ್ನು ಕಡ್ಡಾಯಗೊಳಿಸುವ ಮೂಲಕ ರಾಷ್ಟ್ರಗೀತೆ ಜನಗಣಮನವನ್ನು ಎರಡನೇ ದರ್ಜೆಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ಅವರು ಆರೋಪಿಸಿದರು. ರಾಷ್ಟ್ರಗೀತೆ, ರಾಷ್ಟ್ರಧ್ವಜ ಹಾಗೂ ರಾಷ್ಟ್ರಚಿಹ್ನೆಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅಪಮಾನ ಮಾಡಿದೆ ಎಂದು ಟೀಕಿಸಿದರು.

### ಸೋನಿಯಾ ಗಾಂಧಿ ವಿರುದ್ಧದ ಆರೋಪ ಆರ್‌ಎಸ್‌ಎಸ್ ಕುತಂತ್ರ: ಬಿ.ಕೆ. ಹರಿಪ್ರಸಾದ್



ನಾವು ವಂದೇ ಮಾತರಂ ವಿರುದ್ಧ ಇಲ್ಲ. ಆದರೆ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆ ಹಾಡುವುದಿಲ್ಲ. ಎರಡು ಪ್ಯಾರಾಗಳನ್ನು ಮಾತ್ರ ಹಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಸರ್ಕಾರದ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆ ಹಾಡುವುದು ಸರ್ಕಾರಕ್ಕೆ ಬಿಟ್ಟ ವಿಚಾರ. ಸರ್ಕಾರ ಜನರಿಂದ ಆಯ್ಕೆಯಾಗಿದೆ; ಕಾನೂನು ಪಾಲನೆ ಮಾಡಲಿ, ನಮ್ಮ ಆಕ್ಷೇಪವಿಲ್ಲ ಎಂದರು.

ಆರ್‌ಎಸ್‌ಎಸ್ ಹಾಗೂ ಹಿಂದೂ ಮಹಾಸಭಾದ ಚಟುವಟಿಕೆಗಳನ್ನು ಪ್ರಸ್ತಾಪಿಸಿದ ಹರಿಪ್ರಸಾದ್, ಸದಾ ವತ್ಸಲೇಯನ್ನು ರಾಷ್ಟ್ರಗೀತೆ ಎಂದು ಪರಿಗಣಿಸಬಹುದೇ ಎಂದು ಪ್ರಶ್ನಿಸಿದರು.

ಆಜಾದ್ ಹಿಂದ್ ಜಿಂದಾಬಾದ್, ಇಂಕಲಾಬ್ ಜಿಂದಾಬಾದ್ ಘೋಷಣೆಗಳನ್ನು ಬಿಜೆಪಿಯವರು ಕೂಗುತ್ತಾರೆಯೇ ಎಂದು ಪ್ರಶ್ನಿಸಿದ ಅವರು, ವಂದೇ ಮಾತರಂ ವಿಚಾರವನ್ನು ಮುಂದಿಟ್ಟುಕೊಂಡು ದೇಶದಲ್ಲಿ ಸೌಹಾರ್ದತೆ ಹಾಳು ಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.

ಸೋನಿಯಾ ಗಾಂಧಿ ವಿರುದ್ಧದ ಆರೋಪವನ್ನು ಆರ್‌ಎಸ್‌ಎಸ್ನ ಕುತಂತ್ರ ಎಂದು ಬಣ್ಣಿಸಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕುರ್ಚಿ ಕೇಳಿದವರು ಸೋನಿಯಾ ಗಾಂಧಿ ಎಂಬ ಆರೋಪಗಳ ಬಗ್ಗೆಯೂ ಪ್ರತಿಕ್ರಿಯಿಸಿದರು. 2024ಕ್ಕೂ ಮುನ್ನ ಸಂವಿಧಾನ ಬದಲಿಸಲು ಬಿಜೆಪಿ ಮುಂದಾಗಿತ್ತು, ಆದರೆ ಜನರು ಸೂಕ್ತ ಉತ್ತರ ನೀಡಿದ್ದಾರೆ ಎಂದು ಹರಿಪ್ರಸಾದ್ ಹೇಳಿದರು.

### ಜಿಲ್ಲಾಧ್ಯಕ್ಷರ ನೇಮಕ ಶೀಘ್ರ

ಹೈಕಮಾಂಡ್ ನಾಯಕರ ಭೇಟಿಗಾಗಿ ದೆಹಲಿಗೆ ಬಂದಿರುವುದಾಗಿ ಹರಿಪ್ರಸಾದ್ ತಿಳಿಸಿದರು. ಎಐಸಿಸಿ ಪ್ರತಿನಿಧಿಗಳು ಜಿಲ್ಲಾವಾರು ಸಭೆ ನಡೆಸಿ ಸಂಘಟನೆಯ ಕುರಿತು ವರದಿ ನೀಡಿದ್ದಾರೆ. ಈ ವರದಿಗಳ ಬಗ್ಗೆ ಚರ್ಚಿಸಲು ದೆಹಲಿಗೆ ಬಂದಿದ್ದು, ಜಿಲ್ಲಾಧ್ಯಕ್ಷರ ನೇಮಕದ ಬಗ್ಗೆಯೂ ಚರ್ಚೆ ನಡೆಯಲಿದೆ ಎಂದರು. ಈ ತಿಂಗಳಾಂತ್ಯದೊಳಗೆ ಹೊಸ ಜಿಲ್ಲಾಧ್ಯಕ್ಷರ ನೇಮಕಾತಿ ಪೂರ್ಣಗೊಳ್ಳಲಿದೆ ಎಂದು ಕೆಪಿಸಿಸಿ ಅಧ್ಯಕ್ಷರು ಮಾಹಿತಿ ನೀಡಿದರು.

# ಹೊಸ ಸಂಶೋಧನೆಗಳ ತವರು ಕರ್ನಾಟಕ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

### ಕೌಶಲ್ಯವನ್ನು ಯಾರೂ ಕದಿಯಲು ಆಗುವುದಿಲ್ಲ, ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಿ

**ಬೆಂಗಳೂರು, ಆ.18:** ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಮಂಗಳವಾರ ನಡೆದ ವಿಶ್ವ ಯುವ ಕೌಶಲ್ಯ ದಿನಾಚರಣೆಯನ್ನು ಸಿಎಂ ಡಿ ಕೆ ಶಿವಕುಮಾರ್ ಅವರು ಮಂಗಳವಾರ ಉದ್ಘಾಟಿಸಿ, ಮಾತನಾಡಿದರು.ಕೌಶಲ್ಯ ಎಂದರೆ ಜ್ಞಾನಿಗಳ, ಸಾಧಕರ ಸಂಗಮ. ಕೌಶಲ್ಯವನ್ನು ಯಾರೂ ಕದಿಯಲು ಆಗುವುದಿಲ್ಲ. ಇಲ್ಲಿನ ಯುವಕರ ಕೌಶಲ್ಯದಿಂದ ಕರ್ನಾಟಕ ವಿಶ್ವದಲ್ಲೇ ಹೊಸ ಸಂಶೋಧನೆಯ ತವರೂರಾಗಿದೆ" ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು. ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ನಡೆದ ವಿಶ್ವ ಯುವ ಕೌಶಲ್ಯ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ, ದೇಶದಲ್ಲಿ ಪ್ರಜ್ಞಾವಂತರು ಹೆಚ್ಚಾಗಬೇಕು ಎಂದರೆ ವಿದ್ಯೆಯ ಜೊತೆಗೆ ಕೌಶಲ್ಯ ಇರಬೇಕು. ಕೌಶಲ್ಯ ಇದ್ದರೆ ರಾಜಯೋಗ ಇದ್ದಂತೆ. ಇದನ್ನು ಯಾರೂ ಕದಿಯಲು ಸಾಧ್ಯವಿಲ್ಲ. ಕ್ಯಾಲಿಫೋರ್ನಿಯಾದಲ್ಲಿ 13 ಲಕ್ಷ ಐಟಿ ಎಂಜಿನಿಯರ್ ಗಳಿದ್ದರೆ, ಬೆಂಗಳೂರಿನಲ್ಲಿ 25 ಲಕ್ಷ ಐಟಿ ವೃತ್ತಿಪರರಿದ್ದಾರೆ. ಕರ್ನಾಟಕ ಕೌಶಲ್ಯದ ತವರು ಎಂದರು.



ನೃಪರಪಹರಿಸದ, ದಾಯಾದಿ ದಕ್ಕಿಸದ, ನೀರಿನಲ್ಲಿ ನೆನೆಯದ, ಅಗ್ನಿಯಲ್ಲಿ ಸುಡದ ಗುಪ್ತನಿಧಿ ಕೌಶಲ್ಯ ವಿದ್ಯೆ. ಪ್ರತಿಯೊಬ್ಬರಲ್ಲೂ ಕೌಶಲ್ಯ ಇರುತ್ತದೆ. ಅಕ್ಕಸಾಲಿಗ, ಮರಗೆಲಸ ಸೇರಿದಂತೆ ಅನೇಕ ಕೌಶಲ್ಯಯುತ ಕೆಲಸಗಳನ್ನು ಎಲ್ಲರೂ ಮಾಡಲು ಸಾಧ್ಯವಿಲ್ಲ. ಯಾವ ತಂತ್ರಜ್ಞಾನ ಇಲ್ಲದೇ ಇದ್ದ ಹೊತ್ತಿನಲ್ಲೂ ಕೈದಿಗಳನ್ನು ಬಳಸಿ ವಿಧಾನಸೌಧ ಕಟ್ಟಲಾಯಿತು. ಅವರಲ್ಲೂ ಕೌಶಲ್ಯ ಇತ್ತು. ಪ್ರತಿಯೊಬ್ಬರ ಮನುಷ್ಯನಲ್ಲೂ ಕೌಶಲ್ಯ ಇದ್ದೇ ಇರುತ್ತದೆ" ಎಂದು ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ತುಂಬಿದರು.

ಇಂದು ಟಾಟಾ, ಮಹೀಂದ್ರಾದಂಥ ದೊಡ್ಡ ಕೈಗಾರಿಕೆ ನಡೆಸುತ್ತಿರುವ ಉದ್ಯಮಿಗಳು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ, ಇಲ್ಲಿ ಕೌಶಲ್ಯ ಪಡೆದು ವಿಶ್ವದಾದ್ಯಂತ ತಮ್ಮ ಕೈಗಾರಿಕಾ ಸಾಮ್ರಾಜ್ಯವನ್ನು ವಿಸ್ತರಿಸಿದ್ದಾರೆ. ಬೆಳಗಾವಿ, ಹುಬ್ಬಳ್ಳಿ, ಧಾರವಾಡ ಹೀಗೆ ನಮ್ಮ ನಮ್ಮಲ್ಲಿ ಸ್ಪರ್ಧೆ ನಡೆಸುವುದಲ್ಲ. ನೀವು ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ನಡೆಸಬೇಕು ಎಂದು ಹೇಳಿದರು. ಸ್ವಾಮಿ ವಿವೇಕಾನಂದರು ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಜಿಮ್‌ಷೆಡ್ ಜೀ ಟಾಟಾ ಅವರೊಂದಿಗೆ ದೇಶದ ಬಡತನದ ಬಗ್ಗೆ ಚರ್ಚೆ ನಡೆಸಿದರು. ವಿಜ್ಞಾನದಿಂದ ಮಾತ್ರ ಬಡತನ ನೀಗಲಿದೆ ಎಂದು ತೀರ್ಮಾನಿಸಿ, ಮೈಸೂರಿನ ಅಂದಿನ ಮಹಾರಾಜರ ಬಳಿ ವಿವೇಕಾನಂದರು ನಿವೇದಿಸಿದ್ದರಿಂದ 360 ಎಕರೆ ಪ್ರದೇಶದಲ್ಲಿ ಐಐಎಸ್ಸಿ ಸ್ಥಾಪನೆಯಾಯಿತು. ಈ ಸಂಸ್ಥೆ ಇಂದು ಲಕ್ಷಾಂತರ ಪ್ರತಿಭಾವನ್ವಿತ ವಿಜ್ಞಾನಿಗಳನ್ನು ವಿಶ್ವಕ್ಕೆ ಕೊಡುಗೆಯಾಗಿ ನೀಡಿದೆ" ಎಂದು ಸ್ಮರಿಸಿದರು. ಕೌಶಲ್ಯವನ್ನು ಯಾರೂ ಕೂಡ ಕದಿಯಲು ಆಗುವುದಿಲ್ಲ. ನನ್ನ ಈ ಅಧಿಕಾರ ಯಾವತ್ತೋ ಒಂದು ದಿನ ಕೊನೆಯಾಗಬಹುದು. ಆದರೆ ನನ್ನಲ್ಲಿ ಇರುವ ಕೌಶಲ್ಯ ಕೊನೆಯಾಗಲ್ಲ. ಜೊತೆಗೆ ನಾವು ಪಡೆದ ವಿದ್ಯೆಯೂ ಸಹ ಎಂದಿಗೂ ಕುಂದು ಹೋಗುವುದಿಲ್ಲ ಎಂದರು. ಪದವಿಗೂ ಕೌಶಲ್ಯಕ್ಕೂ ಸಂಬಂಧ ಇಲ್ಲ. ಸಾಮಾನ್ಯ ಜ್ಞಾನ ಇಲ್ಲದಿದ್ದರೆ ಎಷ್ಟು ಪದವಿ ಇದ್ದು ಫಲವೇನು, ಹೊಲ ಉಳುವಾಗ ರೈತ ಎಷ್ಟು ಅಚ್ಚುಕಟ್ಟಾಗಿ ನೇರವಾಗಿ ಹೊಲ ಉಳುತ್ತಾನೆ. ಹೆಣ್ಣು ಮಕ್ಕಳು ಅಳತೆಗೆ ತಕ್ಕಂತೆ ಪೈರು ನಾಟಿ ಮಾಡುತ್ತಾರೆ. ಇವರಿಗೆ ಯಾವ ಎಂಜಿನಿಯರ್ ಕೂಡ ಪಾಠ ಮಾಡಿಲ್ಲ. ಕೈಯಲ್ಲಿ ಕೌಶಲ್ಯ ಇದ್ದರೆ ಬದುಕು. ಕೌಶಲ್ಯ ಇದ್ದರೆ ಎಲ್ಲಿ ಬೇಕಾದರೂ ಬದುಕಬಹುದು ಎಂದರು. ನವೆಂಬರ್‌ನಲ್ಲಿ ನಡೆಯುವ ಬೆಂಗಳೂರು ಟೆಕ್ ಸಮಿಟ್‌ನಲ್ಲಿ ಎಲ್ಲಾ ವಿದ್ಯಾರ್ಥಿಗಳು ತಪ್ಪದೇ ಭಾಗವಹಿಸಬೇಕು. ನಮ್ಮ ಸರ್ಕಾರ ಯುವ ಜನತೆಯ ಭವಿಷ್ಯವನ್ನು ಗುರಿ ಇಟ್ಟುಕೊಂಡು ಎಐ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಿದೆ" ಎಂದರು. ಸಚಿವರಾದ ಶರಣಪ್ರಕಾಶ್ ಪಾಟೀಲ್, ರುದ್ರಪ್ಪ ಲಮಾಣಿ, ರಾಜ್ಯ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಚ್ ಎಂ ರೇವಣ್ಣ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕಾರ್ಯದರ್ಶಿ ಸುಭೋದ್ ಯಾದವ್ ಮತ್ತಿತರರು ಉಪಸ್ಥಿತರಿದ್ದರು.

# ಹಿಮಾಚಲದಲ್ಲಿ ಐಎಎಸ್, ಐಪಿಎಸ್, ಐಎಫ್‌ಎಸ್ ಹುದ್ದೆಗಳ ಕಡಿತಕ್ಕೆ ನಿರ್ಧಾರ



■ ಆಡಳಿತಾತ್ಮಕ ವೆಚ್ಚ ಕಡಿತಗೊಳಿಸಲು ಸರ್ಕಾರದ ಪ್ರಯತ್ನ

**ಶಿಮ್ಲಾ, ಆ.18:** ಹಿಮಾಚಲ ಪ್ರದೇಶದಲ್ಲಿ ಆಡಳಿತಾತ್ಮಕ ವೆಚ್ಚ ಕಡಿತಗೊಳಿಸುವ ಉದ್ದೇಶದಿಂದ ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳ ಕ್ಯಾಡರ್ ಬಲವನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಸಂಬಂಧ ಕೇಂದ್ರ ಸರ್ಕಾರದ ಸಿಬ್ಬಂದಿ ಇಲಾಖೆಗೆ ರಾಜ್ಯ ಸರ್ಕಾರ ಪತ್ರ ಬರೆದಿದೆ.

ರಾಜ್ಯದ ಪ್ರಸ್ತುತ 153 ಐಎಎಸ್ ಹುದ್ದೆಗಳನ್ನು 130ಕ್ಕೆ ಇಳಿಸಲು ನಿರ್ಧರಿಸಲಾಗಿದೆ. ಇದೇ ರೀತಿ ಐಎಫ್‌ಎಸ್ ಹುದ್ದೆಗಳನ್ನು 118ರಿಂದ 83ಕ್ಕೆ ಕಡಿತಗೊಳಿಸಲು ಉದ್ದೇಶಿಸಲಾಗಿದೆ. ಐಪಿಎಸ್ ಶ್ರೇಣಿಯ 96 ಹುದ್ದೆಗಳಷ್ಟು ಕಡಿಮೆ ಮಾಡುವ ಪ್ರಸ್ತಾವವಿದೆ.

ಹಿಮಾಚಲ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು ಅಧಿಕಾರಿಗಳ ಸಂಖ್ಯೆ ಅಗತ್ಯಕ್ಕಿಂತ ಹೆಚ್ಚಿರಬಾರದು ಎಂದು ಹೇಳಿದ್ದಾರೆ. ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವಷ್ಟು ಅಧಿಕಾರಿಗಳೇ ಸಾಕು. ವೈಯಕ್ತಿಕವಾಗಿ ಐಎಎಸ್ ಅಧಿಕಾರಿಗಳ ಸಂಖ್ಯೆಯನ್ನು 100ರಿಂದ 110ರೊಳಗೆ ಇರಿಸುವುದು ತಮ್ಮ ಅಭಿಪ್ರಾಯವಾಗಿತ್ತು. ಆದರೆ ಕೆಲವು ಅಧಿಕಾರಿಗಳ ಅಸಮಾಧಾನ ಹಿನ್ನೆಲೆಯಲ್ಲಿ 130ಕ್ಕೆ ಇಳಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. ಅಧಿಕಾರಿಗಳ ಶ್ರೇಣಿಯ ಕಡಿತದಿಂದ ಆಡಳಿತಾತ್ಮಕ ವೆಚ್ಚ ಕಡಿಮೆಯಾಗಲಿದ್ದು, ಉಳಿಯುವ ಹಣವನ್ನು ಜನರ ಸೇವೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಬಳಸಬಹುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಒಬ್ಬ ಅಧಿಕಾರಿಯ ಸಂಖ್ಯೆಯನ್ನು ಕಡಿಮೆ ಮಾಡುವುದರಿಂದ ಸರ್ಕಾರಕ್ಕೆ ಸುಮಾರು 200 ಕೋಟಿ ಉಳಿತಾಯವಾಗಲಿದೆ ಎಂಬುದು ಅವರ ಲೆಕ್ಕಾಚಾರವಾಗಿದೆ.

**ಕೇಂದ್ರ ನಿಯೋಜನೆಗೆ ಅಧಿಕಾರಿಗಳಿಗೆ ತಕ್ಷಣ ಅನುಮತಿ:** ಕೇಂದ್ರ ಸರ್ಕಾರದ ನಿಯೋಜನೆಗೆ ತೆರಳುವ ಅಧಿಕಾರಿಗಳ ಕಡತಗಳನ್ನು ಈ ಹಿಂದೆ ತಡೆಹಿಡಿಯಲಾಗುತ್ತಿತ್ತು. ಆದರೆ ಇದೀಗ ಅಂತಹ ಅಧಿಕಾರಿಗಳಿಗೆ ತಕ್ಷಣ ಅನುಮತಿ ನೀಡಿ ಬಿಡುಗಡೆ ಮಾಡಲಾಗುತ್ತಿದೆ ಎಂದು ಸುಖು ತಿಳಿಸಿದ್ದಾರೆ. ಹಿಮಾಚಲ ಕ್ಯಾಡರ್ನ 25 ಐಎಎಸ್ ಮತ್ತು 24 ಐಪಿಎಸ್ ಅಧಿಕಾರಿಗಳು ಪ್ರಸ್ತುತ ಕೇಂದ್ರ ನಿಯೋಜನೆಯಲ್ಲಿದ್ದಾರೆ. 118 ಐಎಫ್‌ಎಸ್ ಅಧಿಕಾರಿಗಳ ಪೈಕಿ 17 ಮಂದಿ ಕೇಂದ್ರ ನಿಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇದರ ಜತೆಗೆ ಆಡಳಿತಾತ್ಮಕ ವೆಚ್ಚ ಕಡಿಮೆ ಮಾಡಲು ಫೀಲ್ಡ್ ಅಧಿಕಾರಿಗಳಿಗೆ ಲಭ್ಯವಿರುವ ಸರ್ಕಾರಿ ವಾಹನಗಳ ಸಂಖ್ಯೆಯನ್ನೂ 56ರಿಂದ 30ಕ್ಕೆ ಇಳಿಸಲು ಸರ್ಕಾರ ಮುಂದಾಗಿದೆ. ಸರ್ಕಾರಿ ವಾಹನಗಳನ್ನು ಹಂತ ಹಂತವಾಗಿ ಎಲೆಕ್ಟ್ರಿಕ್ ವಾಹನಗಳಾಗಿ ಪರಿವರ್ತಿಸುವ ಯೋಜನೆಯೂ ಇದೆ.

# ಉತ್ತರಾಖಂಡ ಕ್ರೀಡಾ ಸಚಿವರ ಕ್ಷೇತ್ರದ ಸ್ಮಶಾನದಲ್ಲೇ ಟೇಬಲ್ ಟೆನ್ನಿಸ್



**ನವದೆಹಲಿ, ಆ.18:** ಉತ್ತರಾಖಂಡದ ಅಲ್ಮೋರಾ ಜಿಲ್ಲೆಯ ಸೋಮೇಶ್ವರ ವಿಧಾನಸಭಾ ಕ್ಷೇತ್ರದ ತ್ರಿವೇಣಿ ಘಾಟ್‌ನಲ್ಲಿರುವ ಸ್ಮಶಾನ ಪ್ರದೇಶದಲ್ಲಿ ಇಬ್ಬರು ವಿದ್ಯಾರ್ಥಿಗಳು ಟೇಬಲ್ ಟೆನ್ನಿಸ್ ಅಭ್ಯಾಸ ಮಾಡುತ್ತಿರುವ ಚಿತ್ರಗಳು ವೈರಲ್ ಆದ ನಂತರ, ರಾಜ್ಯದ ಕ್ರೀಡಾ ಮೂಲಸೌಕರ್ಯಗಳ ಸ್ಥಿತಿಗತಿ ಕುರಿತು ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಅದರಲ್ಲೂ ಮುಖ್ಯವಾಗಿ ಉತ್ತರಾಖಂಡದ ಕ್ರೀಡಾ ಸಚಿವೆ ರೇಖಾ ಆರ್ಯ ಅವರ ಕ್ಷೇತ್ರದಲ್ಲೇ ಕ್ರೀಡೆಯ ಪರಿಸ್ಥಿತಿ ಹೀಗಿರುವುದು ಪ್ರತಿಪಕ್ಷಗಳು, ನೆಟ್ಟಿಗರ ಆಕ್ರೋಶಕ್ಕೆ ಕಾರಣವಾಗಿದೆ.ಸರ್ಕಾರಿ ಇಂಟರ್ ಕಾಲೇಜಿನ 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳಾದ ಕ್ರಿಶ್ ಮತ್ತು ಯುವರಾಜ್ ಬೋರಾ, ಶಾಲೆಯ ರಜಾದಿನಗಳಲ್ಲಿ ಅಭ್ಯಾಸ ಮಾಡಲು ಸೂಕ್ತ ಸಾರ್ವಜನಿಕ ಮೈದಾನ ಅಥವಾ ಕ್ರೀಡಾಂಗಣವಿಲ್ಲದೆ, ಅಂತಿಮ ಸಂಸ್ಕಾರದ ವೇಳೆ ಶವಗಳನ್ನು ಇರಿಸುವ ಜಾಗವನ್ನೇ ತಾತ್ಕಾಲಿಕ ಅಂಕಣವಾಗಿ ಬಳಸಿಕೊಂಡಿದ್ದರು. ಈ ದೃಶ್ಯಗಳ ಫೋಟೋ ಮತ್ತು ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದಂತೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಸೋಮೇಶ್ವರ ಕ್ಷೇತ್ರವು ಉತ್ತರಾಖಂಡದ ಕ್ರೀಡಾ ಸಚಿವರಾದ ರೇಖಾ ಆರ್ಯ ಅವರ ಸ್ವಕ್ಷೇತ್ರವಾಗಿದೆ. ಸಚಿವರ ಕ್ಷೇತ್ರದಲ್ಲೇ ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳಿಗೆ ಮೂಲಸೌಕರ್ಯ ಸಿಗುತ್ತಿಲ್ಲ ಎಂದು ಕಾಂಗ್ರೆಸ್ ಆರೋಪಿಸಿದೆ. ವಿಷಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗುತ್ತಿದ್ದಂತೆ, ಅಲ್ಮೋರಾ ಜಿಲ್ಲಾಧಿಕಾರಿ ಅಂಶುಲ್ ಸಿಂಗ್ ಅವರು ತಕ್ಷಣ ಗಮನಹರಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ನಂತರ ಜಿಲ್ಲಾ ಶಿಕ್ಷಣಾಧಿಕಾರಿ ರವಿ ಮೆಹ್ತಾ ಅವರ ಸೂಚನೆಯಂತೆ, ವಿದ್ಯಾರ್ಥಿಗಳಿಗೆ ರಜಾದಿನಗಳಲ್ಲೂ ಶಾಲಾ ಆವರಣದಲ್ಲೇ ಟೇಬಲ್ ಟೆನ್ನಿಸ್ ಅಭ್ಯಾಸ ಮಾಡಲು ವಿಶೇಷ ಅನುಮತಿ ನೀಡಲಾಗಿದೆ.

# ಶಿಕ್ಷಕರ ಕೊರತೆ ನೀಗಿಸುವಂತೆ ವಿದ್ಯಾರ್ಥಿನಿಯರಿಂದ ಹೆದ್ದಾರಿ ತಡೆ

**ಲಖನೌ, ಆ. 18:** ಶಾಲೆಯಲ್ಲಿ ಸೂಕ್ತ ಶಿಕ್ಷಕರಿಲ್ಲದಿರುವುದು ಮತ್ತು ನಿತ್ಯ ನೀಡಲಾಗುವ ಕಳಪೆ ಮಟ್ಟದ ಮಧ್ಯಾಹ್ನದ ಬಿಸಿಯೂಟವನ್ನು ಖಂಡಿಸಿ 200ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಪ್ರಮುಖ ರಸ್ತೆಗೆ ಇಳಿದು ಬೃಹತ್ ಪ್ರತಿಭಟನೆ ನಡೆಸಿರುವ ಘಟನೆ ಯೋಗಿ ಆದಿತ್ಯನಾಥ್ ಆಡಳಿತವಿರುವ ಉತ್ತರಪ್ರದೇಶದ ರಾಜಧಾನಿ ಲಖನೌದಲ್ಲಿ ನಡೆದಿದೆ. ವಿದ್ಯಾರ್ಥಿನಿಯರ ಏಕಾಏಕಿ ರಸ್ತೆ ತಡೆಯಿಂದಾಗಿ ಕೆಲ ಗಂಟೆಗಳ ಕಾಲ ವಾಹನ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು.

ಶಾಲೆಯಲ್ಲಿ ದೀರ್ಘಕಾಲದಿಂದ ವಿಷಯವಾರು ಶಿಕ್ಷಕರ ಕೊರತೆ ಇದೆ. ಇದರಿಂದಾಗಿ ನಮ್ಮ ಶೈಕ್ಷಣಿಕ ಭವಿಷ್ಯ ಹಾಳಾಗುತ್ತಿದೆ. ಇದರೊಂದಿಗೆ, ಶಾಲೆಯಲ್ಲಿ ಸರಬರಾಜು ಮಾಡಲಾಗುವ ಮಧ್ಯಾಹ್ನದ ಊಟದ ಗುಣಮಟ್ಟ ತೀರಾ ಕಳಪೆಯಾಗಿರುತ್ತದೆ. ಅದು ಸೇವಿಸಲು ಯೋಗ್ಯವಾಗಿಲ್ಲ ಎಂದು ವಿದ್ಯಾರ್ಥಿನಿಯರು ಆರೋಪಿಸಿದ್ದಾರೆ.

ಹಲವು ಬಾರಿ ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿದರೂ ಕ್ರಮ ಕೈಗೊಳ್ಳದ ಕಾರಣ ಆಕ್ರೋಶಗೊಂಡ ಜೆನ್ ಆಲ್ಫಾ ವಿದ್ಯಾರ್ಥಿನಿಯರು ಶಾಲೆಯಿಂದ ಹೊರಬಂದು ರಸ್ತೆಯಲ್ಲಿ ಕುಳಿತು ಧರಣಿ ಆರಂಭಿಸಿದ್ದಾರೆ.

ಈ ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳೀಯ ಪೊಲೀಸರು ಹಾಗೂ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ವಿದ್ಯಾರ್ಥಿನಿಯರ ಜತೆ ಮಾತುಕತೆ ನಡೆಸಿದ್ದಾರೆ. ಶೀಘ್ರದಲ್ಲೇ ಅಗತ್ಯ ಶಿಕ್ಷಕರ ನೇಮಕ ಮಾಡಲಾಗುವುದು. ಆಹಾರದ ಗುಣಮಟ್ಟ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಲಿಖಿತವಾಗಿ ಭರವಸೆ ನೀಡಿದ್ದಾರೆ. ಇದಾದ ಬಳಿಕವೇ ವಿದ್ಯಾರ್ಥಿನಿಯರು ಪ್ರತಿಭಟನೆಯನ್ನು ಹಿಂಪಡೆದು ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

# ಪ್ರತಿಭಟನಾನಿರತರ ಜತೆ ಜಾರ್ಖಂಡ್ ಸರ್ಕಾರದ ಸಂಧಾನ: ರಾಹುಲ್ ಗಾಂಧಿ ಸ್ವಾಗತ

**ನೇಮಕಾತಿ ಅಕ್ರಮ ವಿರೋಧಿಸಿ ವಿದ್ಯಾರ್ಥಿಗಳ ಪ್ರತಿಭಟನೆ**



**ನವದೆಹಲಿ, ಆ. 18:** ಜಾರ್ಖಂಡ್ ಸರ್ಕಾರ ಹಾಗೂ ಉದ್ಯೋಗಾಕಾಂಕ್ಷಿ ವಿದ್ಯಾರ್ಥಿಗಳ ನಡುವೆ ಒಮ್ಮತ ಮೂಡಿ, ವಿದ್ಯಾರ್ಥಿಗಳು ತಮ್ಮ ಉಪವಾಸ ಸತ್ಯಾಗ್ರಹವನ್ನು ಹಿಂಪಡೆದಿರುವುದನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸ್ವಾಗತಿಸಿದ್ದಾರೆ. ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಎತ್ತಿದಾಗ ಅವರಿಗೆ ಸೂಕ್ತ ಉತ್ತರಗಳು ಸಿಗಬೇಕು, ಇದು ಅತ್ಯಂತ ಸರಿಯಾದ ಮಾರ್ಗ ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಹೇಮಂತ್ ಸೊರೇನ್ ನೇತೃತ್ವದ ರಾಜ್ಯ ಸರ್ಕಾರವು ಸಂವಾದದ ಹಾದಿ ಹಿಡಿದು ಸಮಸ್ಯೆಗೆ ಪರಿಹಾರ ಕಂಡುಕೊಂಡಿದೆ ಹಾಗೂ ಪ್ರತಿಭಟನಾನಿರತ ವಿದ್ಯಾರ್ಥಿಗಳು ಸಂಯಮದಿಂದಲೇ ತಮ್ಮ ಧ್ವನಿಯನ್ನು ಸರ್ಕಾರಕ್ಕೆ ಮುಟ್ಟಿಸಿದ್ದಾರೆ ಎಂದು ರಾಹುಲ್ ಗಾಂಧಿ ಪ್ರಶಂಸಿಸಿದ್ದಾರೆ.

ನಾವು ದೇಶದ ಪ್ರತಿಯೊಬ್ಬ ವಿದ್ಯಾರ್ಥಿಯ ಪರವಾಗಿ ನಿಲ್ಲುತ್ತೇವೆ. ವಿದ್ಯಾರ್ಥಿಗಳ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ಹಾಗೂ ನ್ಯಾಯಯುತ ಸ್ಪರ್ಧೆಯ ಹಕ್ಕು ಸಿಗುವಂತೆ ಮಾಡಲು ಈ ಅಕ್ರಮ ವ್ಯವಸ್ಥೆಯನ್ನು ಬುಡಸಮೇತ ಕಿತ್ತೊಗೆದು ಬದಲಾವಣೆ ತರಲಾಗುವುದು. ವಿದ್ಯಾರ್ಥಿಗಳನ್ನು ಹಿಂದಕ್ಕೆ ತಳ್ಳುವ ಬದಲು ಅವರನ್ನು ಮುನ್ನಡೆಸುವ ಹೊಸ ವ್ಯವಸ್ಥೆಯನ್ನು ದೇಶಾದ್ಯಂತ ರೂಪಿಸಲಾಗುವುದು ಎಂದು ರಾಹುಲ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ನೇಮಕಾತಿ ಪರೀಕ್ಷೆಗಳ ಅಕ್ರಮ ವಿರೋಧಿಸಿ 16 ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ವಿದ್ಯಾರ್ಥಿ ಮುಖಂಡ ದೇವೇಂದ್ರ ನಾಥ್ ಮಹತೋ, ಸೋಮವಾರ ತಡರಾತ್ರಿ ತಮ್ಮ ಚಳವಳಿಯನ್ನು ಕೊನೆಗೊಳಿಸಿದರು. ವಿದ್ಯಾರ್ಥಿಗಳ ಬೇಡಿಕೆಗೆ ಸ್ಪಂದಿಸಿದ ರಾಜ್ಯ ಸರ್ಕಾರವು ಜೆಎಸ್‌ಎಸ್ಸಿ–ಸಿಜಿಎಲ್ ಪರೀಕ್ಷೆ ಸೇರಿದಂತೆ ಟಿಡಿಪಿಎಲ್ ಸಂಸ್ಥೆ ನಡೆಸಿದ್ದ ಎಲ್ಲಾ ಪರೀಕ್ಷೆಗಳು ಹಾಗೂ ಪ್ರಕಟಿಸಿದ್ದ ಫಲಿತಾಂಶಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಿದೆ. ಈ ನಿರ್ಧಾರವನ್ನು ಜಾರ್ಖಂಡ್‌ಗೆ ಸಂದ ಮಹಾನ್ ಗೆಲುವು ಎಂದು ವಿದ್ಯಾರ್ಥಿ ಮುಖಂಡರು ಬಣ್ಣಿಸಿದ್ದಾರೆ.

ರಾಂಚಿಯಲ್ಲಿ ರಾಜ್ಯ ಸಚಿವರಾದ ದೀಪಿಕಾ ಪಾಂಡೆ ಸಿಂಗ್ ಹಾಗೂ ಇರ್ಫಾನ್ ಅನ್ಸಾರಿ ಅವರ ಸಮ್ಮುಖದಲ್ಲಿ ಮಹತೋ ಉಪವಾಸ ಅಂತ್ಯಗೊಳಿಸಿ, ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತು ಬೆಂಬಲ ನೀಡಿದ ರಾಹುಲ್ ಗಾಂಧಿ ಅವರಿಗೆ ಧನ್ಯವಾದ ಅರ್ಪಿಸಿದರು. ವಿಶೇಷ ಸಚಿವ ಸಂಪುಟ ಸಭೆ ನಡೆಸಿ, ಟಿಡಿಪಿಎಲ್ ಸಂಸ್ಥೆ ನಡೆಸಿದ ಎಲ್ಲಾ ಪರೀಕ್ಷಾ ಪ್ರಕ್ರಿಯೆಗಳು ಹಾಗೂ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಹೇಮಂತ್ ಸೊರೇನ್ ಸ್ಪಷ್ಟಪಡಿಸಿದ್ದಾರೆ.

ಇದಕ್ಕೂ ಮುನ್ನ, ಆಗಸ್ಟ್ 14ರಂದು ಮುಖ್ಯಮಂತ್ರಿ ಸೊರೇನ್ ಅವರಿಗೆ ಪತ್ರ ಬರೆದಿದ್ದ ರಾಹುಲ್ ಗಾಂಧಿ, ಪ್ರತಿಭಟನಾನಿರತ ವಿದ್ಯಾರ್ಥಿ ನಿಯೋಗವನ್ನು ಖುದ್ದು ಭೇಟಿಯಾಗಿ ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿದ್ದರು. ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ನೇಮಕಾತಿ ಅಕ್ರಮಗಳ ವಿರುದ್ಧ ವಿದ್ಯಾರ್ಥಿಗಳ ಶಾಂತಿಯುತ ಪ್ರತಿಭಟನೆಯ ಹಕ್ಕನ್ನು ಬೆಂಬಲಿಸುವುದಾಗಿ ರಾಹುಲ್ ತಿಳಿಸಿದ್ದರು.

# ಆರ್‌ಪಿಐ ಸೇರುವಂತೆ ಸಿಜೆಪಿಯ ಅಭಿಜಿತ್ ದೀಪ್ಕೆಗೆ ರಾಮದಾಸ್ ಅಠಾವಳೆ ಆಹ್ವಾನ

**ನವದೆಹಲಿ, ಆ.18:** ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರಿಗೆ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ(ಎನ್‌ಡಿಎ) ಸೇರುವಂತೆ ಕೇಂದ್ರ ಸಚಿವರೊಬ್ಬರು ಆಹ್ವಾನ ನೀಡಿದ್ದಾರೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಕನಸನ್ನು ನನಸಾಗಿಸಲು ಭಾರತೀಯ ರಿಪಬ್ಲಿಕನ್ ಪಕ್ಷ ಸೇರುವುದನ್ನು ಪರಿಗಣಿಸಬೇಕು ಎಂದು ಕೇಂದ್ರ ಸಚಿವ ರಾಮದಾಸ್ ಅಠಾವಳೆ ಸೋಮವಾರ ಹೇಳಿದ್ದಾರೆ.

ಕೇಂದ್ರ ಸಚಿವರ ಈ ಪ್ರಸ್ತಾಪಕ್ಕೆ ಅಭಿಜೀತ್ ದೀಪ್ಕೆ ಅವರು ಇನ್ನೂ ಪ್ರತಿಕ್ರಿಯಿಸಿಲ್ಲ. ಆದರೆ ಸಿಜೆಪಿ ನಾಯಕ ಈ ಹಿಂದೆ ಚುನಾವಣಾ ರಾಜಕೀಯಕ್ಕೆ ಪ್ರವೇಶಿಸುವುದನ್ನು ತಳ್ಳಿಹಾಕಿದ್ದರು ಮತ್ತು ರಾಜಕೀಯ ಹಾಗೂ ಚುನಾವಣಾ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಂಡಿರುವುದಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅಠಾವಳೆ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಕನಸನ್ನು ನನಸಾಗಿಸಲು ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ತಮ್ಮ ಆರ್‌ಪಿಐ(ಎ) ಪಕ್ಷಕ್ಕೆ ಸೇರುವುದನ್ನು ಪರಿಗಣಿಸಬೇಕು ಮತ್ತು ಸಮಾಜ ಹಾಗೂ ಪಕ್ಷವನ್ನು ಬಲಪಡಿಸಲು ಸಹಾಯ ಮಾಡಬೇಕು ಎಂದು ಬಹಿರಂಗವಾಗಿಯೇ ಆಹ್ವಾನ ನೀಡಿದ್ದಾರೆ.




ಎಐ, ಸ್ವಚ್ಛ ಇಂಧನ, ಸಂಶೋಧನೆ ಮತ್ತು ಅಭಿವೃದ್ಧಿ, ಡೇಟಾ ಕೇಂದ್ರ ಮತ್ತು ಉತ್ಪಾದನಾ ಮತ್ತಿತರ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ನೀಡುವ ಕುರಿತು ಹೆಸೆನ್ ಸಚಿವ–ಅಧ್ಯಕ್ಷ ಬೋರಿಸ್ ರೆನ್, ಸಚಿವ ಮ್ಯಾನ್‌ಫ್ರೆಡ್ ಪೆಂಟ್ಜ್ ಮತ್ತು ಜರ್ಮನ್ ವ್ಯಾಪಾರಿ ನಿಯೋಗದ ಜತೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯೆಲ್ ಅವರು ದೆಹಲಿಯಲ್ಲಿ ಚರ್ಚೆ ನಡೆಸಿದರು.

# ಮರಣದಂಡನೆಗೆ ವಿಷಕಾರಿ ಇಂಜೆಕ್ಷನ್ ಬೇಡ: ಸುಪ್ರೀಂ



**ನವದೆಹಲಿ, ಆ. 18:** ದೇಶದಲ್ಲಿ ಮರಣದಂಡನೆ ಜಾರಿಗೆ ಇರುವ ನೇಣುಗಂಬದ (ಗಲ್ಲುಶಿಕ್ಷೆ) ಪದ್ಧತಿಯನ್ನು ರದ್ದುಪಡಿಸಿ, ಅದರ ಬದಲಿಗೆ ವಿಷಕಾರಿ ಇಂಜೆಕ್ಷನ್ ಅಥವಾ ಇತರೆ ಪರ್ಯಾಯ ವಿಧಾನಗಳನ್ನು ಅಳವಡಿಸಿಕೊಳ್ಳುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಆದರೆ, ಕಡಿಮೆ ನೋವುಂಟುಮಾಡುವ ಪರ್ಯಾಯ ವೈಜ್ಞಾನಿಕ ವಿಧಾನಗಳ ಕುರಿತು ಪರಿಶೀಲಿಸಲು ಕೇಂದ್ರ ಸರ್ಕಾರಕ್ಕೆ ತಜ್ಞರ ಸಮಿತಿ ರಚಿಸುವ ಮುಕ್ತಾವಕಾಶವಿದೆ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ಹಿರಿಯ ವಕೀಲ ರಿಷಿ ಮಲ್ಹೋತ್ರಾ ಅವರು 2017ರಲ್ಲಿ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಅಪರಾಧ ಪ್ರಕ್ರಿಯಾ ಸಂಹಿತೆ 354(5) ಅಡಿಯಲ್ಲಿ ಮರಣದಂಡನೆ ಶಿಕ್ಷೆಗೆ ಗುರಿಯಾದ ವ್ಯಕ್ತಿಯ ಪ್ರಾಣ ಹೋಗುವವರೆಗೂ ನೇಣು ಹಾಕುವ ನಿಯಮವಿದೆ. ಇದನ್ನು ಪ್ರಶ್ನಿಸಿದ್ದ ಅರ್ಜಿದಾರರು, ನೇಣು ಶಿಕ್ಷೆಯು ಅಪರಾಧಿಗೆ ದೀರ್ಘಕಾಲದ ತೀವ್ರ ನೋವು ಮತ್ತು ಯಾತನೆಯನ್ನು ಉಂಟುಮಾಡುತ್ತದೆ; ಇದು ಸಂವಿಧಾನದ 21ನೇ ವಿಧಿಯಡಿ ಲಭ್ಯವಿರುವ ಘನತೆಯಿಂದ ಸಾಯುವ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ವಾದಿಸಿದ್ದರು. ಗಲ್ಲುಶಿಕ್ಷೆಯ ಬದಲಿಗೆ ವಿಷಕಾರಿ ಇಂಜೆಕ್ಷನ್, ಗುಂಡೇಟು, ವಿದ್ಯುತ್ ಆಘಾತ ಅಥವಾ ಅನಿಲ ಕೊಠಡಿಯಂತಹ (ಗ್ಯಾಸ್ ಚೇಂಬರ್) ವಿಧಾನಗಳನ್ನು ಪರಿಗಣಿಸಬೇಕು ಎಂದು ಅವರು ಕೋರಿದ್ದರು.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ನ್ಯಾಯಪೀಠವು ಈ ಅರ್ಜಿಯ ವಿಚಾರಣೆ ನಡೆಸಿ ತೀರ್ಪು ಪ್ರಕಟಿಸಿದೆ. ನೇಣು ಶಿಕ್ಷೆಯ ಸಿಂಧುತ್ವವನ್ನು ಎತ್ತಿಹಿಡಿದಿದ್ದ ಮೂವರು ನ್ಯಾಯಮೂರ್ತಿಗಳ ಹಿಂದಿನ ದೀನಾ ಪ್ರಕರಣದ ತೀರ್ಪನ್ನು ಮರುಪರಿಶೀಲಿಸಿ, ವಿಸ್ತೃತ ಪೀಠಕ್ಕೆ ಶಿಫಾರಸು ಮಾಡಲು ಅರ್ಜಿದಾರರು ಬಲವಾದ ಕಾರಣಗಳನ್ನು ಒದಗಿಸಿಲ್ಲ ಎಂದು ಪೀಠ ತಿಳಿಸಿದೆ. ಆದಾಗ್ಯೂ, ವಿಜ್ಞಾನ ಮತ್ತು ವೈದ್ಯಕೀಯ ತಂತ್ರಜ್ಞಾನ ಮುಂದುವರಿದಂತೆ, ಕಡಿಮೆ ನೋವು ನೀಡುವ ಪರ್ಯಾಯ ವಿಧಾನಗಳ ಕುರಿತು ಬಲವಾದ ಪುರಾವೆಗಳು ಲಭ್ಯವಾದರೆ ಭವಿಷ್ಯದಲ್ಲಿ ಈ ವಿಷಯವನ್ನು ಮರುಪರಿಶೀಲಿಸುವ ಅವಕಾಶ ಮುಕ್ತವಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಮರಣದಂಡನೆ ಜಾರಿಯ ಪ್ರಸ್ತುತ ವಿಧಾನವನ್ನು ಕೂಲಂಕಷವಾಗಿ ಪರಿಶೀಲಿಸಲು ಕೇಂದ್ರ ಸರ್ಕಾರವು ಕಾನೂನು, ವಿಧಿವಿಜ್ಞಾನ (ಫೊರೆನ್ಸಿಕ್ ಮೆಡಿಸಿನ್), ನರವಿಜ್ಞಾನ (ನ್ಯೂರೋಸೈನ್ಸ್) ಹಾಗೂ ಅಪರಾಧಶಾಸ್ತ್ರ ಕ್ಷೇತ್ರದ ಪರಿಣತರನ್ನೊಳಗೊಂಡ ತಜ್ಞರ ಸಮಿತಿಯನ್ನು ರಚಿಸಬಹುದು. ಈ ಸಮಿತಿಯು ಅಪರಾಧಿಗಳ ಘನತೆಯನ್ನು ಕಾಪಾಡುತ್ತಾ, ಅನಗತ್ಯ ನೋವನ್ನು ಕಡಿಮೆ ಮಾಡುವ ವಿಧಾನಗಳ ಬಗ್ಗೆ ಅಧ್ಯಯನ ನಡೆಸಬಹುದು ಎಂದು ಪೀಠ ತಿಳಿಸಿದೆ.

ವಿಚಾರಣೆ ವೇಳೆ ಮಧ್ಯಪ್ರವೇಶಿಸಿದ್ದ ಪ್ರಾಜೆಕ್ಟ್ 39ಎ ಸಂಸ್ಥೆಯು, ಅಮೆರಿಕ ಸೇರಿದಂತೆ ಹಲವು ದೇಶಗಳಲ್ಲಿ ಬಳಕೆಯಲ್ಲಿರುವ ವಿಷಕಾರಿ ಇಂಜೆಕ್ಷನ್ ವಿಧಾನವೂ ಅನೇಕ ತಾಂತ್ರಿಕ ತೊಡಕುಗಳನ್ನು ಎದುರಿಸುತ್ತಿದ್ದು, ಅದು ಯಾವಾಗಲೂ ಯಶಸ್ವಿಯಾಗಿಲ್ಲ ಎಂಬ ಅಂಶವನ್ನು ನ್ಯಾಯಾಲಯದ ಗಮನಕ್ಕೆ ತಂದಿತ್ತು. ಅಂತಿಮವಾಗಿ ಅರ್ಜಿಯನ್ನು ವಜಾಗೊಳಿಸಿರುವ ಸುಪ್ರೀಂ ಕೋರ್ಟ್‌ನ ಈ ಆದೇಶದಿಂದಾಗಿ, ಸದ್ಯಕ್ಕೆ ದೇಶದಲ್ಲಿ ಮರಣದಂಡನೆಗೆ ನೇಣು ಶಿಕ್ಷೆಯ ಪದ್ಧತಿಯೇ ಮುಂದುವರಿಯಲಿದ್ದು, ಪರ್ಯಾಯ ಮಾರ್ಗಗಳ ವೈಜ್ಞಾನಿಕ ಪರಿಶೀಲನೆಯ ಹೊಣೆ ಕೇಂದ್ರ ಸರ್ಕಾರದ ಸುಪರ್ದಿಯಲ್ಲಿದೆ.

# ರಾಮಮಂದಿರ ದೇಣಿಗೆ ಕಳವು ಪ್ರಕರಣ: ಚಂಪತ್ ರಾಯ್‌ಗೆ ಎಸ್‌ಐಟಿ ಕ್ಲೀನ್‌ಚಿಟ್



**ಅಯೋಧ್ಯೆ, ಆ.18:** ಅಯೋಧ್ಯೆಯ ರಾಮ ಮಂದಿರ ದೇಣಿಗೆ ಕಳವು ಆರೋಪ ಪ್ರಕರಣದಲ್ಲಿ ಶ್ರೀರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಅವರಿಗೆ ಉತ್ತರ ಪ್ರದೇಶದ ವಿಶೇಷ ತನಿಖಾ ತಂಡ ಕ್ಲೀನ್ಚಿಟ್ ನೀಡಿದೆ. ಮಾಜಿ ಟ್ರಸ್ಟಿ ಅನಿಲ್ ಮಿಶ್ರಾ ಅವರ ಹೆಸರನ್ನೂ ಎಸ್‌ಐಟಿ ಅಂತಿಮ ವರದಿಯಲ್ಲಿ ಉಲ್ಲೇಖಿಸಿಲ್ಲ.

ಉತ್ತರ ಪ್ರದೇಶ ಗೃಹ ಇಲಾಖೆ ಎಸ್‌ಐಟಿ ಸಿದ್ಧಪಡಿಸಿರುವ ಅಂತಿಮ ವರದಿಯನ್ನು ಶ್ರೀರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ಮುಂದಿನ ಕ್ರಮಕ್ಕಾಗಿ ಹಸ್ತಾಂತರಿಸಿದೆ. ವರದಿಯಲ್ಲಿ ಚಂಪತ್ ರೈ ಹಾಗೂ ಅನಿಲ್ ಮಿಶ್ರಾ ಅವರನ್ನು ದೇಣಿಗೆ ಕಳವು ಪ್ರಕರಣದಲ್ಲಿ ತಪ್ಪಿತಸ್ಥರೆಂದು ಗುರುತಿಸಲಾಗಿಲ್ಲ.

ಮಂದಿರದ ದೇಣಿಗೆ ನಿರ್ವಹಣೆಯಲ್ಲಿ ಅಕ್ರಮ ನಡೆದಿರುವ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಚಂಪತ್ ರೈ ಹಾಗೂ ಅನಿಲ್ ಮಿಶ್ರಾ ಜೂನ್ 27ರಂದು ಟಸ್ಟ್‌ನ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದರು. ಬಳಿಕ ಎಸ್‌ಐಟಿ ಇಬ್ಬರನ್ನೂ ವಿಚಾರಣೆ ನಡೆಸಿ, ದೇಣಿಗೆ ಸಂಗ್ರಹ, ಎಣಿಕೆ, ಸಂಗ್ರಹಣೆ ಹಾಗೂ ಬ್ಯಾಂಕ್‌ಗೆ ಜಮೆ ಮಾಡುವ ವ್ಯವಸ್ಥೆ ಕುರಿತು ಮಾಹಿತಿ ಪಡೆದಿತ್ತು.

ಚಂಪತ್ ರಾಯ್ ವಿಚಾರಣೆ ವೇಳೆ ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿದ್ದರು. ದೇಣಿಗೆ ಕಳವು ಬಗ್ಗೆ ಮಾಹಿತಿ ದೊರೆತ ಬಳಿಕ ತಾವೇ ದೂರು ನೀಡಿದ್ದು, ಆರೋಪಿಗಳ ವಿರುದ್ಧ ಕ್ರಮಕ್ಕೆ ಮುಂದಾಗಿದ್ದಾಗಿ ತನಿಖಾಧಿಕಾರಿಗಳಿಗೆ ತಿಳಿಸಿದ್ದರು ಎಂದು ವರದಿಯಾಗಿದೆ.

**ಜೂನ್ 13ರಂದು ಎಸ್‌ಐಟಿ ರಚನೆ:** ಟ್ರಸ್ಟ್‌ನ ಮನವಿ ಹಿನ್ನೆಲೆಯಲ್ಲಿ ಉತ್ತರ ಪ್ರದೇಶ ಸರ್ಕಾರ ಜೂನ್ 13ರಂದು ಮೂರು ಸದಸ್ಯರ ಎಸ್‌ಐಟಿ ರಚಿಸಿತ್ತು. ಲಖನೌ ವಿಭಾಗೀಯ ಆಯುಕ್ತ ವಿಜಯ್ ವಿಶ್ವಾಸ್ ಪಂತ್ ನೇತೃತ್ವದ ತಂಡದಲ್ಲಿ ಲಖನೌ ವಲಯದ ಐಜಿಪಿ ಕಿರಣ್ ಎಸ್. ಹಾಗೂ ಹಣಕಾಸು ಇಲಾಖೆಯ ವಿಶೇಷ ಕಾರ್ಯದರ್ಶಿ ನೀಲ್ ರತನ್ ಕುಮಾರ್ ಇದ್ದರು. ತಂಡ ಜೂನ್ 23ರಂದು ಪ್ರಾಥಮಿಕ ವರದಿ ಸಲ್ಲಿಸಿತ್ತು. ಅದರ ಆಧಾರದ ಮೇಲೆ ಜೂನ್ 25ರಂದು ಅಯೋಧ್ಯೆಯ ಶ್ರೀ ರಾಮಜನ್ಮಭೂಮಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

**ತನಿಖೆ ಇನ್ನೂ ಪೂರ್ಣಗೊಂಡಿಲ್ಲ**

ಚಂಪತ್ ರಾಯ್ ಹಾಗೂ ಅನಿಲ್ ಮಿಶ್ರಾ ಅವರಿಗೆ ಎಸ್‌ಐಟಿ ಕ್ಲೀನ್‌ಚಿಟ್ ನೀಡಿರುವುದರಿಂದ ಪ್ರಕರಣ ಸಂಪೂರ್ಣ ಮುಕ್ತಾಯಗೊಂಡಿಲ್ಲ. ದೇಣಿಗೆ ಕಳವು ಆರೋಪಕ್ಕೆ ಸಂಬಂಧಿಸಿದಂತೆ ಮತ್ತೊಂದು ತನಿಖೆ ಮುಂದುವರಿದಿದೆ. ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವ ಈ ತನಿಖೆಯ ಪ್ರಗತಿ ವರದಿಯನ್ನು ಎಸ್‌ಐಟಿ ಸಲ್ಲಿಸಬೇಕಾಗಿದೆ.

ಹೀಗಾಗಿ, ಎಸ್‌ಐಟಿ ವರದಿ ಚಂಪತ್ ರಾಯ್ಯ್ ಮತ್ತು ಅನಿಲ್ ಮಿಶ್ರಾ ವಿರುದ್ಧದ ಆರೋಪಗಳಿಗೆ ತಾತ್ಕಾಲಿಕವಾಗಿ ಪರಿಹಾರ ನೀಡಿದರೂ, ರಾಮ ಮಂದಿರದ ದೇಣಿಗೆ ನಿರ್ವಹಣೆಯಲ್ಲಿ ನಡೆದಿರುವ ಎನ್ನಲಾದ ಅಕ್ರಮಗಳ ಸಂಪೂರ್ಣ ತನಿಖೆ ಮುಂದುವರಿಯಲಿದೆ.

# ವಿದೇಶಿ ಆರೋಪಿಗಳಿಗೆ ಜಾಮೀನು: ಸುಪ್ರೀಂ ಕೋರ್ಟ್‌ನಿಂದ 13 ಕಠಿಣ ನಿರ್ದೇಶನ

**ನ್ಯಾ. ಸಂಜಯ್ ಕರೋಲ್ ಮತ್ತು ಆಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠ ನಿರ್ದೇಶನ**

**ನವದೆಹಲಿ, ಆ.18:** ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆಯಡಿ ದಾಖಲಿಸಿದ ಪ್ರಕರಣಗಳಲ್ಲಿ ಆರೋಪಿಯಾಗಿರುವ ವಿದೇಶಿ ಪ್ರಜೆಗಳಿಗೆ ಜಾಮೀನು ನೀಡುವ ಸಂದರ್ಭದಲ್ಲಿ ಮತ್ತಷ್ಟು ಕಟ್ಟುನಿಟ್ಟಿನ ಪರಿಶೀಲನೆ ನಡೆಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದೆ, ಇದಕ್ಕಾಗಿ 13 ಬದ್ಧ ನಿರ್ದೇಶನಗಳನ್ನು ನೀಡಿದೆ. ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಅಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠ ಈ ನಿರ್ದೇಶನಗಳನ್ನು ನೀಡಿದೆ. ವಿದೇಶಿ ಆರೋಪಿಗಳಿಗೆ ಜಾಮೀನು ನೀಡುವ ಮೊದಲು ಆರೋಪಿ ಹಾಗೂ ಜಾಮೀನುದಾರರ ಹಿನ್ನೆಲೆ, ವಿಳಾಸ, ಆಸ್ತಿ ಮತ್ತು ಹಣಕಾಸು ವಿವರಗಳನ್ನು ಪರಿಶೀಲಿಸಬೇಕು ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

**13 ನಿರ್ದೇಶನಗಳು:**

1) ವಿದೇಶಿ ಆರೋಪಿಯ ಪಾಸ್‌ಪೋರ್ಟ್ ಅನ್ನು ವಿಚಾರಣಾ ನ್ಯಾಯಾಲಯಕ್ಕೆ ಒಪ್ಪಿಸಬೇಕು.
2) ವಿದೇಶ ಪ್ರಯಾಣಕ್ಕೆ ನ್ಯಾಯಾಲಯದ ಪೂರ್ವಾನುಮತಿ ಕಡ್ಡಾಯ.
3) ಜಾಮೀನಿನ ಮೇಲೆ ಬಿಡುಗಡೆಯಾದ ಒಂದು ವಾರದೊಳಗೆ Foreigners Regional Registration Office (FRRO) ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಈ ಬಗ್ಗೆ ತನಿಖಾಧಿಕಾರಿ ಹಾಗೂ ನ್ಯಾಯಾಲಯಕ್ಕೆ ಲಿಖಿತವಾಗಿ ಮಾಹಿತಿ ನೀಡಬೇಕು ಎಂದು ಕೋರ್ಟ್ ಹೇಳಿದೆ.



4) ಜಾಮೀನಿಗೆ ಸಾಮಾನ್ಯವಾಗಿ ಇಬ್ಬರು ಜಾಮೀನುದಾರರು ಕಡ್ಡಾಯ. ಇಬ್ಬರನ್ನು ಒದಗಿಸಲು ಸಾಧ್ಯವಾಗದಿದ್ದರೆ ಕಾರಣವನ್ನು ದಾಖಲಿಸಿ ನ್ಯಾಯಾಲಯ ವಿನಾಯಿತಿ ನೀಡಬಹುದು.
5) ಜಾಮೀನುದಾರರ ಪರಿಶೀಲನೆಯನ್ನು ಮೂರು ದಿನಗಳೊಳಗೆ ಪೂರ್ಣಗೊಳಿಸಬೇಕು. ಪರಿಶೀಲನಾ ವರದಿ ಬಂದ ಬಳಿಕವೇ ಆರೋಪಿಯನ್ನು ಬಿಡುಗಡೆ ಮಾಡಬೇಕು.
6) ಆರೋಪಿಯ ಭಾರತದಲ್ಲಿನ ವಾಸಸ್ಥಳ ಮತ್ತು ಸಂಪರ್ಕ ವಿವರಗಳನ್ನು ಜಾಮೀನು ಆದೇಶದ ಮೂರು ದಿನಗಳೊಳಗೆ ಮತ್ತೊಮ್ಮೆ ಸ್ಥಳ ಪರಿಶೀಲನೆ ಮೂಲಕ ಖಚಿತಪಡಿಸಿಕೊಳ್ಳಬೇಕು ಎಂದು ನ್ಯಾಯಾಲಯ ಆದೇಶಿಸಿದೆ.
7) ಭಾರತದಲ್ಲಿನ ಆದಾಯ ಅಥವಾ ಹಣದ ಮೂಲ ಹಾಗೂ ಇಲ್ಲಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ಒಳಗೊಂಡ ಅಫಿಡವಿಟ್ ಸಲ್ಲಿಸಬೇಕು.
8) ಆರೋಪಿಯ ವಿರುದ್ಧದ ಪ್ರಕರಣದ ಕುರಿತು ತನಿಖಾಧಿಕಾರಿ ಸಂಬಂಧಪಟ್ಟ ರಾಯಭಾರ ಕಚೇರಿಗೆ ಅಧಿಕೃತವಾಗಿ ಮಾಹಿತಿ ನೀಡಬೇಕು. ವಿದೇಶಿ ಪ್ರಜೆಗಳಿಗೆ ಸಂಬಂಧಿಸಿದ NDPS ಪ್ರಕರಣಗಳಲ್ಲಿ ಆರೋಪಿಗಳು ಮತ್ತು ಜಾಮೀನುದಾರರ ವಿವರಗಳನ್ನು ಒಳಗೊಂಡ ಕೇಂದ್ರೀಕೃತ ಡೇಟಾಬೇಸ್ ರೂಪಿಸಬೇಕು.
9) ಜಾಮೀನುದಾರ ನಕಲಿ ಎಂದು ನಂತರ ಪತ್ತೆಯಾದರೆ, ಪರಿಶೀಲನೆಯಲ್ಲಿ ಭಾಗಿಯಾದ ಪೊಲೀಸ್, ನ್ಯಾಯಾಲಯದ ಸಿಬ್ಬಂದಿ ಅಥವಾ ಕಂದಾಯ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಬೇಕು.
10) ವಿದೇಶಿ ಆರೋಪಿಗೆ ಜಾಮೀನುದಾರರಾಗುವ ವ್ಯಕ್ತಿಯ ಆಸ್ತಿಯ ಮೇಲೆ ಬಾಂಡ್ ಮೊತ್ತಕ್ಕೆ ಸಮನಾದ ಲಿಯನ್ ದಾಖಲಿಸಬೇಕು.
110 ಜಾಮೀನು ಷರತ್ತು ಉಲ್ಲಂಘನೆಯಾದರೆ ನ್ಯಾಯಾಲಯ ಆ ಮೊತ್ತವನ್ನು ವಸೂಲಿ ಮಾಡಬಹುದು.
12) ಆಸ್ತಿ ಮತ್ತು ಹಣಕಾಸು ದಾಖಲೆಗಳ ತ್ವರಿತ ಪರಿಶೀಲನೆಗಾಗಿ ಹೈಕೋರ್ಟ್ ಐಟಿ ಸಮಿತಿ ಡಿಜಿಟಲ್ ಪೋರ್ಟಲ್‌ಗಳನ್ನು ರೂಪಿಸಬೇಕು.
13) ಕರ್ನಾಟಕ ಹೈಕೋರ್ಟ್‌ನಲ್ಲಿ ಈಗಾಗಲೇ ಅಳವಡಿಸಿರುವ ಮಾದರಿಯನ್ನು ಪರಿಗಣಿಸಬಹುದು. BNSS£À Form 47 ನಂತರ ಹೊಸ Form 47A ಸೇರಿಸಿ, ಸುಪ್ರೀಂ ಕೋರ್ಟ್ ರೂಪಿಸಿರುವ ಜಾಮೀನುದಾರರ ಹೊಣೆಗಾರಿಕೆಯ ಮಾದರಿಯನ್ನು ಅಳವಡಿಸಬೇಕು.

**ನಕಲಿ ಜಾಮೀನುದಾರರಿಂದ ಪ್ರಕರಣ ತಿರುವು**

ಈ ಪ್ರಕರಣವು ಮುಂಬೈ ವಿಮಾನ ನಿಲ್ದಾಣದಲ್ಲಿ ಸುಮಾರು 5 ಕೆ.ಜಿ. ಹೆರಾಯಿನ್ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದೆ. ವಿದೇಶಿ ಪ್ರಜೆ ಚಿಡಿಬೆರೆ ಕಿಂಗ್ಸ್ಲಿ ನವ್ಚಾರಾ ಅವರಿಗೆ ಬಾಂಬೆ ಹೈಕೋರ್ಟ್ ಜಾಮೀನು ನೀಡಿತ್ತು. ಬಳಿಕ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಸುಪ್ರೀಂ ಕೋರ್ಟ್ ಜಾಮೀನು ಆದೇಶಕ್ಕೆ ತಡೆ ನೀಡಿ ಆರೋಪಿಯನ್ನು ಬಂಧಿಸುವಂತೆ ಸೂಚಿಸಿತ್ತು. ಆದರೆ ಲುಕ್‌ಔಟ್ ಸರ್ಕ್ಯುಲರ್ ಹೊರಡಿಸಿದ್ದರೂ ಆರೋಪಿಯನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ನಂತರ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನಡೆದ ಪರಿಶೀಲನೆಯಲ್ಲಿ ಆರೋಪಿಯ ಪರವಾಗಿ ಸಲ್ಲಿಸಲಾಗಿದ್ದ ಜಾಮೀನುದಾರರೇ ಅಸ್ತಿತ್ವದಲ್ಲಿಲ್ಲ ಎಂಬುದು ಪತ್ತೆಯಾಯಿತು. ಇದರಿಂದ ಸಾಮಾನ್ಯ ಮೇಲ್ಮನವಿ ಪ್ರಕರಣವಾಗಿದ್ದ ವಿಚಾರ ಮತ್ತಷ್ಟು ಗಂಭೀರ ಸ್ವರೂಪ ಪಡೆದುಕೊಂಡಿತು. ಜಾಮೀನು ವ್ಯವಸ್ಥೆಯಲ್ಲಿನ ಇಂತಹ ಲೋಪಗಳು ನ್ಯಾಯ ವಿತರಣಾ ವ್ಯವಸ್ಥೆಯ ಮೇಲಿನ ನಂಬಿಕೆಗೆ ಧಕ್ಕೆ ತರುತ್ತವೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

# ಫ್ರೀಡಂ ಪಾರ್ಕ್‌ನಲ್ಲಿ ರೈತರ ರಣಕಹಳೆ: ಬಿಡದಿ ಟೌನ್‌ಶಿಪ್, ನೈಸ್ ಯೋಜನೆ ಅಕ್ರಮದಲ್ಲಿ ಡಿಕೆಶಿ ನೇರ ಶಾಮೀಲು: ಎಚ್.ಡಿ.ಕೆ ವಾಗ್ದಾಳಿ

**ಬೆಂಗಳೂರು, ಆ.18:** ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ ಮತ್ತು ವಿಧಾನಸೌಧ ಚಲೋ ಹಮ್ಮಿಕೊಂಡಿದ್ದ ಜೆಡಿಎಸ್ ಮುಖಂಡರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ವಿಶೇಷವಾಗಿ ಬಿಡದಿ ಹೋಬಳಿಯ ವಿವಿಧ ಹಳ್ಳಿಗಳಿಂದ ಫ್ರೀಡಂಪಾರ್ಕಿಗೆ ಬಂದಿದ್ದ ಸಾವಿರಾರು ರೈತ ಮಹಿಳೆಯರು ಸರ್ಕಾರದ ವಿರುದ್ಧ ದೊಡ್ಡ ಧ್ವನಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಎಚ್.ಡಿ. ಕುಮಾರಸ್ವಾಮಿ, ಸರ್ಕಾರ ಭಂಡತನ ಪ್ರದರ್ಶನ ಮಾಡುತ್ತಿದೆ. ಬಿಡದಿ ಟೌನ್‌ಶಿಪ್ ಮತ್ತು ನೈಸ್ ಯೋಜನೆಯ ಮೂಲಕ ಈ ಸರ್ಕಾರ ಖಾಸಗಿ ವ್ಯಕ್ತಿಗಳ ಜೊತೆ ಕುಮ್ಮಕ್ಕಾಗಿ ಸಾವಿರಾರು ಕೋಟಿ ರೂ. ಬೆಲೆಬಾಳುವ ಭೂಮಿಯನ್ನು ಲೂಟಿ ಮಾಡುತ್ತಿದೆ ಎಂದು ದೂರಿದರು.

**ಚರ್ಚೆಗೆ ಬರುವಂತೆ ಸವಾಲು:** ಕಾಂಗ್ರೆಸ್ ನಾಯಕರು ನಮಗೆ ಎರಡು ಪ್ರಶ್ನೆ ಮುಂದಿಟ್ಟಿದ್ದಾರೆ. ಬಿಡದಿ ಟೌನ್‌ಶಿಪ್ ಮತ್ತು ನೈಸ್ ಯೋಜನೆ ಪಿತಾಮಹರು ಕುಮಾರಸ್ವಾಮಿ ಮತ್ತು ದೇವೇಗೌಡರು ಎಂದು ಹೇಳುತ್ತಿದ್ದಾರೆ. ಆದರೆ, ಈ ವೇದಿಕೆಯಿಂದ ಕಾಂಗ್ರೆಸ್ ನಾಯಕರಿಗೆ ನೇರ ಸವಾಲು ಹಾಕುತ್ತೇನೆ. ಈ ಎರಡೂ ಯೋಜನೆಗಳ ಬಗ್ಗೆ ಏನೇನು ಆಗಿದೆ, ಶುರುವಾಗಿದ್ದೆಲ್ಲಿ, ಈಗ ಬಂದು ನಿಂತಿರುವುದು ಎಲ್ಲಿ ಎಂಬ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಲು ತಯಾರಿದ್ದೇನೆ. ಇತ್ತೀಚೆಗೆ ಫ್ರೀಡಂ ಹಬ್ಬ ಆಯೋಜಿಸಿದ್ದಿರಲ್ಲ ಅಲ್ಲೇ ಚರ್ಚಿಸೋಣ. ಚರ್ಚೆಗೆ ನಾನು ಸಿದ್ಧನಿದ್ದೇನೆ ಎಂದು ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದರು.

**ಎಲ್ಲವೂ ಸರ್ವನಾಶ**

ಎಲ್ಲವನ್ನೂ ಸರ್ವನಾಶ ಮಾಡುತ್ತಿದೆ ಈ ಸರ್ಕಾರ. ನೈಸ್ ಭೂಮಿ ನುಂಗಿದ್ದಾಯಿತು, ಈಗ ಬೇನಾಮಿ ಕಂಪನಿಗಳನ್ನು ಸೃಷ್ಟಿ ಮಾಡಿಕೊಂಡು ಇಡೀ ಯೋಜನೆಯನ್ನೇ ಕಬಳಿಸಲು ಹೊರಟಿದ್ದೀರಿ. ಬಿಡದಿಯಲ್ಲಿ ಫಲವತ್ತಾದ ರೈತರ ಭೂಮಿಯನ್ನು ಕಸಿದುಕೊಳ್ಳಲು ಹೊರಟಿದ್ದೀರಿ. ಎರಡು ಯೋಜನೆಗಳನ್ನು ರಿಯಲ್ ಎಸ್ಟೇಟ್ ದಂಧೆಕೋರರಿಗೆ ಒತ್ತೆಯಿಡಲು ಹೊರಟಿದ್ದೀರಿ. ಜನರ ರಕ್ತ, ಬೆವರು, ಅವರ ಕಷ್ಟದ ಬೆಲೆ ನಿಮಗೆ ಗೊತ್ತಾಗುವುದು ಹೇಗೆ? ಪಾರಂಪರಿಕ ಕಟ್ಟಡ ಕುಮಾರಕೃಪ ಅತಿಥಿಗೃಹವನ್ನೇ ಸರ್ವನಾಶ ಮಾಡಿದವರು ನೀವು. ಕೆಂಗಲ್ ಹನುಮಂತಯ್ಯನವರು ಕಟ್ಟಿದ ವಿಧಾನಸೌಧವನ್ನು ಹಾಳು ಮಾಡಲು ಹೊರಟವರು ನೀವು. ನಿಮ್ಮಂತವರಿಗೆ ರೈತರ ಕಷ್ಟಕಾರ್ಪಣ್ಯಗಳು ತಿಳಿಯುವುದಿಲ್ಲ ಎಂದು ಕುಮಾರಸ್ವಾಮಿ ಹರಿಹಾಯ್ದರು. ಈ ಎರಡು ಯೋಜನೆಗಳನ್ನು ನೀವು ಹೇಗೆಲ್ಲಾ ಬೆಳೆಸಿ ಹಾಳು ಮಾಡಿದಿರಿ ಎಂಬುದು ನಮಗಷ್ಟೇ ಅಲ್ಲ, ಇಡೀ ರಾಜ್ಯಕ್ಕೆ ಗೊತ್ತು. ಇಡೀ ದೇಶವೇ ಈ ದರೋಡೆಯನ್ನು ನೋಡುತ್ತಿದೆ. ಇತ್ತೀಚೆಗೆ ರಾಜ್ಯ ಹೈಕೋರ್ಟ್ ಏನೇನು ಅಭಿಪ್ರಾಯ ವ್ಯಕ್ತಪಡಿಸಿದೆ ಎಂಬುದು ನಿಮಗೆ ಗೊತ್ತಿಲ್ಲವೇ ಎಂದು ಸಚಿವ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯನ್ನು ತೀಕ್ಷ್ಣವಾಗಿ ಪ್ರಶ್ನಿಸಿದರು.

ಜೆಡಿಎಸ್ ರೈತರ ಪಕ್ಷ. ರಿಯಲ್ ಎಸ್ಟೇಟ್, ದಂಧೆಕೋರರು, ಬ್ರೋಕರ್, ದಳ್ಳಾಳಿ, ಭೂಕಳ್ಳರಿಂದ ಕಟ್ಟಿದ ಪಕ್ಷ ಅಲ್ಲ. ನನ್ನನ್ನು ಕರೆಂಟ್ ಕಳ್ಳ ಎಂದು ಹೇಳುತ್ತೀರಿ. ಲೂಲು ಮಾಲ್ ಕಟ್ಟಿದೆಯಲ್ಲಪ್ಪ! ಅದರ ಕೆಳಗಡೆ ಹೈಟೆನ್ಶನ್ ವೈರ್ ಹೋಗಿದೆಯಲ್ಲ.. ಅದನ್ನು ಭೂಮಿಯಲ್ಲಿ ಹೂತುಹಾಕಲು ಎಷ್ಟು ಅಕ್ರಮ ಮಾಡಿದ್ದೀರಿ ಎಂಬುದನ್ನು ಸ್ವಲ್ಪ ಹೇಳುವಿರಾ? ನನ್ನ ಪೋಸ್ಟರ್ ಅಂಟಿಸುವುದಕ್ಕೆ ಚಿತಾವಣೆ



ಮಾಡುತ್ತೀರಿ, ಇಂತಹ ಮಹಾನ್ ಅಕ್ರಮಗಳನ್ನು ಎಸಗಿರುವ ನಿಮ್ಮ ವಿರುದ್ಧ ಏನು ಅಂಟಿಸಬೇಕು ಎಂದು ಹೇಳುತ್ತೀರಾ ಎಂದು ಕುಮಾರಸ್ವಾಮಿ ಗುಡುಗಿದರು.

ನೈಸ್ ಬಗ್ಗೆ ಹೈಕೋರ್ಟ್ ಕಟುವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆಯಲ್ಲ, ಇದರ ಬಗ್ಗೆ ನಿಮ್ಮ ಮಂತ್ರಿಗಳು ನಿಮಗೆ ಹೇಳಿಲ್ಲವಾ ಮಿಸ್ಟರ್ ಡಿ.ಕೆ. ಶಿವಕುಮಾರ್.. ಪ್ರತಿಯೊಂದುಕ್ಕೂ ನಾ ಮುಂದು ತಾ ಮುಂದು ಹೇಳಿಕೆ ಕೊಡುವ ಪ್ರಿಯಾಂಕ ಖರ್ಗೆ, ಆಮೇಲೆ ಕೃಷ್ಣ ಬೈರೇಗೌಡರು ಈ ಬಗ್ಗೆ ಮಾತನಾಡದೆ ಮೌನ ವಹಿಸಿದ್ದಾರೆ ಎಂದು ಪ್ರಶ್ನಿಸಿದ ಕೇಂದ್ರ ಸಚಿವರು; ಯೋಜನೆಗೆ ನೈಸ್ ಕಂಪನಿ ಒಂದು ರೂಪಾಯಿ ಹೂಡಿಕೆ ಮಾಡಿಲ್ಲ. ಜನರಿಂದ ಕಸಿದುಕೊಂಡ ಭೂಮಿಯನ್ನು ಐಸಿಐಸಿಐ ಬ್ಯಾಂಕ್ ನಲ್ಲಿ ಒತ್ತೆ ಇಟ್ಟು ಹಣ ಪಡೆದು ಅರೆಬರೆ ಕೆಲಸ ಮಾಡಿದೆ. ಇದು ಇಡೀ ಭಾರತವೇ ಕಂಡು ಕೇಳರಿಯದ ಮಹಾನ್ ಅಕ್ರಮ ಎಂದು ಹೇಳಿದರು.

ನೈಸ್ ಭೂಮಿಯನ್ನು ಅನ್ಯ ಉದ್ದೇಶಕ್ಕೆ ಬಳಸುವ ಹಾಗೆಯೇ ಇಲ್ಲ. ಆದರೆ ಶೋಭಾ ಡೆವಲಪರ್ಸ್ ಅಪಾರ್ಟ್‌ಮೆಂಟ್ ಹೇಗೆ ಬಂತು ಎಂಬುದನ್ನು ಸ್ವಲ್ಪ ಹೇಳುವಿರಾ ಡಿ.ಕೆ.ಶಿವಕುಮಾರ್, ಇದು ಯಾರಪ್ಪನ ಆಸ್ತಿ? ಇದೇನು ನಿಮ್ಮಪ್ಪ ಕೆಂಪೇಗೌಡರು ಮಾಡಿದ್ದ ಆಸ್ತಿನಾ? ಇದಕ್ಕೆ ಎನ್‌ಒಸಿ ಕೊಟ್ಟಿದ್ದು ಯಾರು? ಆ ಗೌರಮ್ಮ ಮತ್ತು ಡಿ.ಕೆ. ಸುರೇಶ್ ಅನ್ನುವವರು ಯಾರಪ್ಪ? ಆ ನೈಸ್‌ನವನು ಅವರಿಬ್ಬರಿಗೆ ಅದು ಹೇಗೆ ಎನ್‌ಒಸಿ ಕೊಡಲು ಸಾಧ್ಯ ನಿಮ್ಮ ಯೋಗ್ಯತೆ ಎಲ್ಲರಿಗೂ ಗೊತ್ತಿದೆ. ಮುಖ್ಯಮಂತ್ರಿ ಆಗಿದ್ದೀರಿ, ಕೊನೆಪಕ್ಷ ಒಳ್ಳೆಯ ಕೆಲಸಗಳನ್ನು ಮಾಡಿ ಎಂದು ಡಿಕೆಶಿ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

**ಬೈರಮಂಗಲದಲ್ಲಿ ರೈತರ ಸಮ್ಮುಖದಲ್ಲಿ ಚರ್ಚೆ ಮಾಡೋಣ:** ನಾನು ಈಗಲೂ ಹೇಳುತ್ತಿದ್ದೇನೆ. ಬಿಡದಿ ವಿಷಯವನ್ನು ಭೈರಮಂಗಲದಲ್ಲಿ ರೈತರ ಮುಂದೆ ಕೂತು ಚರ್ಚೆ ಮಾಡೋಣ ಬನ್ನಿ. 2006–07ರಲ್ಲಿ ಬಿಡದಿ ವಿಚಾರದಲ್ಲಿ ನೀವು ಏನು ಭಾಷಣ ಮಾಡಿದ್ದೀರಿ ಎಂಬುದನ್ನು ಒಮ್ಮೆ ನೆನಪು ಮಾಡಿಕೊಳ್ಳಿ. ನಿಮ್ಮ ಪಕ್ಷದ ಮಾಜಿ ಮಂತ್ರಿ ಕಾಗೋಡು ತಿಮ್ಮಪ್ಪ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಸತ್ಯಶೋಧನಾ ಸಮಿತಿ ಏನು ವರದಿ ನೀಡಿದೆ ಎಂಬುದನ್ನು ದಯವಿಟ್ಟು ಓದಿಕೊಳ್ಳಿ. ಅದನ್ನು ಟ್ರೀಟ್ ಮಾಡಿ, ಬೇಕಾದರೆ ಅದನ್ನೇ ಪೋಸ್ಟರ್ಗಳಲ್ಲಿ ಮುದ್ರಿಸಿ, ಗೋಡೆಗೆ ಅಂಟಿಸಿ. ಬೇಡ ಎಂದವರು ಯಾರು ಎಂದು ಕುಮಾರಸ್ವಾಮಿ ಅವರು ಡಿಕೆಶಿಗೆ ಟಾಂಗ್ ಕೊಟ್ಟರು.

ಮಾಗಡಿ ಬಾಲಕೃಷ್ಣ ಮೂರು ಬಾರಿ ನನ್ನ ಪಕ್ಷದಿಂದ ಗೆದ್ದಿದ್ದರು. ಒಂದೇ ತಟ್ಟೆಯಲ್ಲಿ ಊಟ ಮಾಡಿದ್ದೇವೆ. ನೀನಾದರೂ ಹೇಳು, ಯಾವತ್ತಾದರೂ ನಮ್ಮ ತಂದೆ ಕಾನೂನುಬಾಹಿರ ಕೃತ್ಯಗಳನ್ನು ಮಾಡು ಎಂದು ನನಗೆ ಹೇಳಿದ್ದಾರಾ ಎಂದು ಮಾಗಡಿ ಬಾಲಕೃಷ್ಣ ಅವರನ್ನು ಕುಮಾರಸ್ವಾಮಿ ಪ್ರಶ್ನಿಸಿದರು. ಶಿವಕುಮಾರ್, ನಿಮ್ಮ ತಂದೆ ಕೆಂಪೇಗೌಡರು ನೀವು ಮುಖ್ಯಮಂತ್ರಿಗಳಾದ ಮೇಲೆ ಏನು ಮಾಡಬೇಕು ಎಂದು ಹೇಳಿದ್ದರು ಎಂಬುದನ್ನು ಸ್ವಲ್ಪ ಹೇಳುವಿರಾ ಈ ಜನ್ಮದಲ್ಲಿ ಈ ವ್ಯಕ್ತಿ ಬದಲಾಗುವ ಯಾವ ಲಕ್ಷಣವೂ ಇಲ್ಲ. ಅದು ಸಾಧ್ಯವೂ ಇಲ್ಲ. ಅತಿ ವಿನಯಂ ಧೂರ್ತ ಲಕ್ಷಣಂ. ಈ ವ್ಯಕ್ತಿಯ ಅಸಲಿಬಣ್ಣ ನನಗೆ ಗೊತ್ತಿದೆ. ಯಾವುದೇ ಕಾರಣಕ್ಕೂ ಬಿಡದಿ ರೈತರು ಸೋಲುವುದಕ್ಕೆ ಬಿಡುವುದಿಲ್ಲ ಎಂದು ಕುಮಾರಸ್ವಾಮಿ ಅವರು ಶಪಥ ಮಾಡಿದರು.

ನಾನು ಮುಖ್ಯಮಂತ್ರಿ ಆಗಿದ್ದಾಗ ಭೂಮಿ ಸ್ವಾಧೀನಕ್ಕೆ ನಿರ್ಧಾರ ಮಾಡಿರಲಿಲ್ಲ. ನೀವು ಮಾಡಿದ ದ್ರೋಹವನ್ನು ಇನ್ನೊಬ್ಬರ ತಲೆಗೆ ಕಟ್ಟುವ ಹುನ್ನಾರ ನಡೆಸಬೇಡಿ. ನೈಸ್ ಕಂಪನಿ ಅವನು ರೈತರಿಗೆ 20 ವರ್ಷವಾದರೂ ಹಣ ಕೊಟ್ಟಿಲ್ಲ. ಆದರೆ ಸಾವಿರಾರು ಎಕರೆ ಭೂಮಿಯನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದಾನೆ. ಅವನ ಜತೆ ನಿಮ್ಮದೇನು ಸಂಬಂಧ, ಪೊಲೀಸರಿಗೆ ನೇರವಾಗಿ ಹೇಳಲು ಬಯಸುತ್ತೇನೆ, ನನ್ನದು ಶಾಂತಿಯುತ ಕಾರ್ಯಕರ್ತರು ಇರುವ ಪಕ್ಷ. ರೊಚ್ಚಿಗೆರಿಸುವ ಪ್ರಯತ್ನ ಮಾಡಬೇಡಿ. ಮನಸ್ಸು ಮಾಡಿದರೆ ವಿಧಾನಸೌಧಕ್ಕೂ ನುಗ್ಗಿಸಬಲ್ಲೆ, ಎಚ್ಚರಿಕೆ ಇರಲಿ ಎಂದು ಕೇಂದ್ರ ಸಚಿವರು ಸ್ಪಷ್ಟ ಎಚ್ಚರಿಕೆ ನೀಡಿದರು. ನಿಮ್ಮ ಪಕ್ಷದಲ್ಲಿ ಟಿಬಿ ಜಯಚಂದ್ರ ಎಂಬ ನಾಯಕರಿದ್ದಾರೆ. ಅವರ ನೇತೃತ್ವದಲ್ಲಿ ಒಂದು ಸದನ ಸಮಿತಿ ರಚನೆಯಾಗಿತ್ತು. ಅವರು ಯೋಜನೆಯ ಬಗ್ಗೆ ಒಂದು ಬೃಹತ್ ವರದಿ ನೀಡಿದ್ದಾರೆ. ರೈತರನ್ನು ಭೇಟಿಯಾಗಲು ಬಿಡದಿ ಭಾಗಕ್ಕೆ ಬಂದಾಗ ಅವರಿಗೆ ಧಮ್ಕಿಹಾಕಿ ಹಲ್ಲೆ ನಡೆಸಲು ಯತ್ನಿಸಿದವರು ಯಾರು ಎನ್ನುವುದು ನಿಮಗೆ ಗೊತ್ತಿಲ್ಲವೇ. ಮಾಧ್ಯಮಗಳು ಹೋಗಿ ಜಯಚಂದ್ರ ಅವರನ್ನು ಕೇಳಿದರೆ ಅವರು ಸತ್ಯವನ್ನು ಹೇಳುತ್ತಾರೆ ಎಂದು ಸಚಿವರು ಹೇಳಿದರು.

**ರೈತರಿಗೆ ನೀವು ಯಾವ ಲೆಕ್ಕವೂ ಅಲ್ಲ:** ಈ ನೈಸ್ ಕಂಪನಿ ಅವನು ಚೌಕಾಸಿ ಮಾಡಲು ನನ್ನನ್ನು ಹುಡುಕಿಕೊಂಡು ಸಿಂಗಾಪುರಕ್ಕೆ ಬಂದಿದ್ದ. ಅವತ್ತು ಆತನನ್ನು ಮಾತನಾಡಿಸದೆ ವಾಪಸ್ ಕಳಿಸಿದ್ದೆ. ಆದರೆ ಅದೇ ವ್ಯಕ್ತಿಯ ಜೊತೆ ನಿಮ್ಮ ಸಂಬಂಧ ಏನು ಮಿಸ್ಟರ್ ಡಿ.ಕೆ.ಶಿವಕುಮಾರ್ ಎಂದು ಕೇಂದ್ರ ಸಚಿವರು ಆಕ್ರೋಶಭರಿತರಾಗಿ ಪ್ರಶ್ನಿಸಿದರು. ಕೇವಲ ಹೊರಗೆ ನಿಂತು ನಾನು ಜನಪರ ಎಂದು ಶೋ ಮಾಡುವುದಲ್ಲ. ರೈತರ ಬಗ್ಗೆ ಕಾಳಜಿ ಇದ್ದರೆ ಮೊದಲು ನೈಸ್ ವಶದಲ್ಲಿರುವ ಭೂಮಿಯನ್ನು ರೈತರಿಗೆ ವಾಪಸ್ ಕೊಡಿಸಿ. ಆಗ ನಿಮ್ಮನ್ನು ಮೆಚ್ಚುಕೊಳ್ಳುತ್ತೇನೆ. ರೈತರು ಸುಮ್ಮನೆ ಇದ್ದಾರೆ, ಅವರು ಅಸಹಾಯಕರು ಎಂದು ಭಾವಿಸುವುದು ಬೇಡ. ದೇಶದಲ್ಲಿ ಅವರು ಯಾವ ರೀತಿ ಹೋರಾಟಗಳನ್ನು ನಡೆಸಿದ್ದಾರೆ ಎಂಬುದನ್ನು ಮರೆಯಬೇಡಿ. ರೈತರಿಗೆ ನೀವು ಯಾವ ಲೆಕ್ಕವೂ ಇಲ್ಲ ಎಂದು ಡಿಕೆಶಿಗೆ ನೇರ ಎಚ್ಚರಿಕೆ ನೀಡಿದರು ಕೇಂದ್ರ ಸಚಿವರು.

---

### ಇಂದು ಚೆನ್ನೈಗೆ ಸಿಎಂ ಡಿ.ಕೆ.ಶಿವಕುಮಾರ್, ದಕ್ಷಿಣ ವಲಯ ಮಂಡಳಿ 31ನೇ ಆವೃತ್ತಿಯ ಸಭೆಯಲ್ಲಿ ಭಾಗಿ

# ಪ್ರಾದೇಶಿಕ ಅಭಿವೃದ್ಧಿ, ಅಂತಾರಾಜ್ಯ ವಿವಾದ ಬಗೆಹರಿಸಿಕೊಳ್ಳುವ ಕುರಿತು ಚರ್ಚೆ

**ಬೆಂಗಳೂರು, ಆ.18:** ಕಾವೇರಿ ನದಿ ನೀರು ಹಂಚಿಕೆ ವಿವಾದ ತೀವ್ರಗೊಂಡಿವೆ. ಈ ನಡುವೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮಿಳುನಾಡು ಪ್ರವಾಸ ಕೈಗೊಳ್ಳಲಿದ್ದಾರೆ. ಆಗಸ್ಟ್ 19 ಮತ್ತು 20ರಂದು ನಿಗದಿಯಾಗಿರುವ ದಕ್ಷಿಣ ವಲಯ ಮಂಡಳಿಯ (ಸೌತ್ ಕೌನ್ಸಿಲ್) 31ನೇ ಆವೃತ್ತಿಯ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್‌ಶಾ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಲಿದೆ. ದಕ್ಷಿಣ ಭಾರತದ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಪುದುಚೇರಿ ಹಾಗೂ ಆತಿಥೇಯ ತಮಿಳುನಾಡು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಹಿರಿಯ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಪ್ರಾದೇಶಿಕ ಅಭಿವೃದ್ಧಿ ಹಾಗೂ ಅಂತರರಾಜ್ಯ ವಿವಾದಗಳನ್ನು ಬಗೆಹರಿಸಿಕೊಳ್ಳುವುದು ಈ ಸಭೆಯ ಮುಖ್ಯ ಉದ್ದೇಶವಾಗಿದೆ. ಸಿಎಂ ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ಬುಧವಾರ ನಡೆಯಲಿರುವ ಎಐಸಿಸಿ ಕಾರ್ಯಕಾರಿ ಸಮಿತಿ ಸಭೆ ನಂತರ ನೇರವಾಗಿ ಚೆನ್ನೈಗೆ ಪ್ರಯಾಣಿಸಲಿದ್ದಾರೆ ಎಂದು ತಿಳಿದುಬಂದಿದೆ.

**ಸಭೆಯಲ್ಲಿ ಏನೆಲ್ಲಾ ಚರ್ಚೆಗಳಾಗಲಿವೆ:** ಈ ಸಭೆಯಲ್ಲಿ ಮೂರು ಪ್ರಮುಖ ವಿಷಯಗಳ ಕುರಿತು ಗಂಭೀರ ಚರ್ಚೆ ನಡೆಯಲಿದೆ. ನೆರೆರಾಜ್ಯಗಳ ನಡುವೆ ದೀರ್ಘಕಾಲದಿಂದ ನನೆಗುದಿಗೆ ಬಿದ್ದಿರುವ ನದಿ ನೀರು ಹಂಚಿಕೆ ಸಮಸ್ಯೆಗಳು, ಆತಂಕಗಳು ಹಾಗೂ



ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಎದುರಾಗಿರುವ ಅಡೆತಡೆಗಳ ಬಗ್ಗೆ ಚರ್ಚೆ ನಡೆಯಲಿದೆ ಎನ್ನಲಾಗುತ್ತಿದೆ.

ಪ್ರಾದೇಶಿಕ ಭದ್ರತೆ, ಗಡಿ ಭಾಗಗಳಲ್ಲಿ ನಡೆಯುವ ಅಪರಾಧಗಳ ಮೇಲ್ವಿಚಾರಣೆ ಹಾಗೂ ಸೈಬರ್ ಮಾಹಿತಿ ಹಂಚಿಕೆಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ದಕ್ಷಿಣ ರಾಜ್ಯಗಳ ಆಡಳಿತ ಮುಖ್ಯಸ್ಥರ ನಡುವೆ ಸಮಾಲೋಚನೆ ನಡೆಯಲಿದೆ.

ಮೇಕೆದಾಟು ಮತ್ತು ಕಾವೇರಿ ಬಗ್ಗೆ ಚರ್ಚೆಭೆಯಲ್ಲಿ ಕರ್ನಾಟಕದ ಹಿತಾಸಕ್ತಿಯನ್ನು ಬಲವಾಗಿ ಪ್ರತಿಪಾದಿಸಲು ಮೇಕೆದಾಟು ಸಮತೋಲನ ಜಲಾಶಯ ಯೋಜನೆಯ ಅನಿವಾರ್ಯತೆ ಹಾಗೂ ಮಳೆಯಾಗದ ಸಂಕಷ್ಟದ ಸಮಯದಲ್ಲಿ ಕಾವೇರಿ ನೀರು ಹಂಚಿಕೆ ನಿರ್ವಹಣೆಯ ಕುರಿತು ಕೇಂದ್ರ ಸರ್ಕಾರ ಮತ್ತು ತಮಿಳುನಾಡಿನ ಗಮನಕ್ಕೆ ತರಲಿದ್ದಾರೆ ಎನ್ನಲಾಗಿದೆ.

**ಸಿಎಂ ವಿಜಯ್ ಜತೆ ಡಿಕೆಶಿ ಚರ್ಚೆ ಸಾಧ್ಯತೆ:** ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸೂಚನೆಗಳು ಮತ್ತು ಕರ್ನಾಟಕದಲ್ಲಿ ಎದುರಾದ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಈ ಹಿಂದೆ ತಮಿಳುನಾಡು ಸಿಎಂ ಜೋಸೆಫ್ ವಿಜಯ್ ಅವರ ಬೆಂಗಳೂರು ಭೇಟಿ ಮುಂದೂಡಲ್ಪಟ್ಟಿತ್ತು. ಇದೀಗ ಚೆನ್ನೈ ಭೇಟಿಯ ವೇಳೆ ಸಿಎಂ ವಿಜಯ್ ಅವರೊಂದಿಗೂ ಡಿ.ಕೆ.ಶಿವಕುಮಾರ್ ಅವರು ಪ್ರತ್ಯೇಕವಾಗಿ ಚರ್ಚೆ ನಡೆಸುವ ಸಾಧ್ಯತೆಯಿದೆ. ಮೇಕೆದಾಟು ಯೋಜನೆಯಿಂದ ಎರಡೂ ರಾಜ್ಯಗಳಿಗೆ ಲಾಭವಿದೆ ಹೊರತು ತಮಿಳುನಾಡಿಗೆ ಯಾವುದೇ ನಷ್ಟವಿಲ್ಲ ಎಂಬುದನ್ನು ಸೌಹಾರ್ದಯುತವಾಗಿ ಮನವರಿಕೆ ಮಾಡಿಕೊಡಲು ಕರ್ನಾಟಕ ಸರ್ಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ. ಕಾವೇರಿ ವಿಚಾರದಲ್ಲಿ ಎರಡೂ ರಾಜ್ಯಗಳು ಸಂಯಮದಿಂದ ಮುಂದುವರೆದರೆ ಮಾತ್ರ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂಬ ಸಂದೇಶವನ್ನು ಈ ಸಭೆಯಲ್ಲಿ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎನ್ನಲಾಗುತ್ತಿದೆ.




ಸಿಎಂ ಡಿ ಕೆ ಶಿವಕುಮಾರ್ ಅವರನ್ನು ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಅವರು ವಿಧಾನಸೌಧದಲ್ಲಿ ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಇನ್ನೋರ್ವ ರಾಜ್ಯಸಭಾ ಸದಸ್ಯ ಮನ್ಸೂರ್ ಅಲಿಖಾನ್ ಅವರು ಇದ್ದರು.

---

# ದೇವರಾಜ ಅರಸು ಪ್ರಶಸ್ತಿಗೆ ಪ್ರೊ.ಪಿ.ವಿ.ನಂಜರಾಜ ಅರಸು ಆಯ್ಕೆ: ನಾಳೆ ಪ್ರಶಸ್ತಿ ಪ್ರದಾನ

**ಬೆಂಗಳೂರು, ಆ.18:** 2026–27ನೇ ಸಾಲಿನ ಡಿ.ದೇವರಾಜು ಅರಸು ಪ್ರಶಸ್ತಿಗೆ ಪ್ರೊ.ಪಿ.ವಿ.ನಂಜರಾಜ ಅರಸು ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್. ಎಸ್.ತಂಗಡಗಿ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ, ಸಾಮಾಜಿಕ ನ್ಯಾಯದ ಪರವಾಗಿ ಪ್ರೊ.ಪಿ.ವಿ.ನಂಜರಾಜ ಅರಸು ಅವರು ನಡೆಸಿದ ಹೋರಾಟ, ದೇವರಾಜು ಅರಸು ಅವರ ತತ್ವ–ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅವರ ಶ್ರಮ ಮತ್ತು ಪ್ರಾಧ್ಯಾಪಕರಾಗಿ ನೀಡಿದ ಕೊಡುಗೆಯಿಂದಾಗಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಲು ಡಾ.ಸಿ.ಎಸ್. ದ್ವಾರಕಾನಾಥ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿಯು ಪ್ರೊ.ನಂಜರಾಜ ಅವರನ್ನು ಆಯ್ಕೆ ಮಾಡಿದ್ದು, ಪ್ರಶಸ್ತಿಯು 5 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ವಿಧಾನಸೌಧದಲ್ಲಿ




ಇದೇ ಆ.20ರಂದು ಬೆಳಿಗ್ಗೆ 11ಗಂಟೆಗೆ ನಡೆಯುವ ದೇವರಾಜ ಅರಸು ಅವರ 111ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದು, ಇದಕ್ಕೂ ಮುನ್ನ ವಿಧಾನಸೌಧದ ಆವರಣದಲ್ಲಿರುವ ದೇವರಾಜ ಅರಸು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದಾರೆ ಎಂದರು.

ಹಿನ್ನೆಲೆ: ನಂಜರಾಜ ಅರಸ ಅವರು ಜುಲೈ 01, 1936ರಂದು ಜನಿಸಿದ್ದು, 1957ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಬಿ.ಎ.ಪದವಿ, 1959ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಎಂ.ಎ. ಹಿಂದಿ ಪದವಿ ಪಡೆದಿದ್ದಾರೆ. 1973ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದು, ಇಲ್ಲಿಯೇ 39 ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಇತಿಹಾಸ ಮತ್ತು ಸಂಸ್ಕೃತಿ ಕುರಿತು ಆಳವಾದ ಅಧ್ಯಯನ ನಡೆಸಿರುವ ನಂಜರಾಜ ಅರಸು ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್: ಒಂದು ದರ್ಶನ, ಮರೆಯಲಾಗದ ಮಹಾಚೇತನ ನಾಲ್ವಡಿ ಕೃಷ್ಣರಾಜ ಒಡೆಯರ್, ಮೈಸೂರು: ನೂರಿನ್ನೂರು ವರ್ಷಗಳ ಹಿಂದೆ, ಅಲಮೇಲಮ್ಮನ ಶಾಪ: ಒಂದು ಪರೀಕ್ಷೆ, ನಾನು ಕನ್ನಂಬಾಡಿಕಟ್ಟೆ: ಹೀಗೊಂದು ಆತ್ಮಕಥೆ ಹೀಗೆ ಇತಿಹಾಸಕ್ಕೆ ಸಂಬಂಧಿ ಸಿದ ಹಾಗೂ ಮೈಸೂರು ರಾಜಮನೆತನ, ಟಿಪ್ಪು ಸುಲ್ತಾನ್, ಸಾಮಾಜಿಕ – ರಾಜಕೀಯ ಇತಿಹಾಸದ ಕುರಿತು ವಿಶ್ಲೇಷಣಾತ್ಮಕ ಕೃತಿ ರಚಿಸಿದ್ದಾರೆ.

ದೇವರಾಜ ಅರಸು ಅವರ ಚಿಂತನೆಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರವಹಿಸಿದ ಹಾಗೂ ಇತಿಹಾಸ ಅಧ್ಯಯನ, ಸಾಹಿತ್ಯ ಕ್ಷೇತ್ರ, ಚಲನಚಿತ್ರ ನಿರ್ಮಾಣ ಹಾಗೂ ನಿರ್ದೇಶನ ಮಾಡಿದ್ದಾರೆ.

---

# ಡೇಂಜರ್ ಜೋನ್‌ನಲ್ಲಿ 25 ಕ್ಷೇತ್ರಗಳು, 5 ಕ್ಷೇತ್ರಗಳಲ್ಲಿ ಅತಿಹೆಚ್ಚು ಹೆಸರು ಹೊರಕ್ಕೆ

ಬೆಂಗಳೂರು, ಆ.18: ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಮನೆ–ಮನೆ ಸಮೀಕ್ಷೆ (ಎಸ್‌ಐಆರ್) ಪ್ರಕ್ರಿಯೆ ಅಧಿಕೃತವಾಗಿ ಮುಕ್ತಾಯಗೊಂಡಿದ್ದು, ಆಘಾತಕಾರಿ ಮಾಹಿತಿ ಹೊರಬಿದ್ದಿದೆ. ವರದಿಯ ಪ್ರಕಾರ, ಬೆಂಗಳೂರು ನಗರದಲ್ಲಿ ಬರೋಬ್ಬರಿ ಅರ್ಧಕ್ಕರ್ಧ (ಶೇ.50ರಷ್ಟು) ಮತದಾರರ ಹೆಸರುಗಳನ್ನು ಪಟ್ಟಿಯಿಂದ ಡಿಲೀಟ್ ಮಾಡಲಾಗಿದೆ.

**ಡೇಂಜರ್ ಜೋನ್‌ನಲ್ಲಿ 25 ಕ್ಷೇತ್ರಗಳು:** ಬೆಂಗಳೂರಿನ ಒಟ್ಟು 28 ವಿಧಾನಸಭಾ ಕ್ಷೇತ್ರಗಳ ಪೈಕಿ 25 ಕ್ಷೇತ್ರಗಳು 'ಡೇಂಜರ್ ಜೋನ್'ನಲ್ಲಿವೆ. ಈ ಕ್ಷೇತ್ರಗಳಲ್ಲಿ ಶೇ.40ರಿಂದ ಶೇ.50ರಷ್ಟು ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ. ವಿಶೇಷವಾಗಿ 5 ವಿಧಾನಸಭಾ ಕ್ಷೇತ್ರಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮತದಾರರ ಹೆಸರುಗಳು ಕಡಿತಗೊಂಡಿವೆ.

**ಅತಿಹೆಚ್ಚು ಹೆಸರು ಡಿಲೀಟ್ ಆದ 5 ಕ್ಷೇತ್ರಗಳು:** ಬೊಮ್ಮನಹಳ್ಳಿ (ಶಾಸಕ: ಸತೀಶ್ ರೆಡ್ಡಿ): 4,84,973 ಮತದಾರರ ಪೈಕಿ 2.67 ಲಕ್ಷಕ್ಕೂ ಹೆಚ್ಚು ಹೆಸರುಗಳು ಡಿಲೀಟ್ ಆಗಿದ್ದು, ಅತಿ ಹೆಚ್ಚು ಅಂದರೆ ಶೇ.55.06ರಷ್ಟು ಕಡಿತವಾಗಿದೆ. ದಾಸರಹಳ್ಳಿ (ಶಾಸಕ: ಮುನಿರಾಜು): ಒಟ್ಟು 4,71,922 ಮತದಾರರ ಪೈಕಿ 2,46,790 (ಶೇ. 52.88ರಷ್ಟು) ಹೆಸರುಗಳನ್ನು ತೆಗೆದು ಹಾಕಲಾಗಿದೆ. ಬಿಟಿಎಂ ಲೇಔಟ್ (ಶಾಸಕ: ರಾಮಲಿಂಗಾರೆಡ್ಡಿ): ಶೇ. 51.86ರಷ್ಟು ಮತದಾರರ ಹೆಸರು ಡಿಲೀಟ್ ಆಗಿದೆ. ವಿಜಯನಗರ (ಶಾಸಕ:ಎಂ.ಕೃಷ್ಣಪ್ಪ): ಒಟ್ಟು 3,20,773 ಮತದಾರರ ಪೈಕಿ 1,65,058 ಹೆಸರುಗಳು ಕಡಿತಗೊಂಡಿವೆ. ಸಿ.ವಿ. ರಾಮನಗರ (ಶಾಸಕ: ಟಿ. ರಘು): ಒಟ್ಟು 2,74,142 ಮತದಾರರ ಪೈಕಿ ಶೇ.51.36ರಷ್ಟು ಹೆಸರುಗಳು ಡಿಲೀಟ್ ಆಗಿವೆ.

**ಇತರ ಕ್ಷೇತ್ರಗಳ ಸ್ಥಿತಿಗತಿ:** ಗೋವಿಂದರಾಜನಗರ (ಶಾಸಕ: ಪ್ರಿಯಕೃಷ್ಣ): ಶೇ.48.85ರಷ್ಟು ಹೆಸರು ಕಡಿತ. ಬಸವನಗುಡಿ (ಶಾಸಕ: ರವಿ ಸುಬ್ರಮಣ್ಯ): ಶೇ.48.07ರಷ್ಟು ಡಿಲೀಟ್. ಪದ್ಮನಾಭನಗರ (ಶಾಸಕ: ಆರ್.ಅಶೋಕ್): ಶೇ. 43.54 ರಷ್ಟು ಹೆಸರುಗಳು ಡಿಲೀಟ್. ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಗಳನ್ನು ಗುರಿಯಾಗಿಸಿಕೊಂಡು ಮತದಾರರ ಹೆಸರನ್ನು ಡಿಲೀಟ್ ಮಾಡಲಾಗುತ್ತಿದೆ ಎಂಬ

---

### ಶಿವಶಂಕರಪ್ಪ ಸಾಹುಕಾರ್ ಮರುನೇಮಕಕ್ಕೆ ಹೈಕೋರ್ಟ್ ಸೂಚನೆ

# ಕೆಪಿಎಸ್‌ಸಿ ಅಧ್ಯಕ್ಷ ಸ್ಥಾನದಿಂದ ಅಮಾನತುಗೊಳಿಸಿದ್ದ ರಾಜ್ಯಪಾಲರ ಆದೇಶ ರದ್ದು

**ಬೆಂಗಳೂರು, ಆ.18:** ಪಶು ವೈದ್ಯಕೀಯ ನೇಮಕಾತಿಯಲ್ಲಿ ಅಕ್ರಮ ಹಾಗೂ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಸೇವಾ ಆಯೋಗ ಅಧ್ಯಕ್ಷ ಸ್ಥಾನದಿಂದ ಶಿವಶಂಕರಪ್ಪ ಸಾಹುಕಾರ್ ಅವರನ್ನು ಅಮಾನತುಗೊಳಿಸಿದ್ದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಅವರ ಆದೇಶವನ್ನು ಕರ್ನಾಟಕ ಹೈಕೋರ್ಟ್ ರದ್ದು ಮಾಡಿದೆ.

ಮಹತ್ವದ ಬೆಳವಣಿಗೆಯಲ್ಲಿ ಕೆಪಿಎಸ್‌ಸಿ ಅಧ್ಯಕ್ಷ ಸ್ಥಾನಕ್ಕೆ ಶಿವಶಂಕರಪ್ಪ



ಸಾಹುಕಾರ್ ಅವರನ್ನು ಮರುನೇಮಕಗೊಳಿಸುವಂತೆ ಸೂಚಿಸಿದೆ. ಕೆಪಿಎಸ್‌ಸಿ ಅಧ್ಯಕ್ಷರಾಗಿದ್ದ ಶಿವಶಂಕರಪ್ಪ ಸಾಹುಕಾರ್‌ರನ್ನು ಜುಲೈ 10ರಂದು ರಾಜ್ಯಪಾಲರು ಅಮಾನತು ಮಾಡಿದ್ದರು. ಈ ಸಂಬಂಧ ಶಿವಶಂಕರಪ್ಪ ಸಾಹುಕಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಸೂರಜ್ ಗೋವಿಂದರಾವ್ ಅವರಿದ್ದ ಹೈಕೋರ್ಟ್ ಪೀಠ ಮಹತ್ವದ ತೀರ್ಪು ನೀಡಿದೆ.

ಶಿವಶಂಕರಪ್ಪ ಅವರನ್ನು ಅಮಾನತುಗೊಳಿಸುವಂತೆ ಸಚಿವ ಸಂಪುಟ ಸಲಹೆ ಅಥವಾ ಶಿಫಾರಸು ಮಾಡಿಲ್ಲ. ರಾಜ್ಯಪಾಲರು ಸಚಿವ ಸಂಪುಟದ ತೀರ್ಮಾನವನ್ನಷ್ಟೇ ಅನುಸರಿಸಬೇಕು ಎಂದು ಕೋರ್ಟ್ ಹೇಳಿದ್ದು, 7 ದಿನಗಳಲ್ಲಿ ಕೆಪಿಎಸ್‌ಸಿ ಅಧ್ಯಕ್ಷರನ್ನಾಗಿ ಶಿವಶಂಕರಪ್ಪ ಸಾಹುಕಾರ್ ಅವರನ್ನು ಮರುನೇಮಕ ಮಾಡುವಂತೆ ಸೂಚಿಸಿದೆ.

---

# ಗೃಹ ಮಂಡಳಿ ನೂತನ ಅಧ್ಯಕ್ಷ ಶ್ರೀನಿವಾಸ ಮಾನೆ ಅವರನ್ನು ಅಭಿನಂದಿಸಿದ ಸಚಿವ ಮಧು ಬಂಗಾರಪ್ಪ

**ಬೆಂಗಳೂರು, ಆ.18**: ಕರ್ನಾಟಕ ಗೃಹ ಮಂಡಳಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ಹಾನಗಲ್ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಶ್ರೀನಿವಾಸ ಮಾನೆ ಅವರು ಇಂದು ಬೆಂಗಳೂರಿನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಅವರನ್ನು ಅವರ ಗೃಹ ಕಚೇರಿಯಲ್ಲಿ ಭೇಟಿ ಮಾಡಿದರು.

ಕರ್ನಾಟಕ ಗೃಹ ಮಂಡಳಿಯು ರಾಜ್ಯದ ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ವಸತಿ ಸೌಲಭ್ಯ ಕಲ್ಪಿಸುವುದು, ವಸತಿ ಯೋಜನೆಗಳ ಅನುಷ್ಠಾನ, ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸುಸಜ್ಜಿತ ಬಡಾವಣೆಗಳ ನಿರ್ಮಾಣ ಸೇರಿದಂತೆ ಮಹತ್ವದ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ಜನಪರ ಕಾಳಜಿ, ಕ್ಷೇತ್ರದ ಅಭಿವೃದ್ಧಿಯ ಬದ್ಧತೆ ಹಾಗೂ ಸಾರ್ವಜನಿಕ ಬದುಕಿನ ಅನುಭವ ಹೊಂದಿರುವ ಶ್ರೀನಿವಾಸ ಮಾನೆ ಅವರು ಗೃಹ ಮಂಡಳಿಯ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿ, ರಾಜ್ಯದ ಜನರಿಗೆ ಉತ್ತಮ ವಸತಿ ಸೌಲಭ್ಯಗಳನ್ನು ಕಲ್ಪಿಸುವ



ನಿಟ್ಟಿನಲ್ಲಿ ಪರಿಣಾಮಕಾರಿ ಕಾರ್ಯನಿರ್ವಹಿಸಲಿದ್ದಾರೆ ಎಂಬ ವಿಶ್ವಾಸವನ್ನು ಸಚಿವ ಮಧು ಬಂಗಾರಪ್ಪ ವ್ಯಕ್ತಪಡಿಸಿದರು.

ಭೇಟಿಯ ಸಂದರ್ಭದಲ್ಲಿ ಇಬ್ಬರೂ ನಾಯಕರು ರಾಜ್ಯದ ಅಭಿವೃದ್ಧಿ, ಜನಪರ ಯೋಜನೆಗಳು ಹಾಗೂ ವಿವಿಧ ಸಮಕಾಲೀನ ವಿಷಯಗಳ ಕುರಿತು ಚರ್ಚಿಸಿದರು.

---

## ಹೊಸೂರು ಮುಖ್ಯರಸ್ತೆಯ ಆಡುಗೋಡಿ ಪೊಲೀಸ್ ವಸತಿಗೃಹ ಎದುರಿನ ಪಾದಚಾರಿ ಮಾರ್ಗದ ಗೋಡೆಗಳ ಸೌಂದರ್ಯೀಕರಣ: ಆಯುಕ್ತ ರಮೇಶ್

**ಬೆಂಗಳೂರು, ಆ.18:** ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರದ ಆಡುಗೋಡಿಯ ಹೊಸೂರು ಮುಖ್ಯರಸ್ತೆಯಲ್ಲಿ ಸಾರ್ವಜನಿಕರಿಗೆ ಸಮಸ್ಯೆಯಾಗಿದ್ದ ಕಸದ ಬ್ಲಾಕ್ ಸ್ಪಾಟ್ ಅನ್ನು ಪಾಲಿಕೆಯಿಂದ ನಿರ್ಮೂಲನೆ ಮಾಡಲಾಗಿದೆ.

ಹೊಸೂರು ರಸ್ತೆಯ ಇಂದಿರಾ ಕ್ಯಾಂಟೀನ್‌ನಿಂದ ಆಡುಗೋಡಿ ಪೊಲೀಸ್ ಕ್ವಾರ್ಟರ್ಸ್‌ವರೆಗಿನ ಸುಮಾರು 500 ಮೀಟರ್ ಉದ್ದದ



ಪಾದಚಾರಿ ಮಾರ್ಗವನ್ನು ಸ್ವಚ್ಛಗೊಳಿಸಿ ಗೋಡೆಗಳ ಮೇಲೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಬರಹಗಳಿಂದ ಅಲಂಕರಿಲಾಗಿದೆ.

ಈ ಸೌಂದರ್ಯೀಕರಣ ಕಾರ್ಯದಲ್ಲಿ ಭಾಗಿಯಾದ ಆಯುಕ್ತ ಕೆ.ಎನ್. ರಮೇಶ್ , ಸಾರ್ವಜನಿಕರಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ತಾವೇ ಸ್ವತಃ ಗೋಡೆಯ ಮೇಲೆ ಚಿತ್ರ ಬರೆಯುವ ಮೂಲಕ ಗಮನ ಸೆಳೆದರು.

---

### ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಆಯೋಜನೆ

# ಉದ್ಯೋಗ ಮೇಳ: ವಿಶೇಷ ಚೇತನರಿಗೂ ಉತ್ತೇಜನ



ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ತರಬೇತಿ ಮತ್ತು ನಿಯೋಜನೆ ಕೇಂದ್ರದ ಸಹಯೋಗದಲ್ಲಿ ಸಮರ್ಥನಂ ಟ್ರಸ್ಟಿನ ವತಿಯಿಂದ ವಿಶೇಷ ಚೇತನರೂ ಸೇರಿದಂತೆ ಆಸಕ್ತ ಯುವಜನರಿಗಾಗಿ ಉದ್ಯೋಗ ಮೇಳ ಏರ್ಪಡಿಸಲಾಗಿತ್ತು.

ಸೆಂಟ್ರಲ್ ಕಾಲೇಜಿನ ನೂತನ ಶೈಕ್ಷಣಿಕ ವಿಭಾಗದ ಕಟ್ಟಡದಲ್ಲಿ ಆಯೋಜಿಸಲಾಗಿದ್ದ ಉದ್ಯೋಗ ಮೇಳವನ್ನು ವಿಶ್ವವಿದ್ಯಾನಿಲಯದ ತರಬೇತಿ ಮತ್ತು ನಿಯೋಜನೆ ಕೇಂದ್ರದ ನಿರ್ದೇಶಕರಾದ ಪ್ರೊ. ರಿತಿಕಾ ಸಿನ್ಹಾ ಉದ್ಘಾಟಿಸಿದರು.

ವಿಶೇಷ ಚೇತನರು ಸಕಾರಾತ್ಮಕ ಮನೋಭಾವ ಮತ್ತು ಆತ್ಮವಿಶ್ವಾಸದಿಂದ ಉತ್ತಮ ಬದುಕನ್ನು ರೂಪಿಸಿಕೊಳ್ಳಲು ಮುಂದಾಗಬೇಕೆಂದು ತಿಳಿಸಿದ ಅವರು ಅಗತ್ಯ ಸಂವಹನ ಕೌಶಲ್ಯವನ್ನು ರೂಪಿಸಿಕೊಳ್ಳುವಂತೆ ಸಲಹೆಯಿತ್ತರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಮರ್ಥನಂ ಟ್ರಸ್ಟಿನ ಉದ್ಯೋಗ ನಿಯೋಜನೆ ನಿರ್ದೇಶಕರಾದ ಕೆ.ಸತೀಶ್ ಕಳೆದ ಐದಾರು ವರ್ಷಗಳಲ್ಲಿ ಸುಮಾರು 30 ಸಾವಿರ ವಿಶೇಷ ಚೇತನರಿಗೆ ಉದ್ಯೋಗ ಕಲ್ಪಿಸಿದ್ದು ದೇಶದಲ್ಲಿ ಯುವತಿಯರೂ ಸೇರಿದಂತೆ ಒಂದು ಲಕ್ಷ ವಿಶೇಷ ಚೇತನರಿಗೆ ಉನ್ನತ ಶಿಕ್ಷಣ ಸೌಲಭ್ಯ ಒದಗಿಸಿರುವುದಾಗಿ ವಿವರಿಸಿದರು.

ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಿರ್ದೇಶಕರಾದ ಡಾ.ಟಿ.ಎನ್. ತಾಂಡವಗೌಡ ಮಾತನಾಡಿ, ವಿಶೇಷ ಚೇತನರು ಸೂಕ್ಷ್ಮಮತಿಗಳು ಮತ್ತು ಮಾನವೀಯ ಗುಣವುಳ್ಳವರಾಗಿದ್ದು ಜ್ಞಾನ ಮತ್ತು ಕೌಶಲ್ಯವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕೆಂದು ಉತ್ತೇಜಿಸಿದರು.

ಉದ್ಯೋಗ ಮೇಳದಲ್ಲಿ ವಿವಿಧ ರಂಗಗಳ ಒಟ್ಟು 27 ಕಂಪನಿಗಳು ಹಾಗೂ ವಿಶೇಷ ಚೇತನರೂ ಸೇರಿದಂತೆ ಮುನ್ನೂರಕ್ಕೂ ಹೆಚ್ಚು ಆಕಾಂಕ್ಷಿಗಳು ಪಾಲ್ಗೊಂಡಿದ್ದರು. ಅಭ್ಯರ್ಥಿಗಳ ಸಂದರ್ಶನದ ನಂತರ ಅರ್ಹತೆಗೆ ಅನುಗುಣವಾಗಿ ಉದ್ಯೋಗ ನಿಯೋಜನೆ ಪತ್ರಗಳನ್ನು ನೀಡಲಾಯಿತು.

ಸಮರ್ಥನಂ ಟ್ರಸ್ಟಿನ ನವೀನ್ ಶೌರಿ ಕಾರ್ಯಕ್ರಮ ನಿರೂಪಿಸಿದರು. ವಿಶ್ವವಿದ್ಯಾನಿಲಯದ ತರಬೇತಿ ಮತ್ತು ನಿಯೋಜನೆ ಕೇಂದ್ರದ ಪ್ರತಿನಿಧಿಗಳಾದ ಹರ್ಷ ಮತ್ತು ಸುಷ್ಮಾ ಉಪಸ್ಥಿತರಿದ್ದರು.

---

# ವಿಧಾನಸಭೆ ಅಧಿವೇಶನದ ಕಲಾಪ ವೀಕ್ಷಿಸಿ, ಪ್ರಜಾಪ್ರಭುತ್ವದ ಕಾರ್ಯವೈಖರಿ ಅರಿತ ವಿದ್ಯಾರ್ಥಿಗಳು

**ಬೆಂಗಳೂರು, ಆ.18:** ಮಂಡ್ಯ ತಾಲೂಕಿನ ಕೊತ್ತತ್ತಿ ಗ್ರಾಮದ ಶ್ರೀ ವಿದ್ಯಾ ಗಣಪತಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಮಂಗಳವಾರ ವಿಧಾನಸೌಧಕ್ಕೆ ಭೇಟಿ ನೀಡಿ, ವಿಧಾನಸಭೆಯ ಅಧಿ ವೇಶನದ ಕಲಾಪಗಳನ್ನು ವೀಕ್ಷಿಸಿದರು.

ಬಳಿಕ ವಿದ್ಯಾರ್ಥಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರಾದ ಮಧು ಬಂಗಾರಪ್ಪ ಅವರ ಕಚೇರಿಗೂ ಭೇಟಿ ನೀಡಿದರು. ವಿದ್ಯಾರ್ಥಿಗಳೊಂದಿಗೆ ಸಚಿವರು ಆತ್ಮೀಯವಾಗಿ ಸಂವಾದ ನಡೆಸಿದರು. ವಿದ್ಯಾರ್ಥಿಗಳು ಕೂಡ ವಿಧಾನಸಭೆಯ ಕಲಾಪ ವೀಕ್ಷಿಸಿದ ಅನುಭವವನ್ನು ಸಚಿವರೊಂದಿಗೆ ಹಂಚಿಕೊಂಡು, ಸದನದ ಕಾರ್ಯ ವೈಖರಿ ಕುರಿತು ಕುತೂಹಲದಿಂದ ಪ್ರಶ್ನೆಗಳನ್ನು ಕೇಳಿದರು.

ಶಾಲಾ–ಕಾಲೇಜುಗಳಲ್ಲಿನ ಪಠ್ಯಾಧಾರಿತ ಕಲಿಕೆಯ ಜೊತೆಗೆ, ನಮ್ಮ ಆಡಳಿತ ವ್ಯವಸ್ಥೆ, ಶಾಸಕಾಂಗದ ಕಾರ್ಯವೈಖರಿ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ನೇರವಾಗಿ ಅರಿಯಲು ಇಂತಹ ಶೈಕ್ಷಣಿಕ ಭೇಟಿಗಳು ಮಕ್ಕಳಿಗೆ ಅತ್ಯಂತ ಸಹಕಾರಿಯಾಗಿವೆ. ವಿಧಾನಸೌಧದಂತಹ ಪ್ರಜಾ ಪ್ರಭುತ್ವದ ಪ್ರಮುಖ ಕೇಂದ್ರಕ್ಕೆ ಭೇಟಿ ನೀಡುವುದರಿಂದ ವಿದ್ಯಾರ್ಥಿಗಳಲ್ಲಿ ಸಂವಿಧಾನ, ಆಡಳಿತ ವ್ಯವಸ್ಥೆ ಹಾಗೂ ಸಾರ್ವಜನಿಕ ಬದುಕಿನ ಕುರಿತು ಹೆಚ್ಚಿನ ಆಸಕ್ತಿ ಮತ್ತು ಅರಿವು ಮೂಡಲು ಸಾಧ್ಯವಾಗುತ್ತದೆ ಎಂದರು.

# ಕಲ್ಯಾಣ ಕರ್ನಾಟಕ ಸಾರಥ್ಯಕ್ಕೆ ಶಾಸಕರ ಹಿಂಜರಿತ

**ಕಲಬುರಗಿ, ಏ. 18:** ಇತ್ತೀಚಿನ ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಹತ್ತು ಜಿಲ್ಲೆಗಳಿಗೆ ಪ್ರಾಶಸ್ತ್ಯ ದೊರೆತಿಲ್ಲ. ಅದರಲ್ಲಿ ಕಲ್ಯಾಣ ಕರ್ನಾಟಕದ ಯದಗಿರಿ, ರಾಯಚೂರು ಮತ್ತು ವಿಜಯನಗರ ಜಿಲ್ಲೆಗಳಿಗೂ ಪ್ರಾಧಾನ್ಯ ದೊರೆಯದೇ ಶಾಸಕರು ಅಸಮಾಧಿನಿತರಾಗಿದ್ದಾರೆ. ಅಲ್ಲದೇ ಈಗಾಗಲೇ ಎಲ್ಲ ಸಚಿವ ಸ್ಥಾನಗಳೂ ಭರ್ತಿಯಾಗಿರುವುದರಿಂದ ಮತ್ತೆ ಸಚಿವ ಸ್ಥಾನ ದೊರೆಯುವ ಭರವಸೆ ಕಮರಿಹೋಗಿದೆ.

ಇಂಥ ಅಸಮಾಧಾನಿತ ಅತೃಪ್ತ ಶಾಸಕರಿಗೆ ಸಾಮಾನ್ಯವಾಗಿ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ನಿಡುವುದು ವಾಡಿಕೆ. ಇಂಥ ಮಂಡಳಿಗಳಲ್ಲಿ ವಾರ್ಷಿಕ 5000 ಸಾವಿರ ಕೋಟಿ ಬಜೆಟ್ ಹೊಂದಿರುವ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯೂ ಅತ್ಯಂತ ಪ್ರಮುಖವಾಗಿದೆ. ಹಿಂದೆ ಸಚಿವರಿಗೆ ಮಾತ್ರ ಅಧ್ಯಕ್ಷ ಸ್ಥಾನ ನೀಡಲಗುತ್ತಿತ್ತು. ಯಡಿಯೂರಪ್ಪ ಅವರ ಕಾಲದಲ್ಲಿ ಶಾಸಕರಿಗೂ ನೀಡುವ ತಿದ್ದುಪಡಿಯೊಂದಿಗೆ ಅಂದು ಸಚಿವ ಸ್ಥಾನ ದೊರೆಯದೇ ಅಸಮಾಧಾನಿತ ಅತೃಪ್ತ ಶಾಸಕ ದತ್ತಾತ್ರೇಯ ಪಾಟೀಲ್ ಅವರಿಗೆ ಮಂಡಳಿಯ ಅಧ್ಯಕ್ಷ ಸ್ಥಾನ ನೀಡಲಾಯಿತು.

ಅನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷವೂ ಕೂಡ ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ಮೂರು ಬಾರಿ ಶಾಸಕರಾಗಿದ್ದ ಡಾ. ಅಜಯಸಿಂಗ್ ಅವರಿಗೆ ಶಾಸಕ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಸ್ಥಾನ ನೀಡಲಾಯಿತು. ಇದೀಗ ಡಿ.ಕೆ.ಶಿವಕುಮಾರ ಅವರ ಸರ್ಕಾರದಲ್ಲಿ ಮತ್ತೆ ಯಾದಗಿರಿ, ರಾಯಚೂರು ಮತ್ತು ವಿಜಯನಗರ ಜಿಲ್ಲೆಗಳಿಗೆ ಸಚಿವ ಸ್ಥಾನ ದೊರೆಯದೇ ವಂಚಿತವಾಗಿವೆ. ಮತ್ತಷ್ಟು ಶಾಸಕರಿಗೆ ಸಚಿವ ಸ್ಥಾನ ನೀಡಲು ಎಲ್ಲ ಸ್ಥಾನಗಳೂ ಭರ್ತಿಯಾಗಿರುವುದರಿಂದ ಅವಕಶವೇ ಇಲ್ಲ. ಹೀಗಾಗಿ ನಿಗಮ ೦ಂಡಳಿಗಳಿಗೆ ಹೊಂದಾಣಿಕೆ ಮಾಡುವುದು ಅನಿವಾರ್ಯ. ಅವುಗಳಲ್ಲಿ ಯಾದಗಿರಿ, ರಾಯಚೂರು ಜಿಲ್ಲೆಗಳ ಅಧ್ಯಕ್ಷ ಪಟ್ಟಕ್ಕೇರಲು ಅರ್ಹರು ತೆರೆಮರೆಯಲ್ಲಿ ಪ್ರಯತ್ನ ನಡೆಸಿದ್ದರ ನಡುವೆ ಕೆಲ ಶಾಸಕರು ತೆಗೆದುಕೊಳ್ಳುವುದಾ ಅಥವಾ ಬೇಡವಾ ಎಂಬ ಗೊಂದಲಕ್ಕೆ ಸಿಲುಕಿದ್ದಾರೆ.

ವಾರ್ಷಿಕ 5000 ಕೋಟಿ ಅನುದಾನ ಜತೆ ಮಿನಿ ಸರ್ಕಾರದಂತಿರುವ ಮಂಡಳಿಗೆ ಅಧ್ಯಕ್ಷರಾದವರು ಮುಂದಿನ ಚುನಾವಣೆಯಲ್ಲಿ ಸೋಲುತ್ತಾರೆ ಎಂಬ ಭಯವಿದೆಯಂತೆ! ಬೆಟ್ಟದಷ್ಟು ಆಸೆ ಇದ್ದರೂ ಹಿಂದೆ–ಮುಂದೆ ನೋಡುತ್ತಿದ್ದಾರೆ ಎಂಬ ಗುಸುಗುಸು ಕೇಳಿಬರುತ್ತಿವೆ

ಕಾರಣ, ಇದುವರೆಗೆ ಆರು ಜನ ಮಂಡಳಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರಲ್ಲಿ ಅವಧಿ ಮುಗಿದ ಬಳಿಕ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ನಾಲ್ವರು ಸೋಲುಂಡಿದ್ದಾರೆ. ಹೀಗಾಗಿ ಈಗ ಅಧ್ಯಕ್ಷರಾದರೆ 2028ರ ಚುನಾವಣೆಯಲ್ಲಿ ಗೆಲ್ಲುತ್ತೇವೋ–ಇಲ್ಲವೋ? ಹಿಂದಿನವರಂತೆ ಪರಾಭವಗೊಂಡರೆ ಹೇಗೆ? ಎಂಬ ಅನುಮಾನದ ಭೂತ ಅವರರಿಗೆ ಕಾಡುತ್ತಿದೆ ಎನ್ನಲಾಗಿದೆ.

ಶಾಸಕರಷ್ಟೇ ಅಲ್ಲ, ಅವರ ಕುಟುಂಬಸ್ಥರು ಮತ್ತು ಬೆಂಬಲಿಗರನ್ನೂ ಈ ಸಂಶಯ ಕಾಡುತ್ತಿದೆ. ಸಾಹೇಬ್ರೆ ಕೆಕೆಆರ್‌ಡಿಬಿ ಬಿಟ್ಟು ಬೇರೆ ಯಾವುದಾದರೂ ತೆಗೆದುಕೊಳ್ಳಿ,



ಸಚಿವ ಡಾ.ಶರಣಪ್ರಕಾಶ ಪಾಟೀಲ್, ಮಾಜಿ ಮಂತ್ರಿಗಳಾದ ಬಸವರಾಜ ರಾಯ ರೆಡ್ಡಿ, ರಾಜಶೇಖರ ಪಾಟೀಲ್ ಹುಮನಾಬಾದ್ ಮತ್ತು ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ ಎಲ್ಲರೂ ಸೋತಿದ್ದು ಕಣ್ಣೆದುರೇ ಇದೆ. ಗೊತ್ತಿದ್ದು ಗೊತ್ತಿದ್ದು ಹಾಳಬಾವಿಗೆ ಬೀಳುವುದು ಬೇಡ ಎಂದು ಮನವಿ ಮಾಡುತ್ತಿರುವ ಗುಸುಗುಸು ಹರಿದಾಡುತ್ತಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸರ್ಕಾರದ ಎರಡನೇ ಹಂತದ ಸಂಪುಟ ರಚನೆಯಾಗುತ್ತಲೇ ಸಚಿವ ಸ್ಥಾನ ತಪ್ಪಿಸಿಕೊಂಡವರು ಭಾರಿ ಅಸಮಾಧಾನ ದೊಂದಿಗೆ ಇನ್ನೇನು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿಯೇ ನೀಡುತ್ತಾರೆ ಎನ್ನುವಷ್ಟರ ಮಟ್ಟಿಗೆ ಇದ್ದ ಕಾವು ಈಗ ತಣ್ಣಗಾಗಿದೆ. ರಾಜಿನಾಮೆ ಕೊಡುವವರು ಕೊಟ್ಟು ಬಿಡಿ, ಐದು ನಿಮಿಷದಲ್ಲಿ ಅಂಗೀಕರಿಸುವೆ ಎಂದು ಸಿಎಂ ಹೇಳಿದ ಬೆನ್ನಲ್ಲೇ ಎಲ್ಲರೂ ತಣ್ಣಗಾಗಿದ್ದಾರೆ. ರಾಜಿನಾಮೆ ಬೆದರಿಕೆಯೊಡ್ಡಿದವರೂ ಕೂಡ ಯುಟರ್ನ ಹೊಡೆದಿದ್ದಾರೆ.

ಭಾರಿ ಬಜೆಟ್‌ನ ನಿಗಮ ಮಂಡಳಿಗಳ ಮೇಲೆ ಕೆಲವರು ಆಸೆ ಇಟ್ಟುಕೊಂಡು ಪಡೆಯಲು ಪ್ರಯತ್ನದಲ್ಲಿ ಇರುವುವಾಗಲೇ ವಾರ್ಷಿಕ 5000 ಕೋಟಿ ರೂ. ಬಜೆಟ್‌ನ ಕೆಕೆಆರ್‌ಡಿಬಿ ಸಾರಥ್ಯ ವಹಿಸಲು ಅರ್ಹ ಶಾಸಕರಲ್ಲಿ ಅನೇಕರು ನಿರಾಸಕ್ತಿ ತೋರುತ್ತಿರುವ ವಿಷಯ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರದಲ್ಲಿ ಅಚ್ಚರಿ ಮೂಡಿಸಿದೆ. ಇಂಥದರಲ್ಲೂ ಮುಂದಿನದ್ದು ಯಾರು ನೋಡಿದ್ದಾರೆ? ಆದುದ್ದು ಆಗಲಿ ಎಂಬ ಧೈರ್ಯ ಮಾಡಿ ಈ ಸ್ಥಾನಕ್ಕೆ ಲಾಬಿ ನಡೆಸುತ್ತಿರುವವರೂ ಇದ್ದಾರೆ

## 20 ಶಾಸಕರಲ್ಲಿ ಒಬ್ಬರಿಗೆ ಅವಕಾಶ

**ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಾರಥ್ಯ ವಹಿಸಲು ಈ ಭಾಗದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆ ಸೇರಿ ಆಡಳಿತಾರೂಢ ಕಾಂಗ್ರೆಸ್‌ನ 26 ಶಾಸಕರಿದ್ದಾರೆ. ಅವರಲ್ಲಿ ಈಶ್ವರ ಖಂಡ್ರೆ, ಪ್ರಿಯಾಂಕ್ ಖರ್ಗೆ, ಡಾ.ಶರಣಪ್ರಕಾಶ ಪಾಟೀಲ್, ಡಾ.ಅಜಯಸಿಂಗ್, ಶಿವರಾಜ ತಂಗಡಗಿ, ಬಸವರಾಜ ರಾಯರೆಡ್ಡಿ ಸಚಿವರಾಗಿದ್ದಾರೆ. ಉಳಿದ 20 ಶಾಸಕರಲ್ಲಿ ಬಳ್ಳಾರಿ ಜಿಲ್ಲೆಯ ಆರು, ವಿಜಯನಗರದ ಇಬ್ಬರು, ರಾಯಚೂರಿನ ನಾಲ್ವರು, ಯಾದಗಿರಿಯ ಮೂವರು, ಕಲಬುರಗಿ ಜಿಲ್ಲೆಯ ನಾಲ್ವರು ಮತ್ತು ಬೀದರ್‌ನ ಒಬ್ಬರಲ್ಲಿ ಅಧ್ಯಕ್ಷ ಸ್ಥಾನ ನೀಡಬೇಕಾಗುತ್ತದೆ. ಪ್ರಾದೇಶಿಕತೆ, ಜಾತಿ, ಹಿರಿತನ ಹೀಗೆ ವಿವಿಧ ಅಂಶ ಪರಿಗಣಿಸಿಯೇ ನೇಮಕ ಮಾಡಲಾಗುತ್ತದೆ.**

## ಯಾರಿಗೆ ಗದ್ದುಗೆ?

**ರಾಯಚೂರು ಜಿಲ್ಲೆಯ ಮಾನ್ವಿಯ ಹಂಪಣ್ಣ ನಾಯಕ, ಸಿಂಧನೂರಿನ ಹಂಪಣ್ಣಗೌಡ ಬಾದರ್ಲಿ, ಮಸ್ಕಿಯ ಬಸನಗೌಡ ತುರ್ವಿಹಾಳ್, ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ, ಕಲಬುರಗಿ ಜಿಲ್ಲೆಯ ಆಳಂದನ ಬಿ.ಆರ್. ಪಾಟೀಲ್, ಅಫಜಲಪುರದ ಎಂ.ವೈ.ಪಾಟೀಲ್, ಯಾದಗಿರಿ ಜಿಲ್ಲೆಯ ಶಹಾಪುರದ ಶರಣಬಸಪ್ಪ ದರ್ಶನಾಪುರ ಹಿರಿಯ ಶಾಸಕರು. ಇನ್ನು ಕೊಪ್ಪಳದ ರಾಘವೇಂದ್ರ ಹಿಟ್ನಾಳ, ಬೀದರ್‌ನ ರಹೀಮ್ ಖಾನ್, ಕಲಬುರಗಿ ಉತ್ತರದ ಕ್ಷೇತ್ರದ ಕನೀಜ್ ಫಾತಿಮಾ, ಕಲಬುರಗಿ ದಕ್ಷಿಣ ಕ್ಷೇತ್ರದ ಅಲ್ಲಮಪ್ರಭು ಪಾಟೀಲ್, ಯಾದಗಿರಿಯ ನಗರದ ಚನ್ನಾರಡ್ಡಿ ಪಾಟೀಲ್ ತುನ್ನೂರ ಕೆಕೆಆರ್‌ಡಿಬಿ ಗದ್ದುಗೇರಲು ಅರ್ಹ ಶಾಸಕರು. ಈಗ ಏನಾದರಾಗಲಿ ಒಂದು ಕೈ ನೋಡೇ ಬಿಡೋಣ ಎಂದು ಅಧ್ಯಕ್ಷ ಸ್ಥಾನದ ಪಟ್ಟಕ್ಕೇರಲು ಸಿದ್ಧವಾಗಿದ್ದಾರೆನ್ನಲಾಗಿದೆ.**



ಗ್ರಾಮ ಪಂಚಾಯಿತಿಗಳಿಗೆ ಪರಿಷ್ಕೃತ ವೇತನ ಜಾರಿಗೆ ತರುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಸದಸ್ಯರು ಮಂಗಳವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿದರು.

# ಗಂಭೀರ ಸ್ವರೂಪದ ಆರೋಪ ಎದುರಿಸುತ್ತಿರುವಸಚಿವ ನಾಗೇಂದ್ರ ಸಂಪುಟದಿಂದ ವಜಾಕ್ಕೆ ಆಗ್ರಹಿಸಿ ಬಿಜೆಪಿ ಹೋರಾಟ



**ಕಲಬುರಗಿ, ಆ. 18:** ಸುಮಾರು 187 ಕೋಟಿ ರೂ.ಗಳ ಹಗರಣದ ಗಂಭೀರ ಸ್ವರೂಪದ ಆರೋಪ ಹೊತ್ತಿರುವ ಸಚಿವ ಬಿ. ನಾಗೇಂದ್ರ ಅವರಿಗೆ ಮತ್ತೆ ಸಚಿವ ಸಂಪುಟಕ್ಕೆ ಸೇರಿಸಿಕೊಂಡಿದ್ದು ಖಂಡಿಸಿ ಹಾಗೂ ಕೂಡಲೇ ಬಿ. ನಾಗೇಂದ್ರ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ಒತ್ತಾಯಿಸಿ ನಗರದಲ್ಲಿ ಬಿಜೆಪಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ನಡುಬೀದಿಯಲ್ಲಿ ಟೈರ್‌ಗೆ ಬೆಂಕಿ ಹಚ್ಚಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾ ಗ್ರಾಮಾಂತರ ಘಟಕದ ಅಧ್ಯಕ್ಷ ಅಶೋಕ್ ಬಗಲಿ, ಚಂದುಪಾಟೀಲ್ ನೇತೃತ್ವದಲ್ಲಿ ಮಾಜಿ ಸಂಸದ ಡಾ. ಉಮೇಶ್ ಜಾಧವ್, ಮಾಜಿ ಶಾಸಕ ಸುಭಾಷ್ ಗುತ್ತೇದಾರ್, ಮನಕರ್, ಸವಿತಾ ಪಾಟೀಲ್, ಶೋಭಾ ಬಾಗೇವಾಡಿ, ಇಂದಿರಾ ಬನಶೆಟ್ಟಿ, ಶೋಭಾ ಬಾಣಿ, ಚಂದಮ್ಮ ಪಾಟೀಲ್, ವಿಜಯಲಕ್ಷ್ಮಿ ಗೊಬ್ಬರಕರ್, ಶಶಿಕಲಾ ತೆಂಗಳಿ, ಸಪ್ನಾ ಮಂಗಲಿ, ನಂದ ಬಾಬಾ, ಸುವರ್ಣ ಪಾಟೀಲ್, ಜೈ ಶ್ರೀ ಮುಚಳಂಬಿ, ಮೀನಾಕ್ಷಿ ಶೆಟ್ಟಿ, ವರದ ಶಂಕರ್ ಶೆಟ್ಟಿ, ಮಂಜು ಚೀಲಶೆಟ್ಟಿ, ವಿಜಯ್ ಕುಮಾರ್ ಬಿ.ಕೆ., ಶರಣು ಸೀಗಿ, ಶಾಂತು ದುಧಾನಿ, ಸಂತೋಷ ಸಾಗೊಳ್ಗಿ, ಜಿಲ್ಲಾಮಾಧ್ಯಮ ಸಂಚಾಲಕ ಆನಂದ ಪಾಟೀಲ್, ಸಹ ಸಂಚಾಲಕ ಬಾಬುರಾವ್ ಹಾಗರಗುಂಡಗಿ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ಬಳಿಕ ಜಿಲ್ಲಾಧಿ ಕಾರಿ ಕಚೇರಿ ಎದುರು ಟೈರ್‌ಗೆ ಬೆಂಕಿ ಹಚ್ಚಿಆಕ್ರೋಶ ವ್ಯಕ್ತಪಡಿಸಿದರು.

ಬಿ. ನಾಗೇಂದ್ರ ಅವರನ್ನು ಯಾವುದೇ ವಿಳಂಬವಿಲ್ಲದೆ ಸಚಿವ ಸಂಪುಟದಿಂದ ಕೈಬಿಡಬೇಕು. ವಾಲ್ಮೀಕಿ ಹಗರಣದ ತನಿಖೆ ಪೂರ್ಣಗೊಳ್ಳುವವರೆಗೆ ಅವಯಿರಿಗೆ ಸಚಿವ ಸ್ಥಾನ ನೀಡಬಾರದು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಸರ್ಕಾರವು ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಹೇಳಿಕೊಂಡು, ಪ್ರಕರಣ ಎದುರಿಸುತ್ತಿರುವವ್ಯಕ್ತಿಯನ್ನು ಮತ್ತೆ ಸಚಿವರನ್ನಾಗಿ ಮಾಡಿರುವುದು ಜನತೆಗೆ ನೀಡುತ್ತಿರುವ ತಪ್ಪು ಸಂದೇಶವಾಗಿದೆ ಎಂದು ಬಿಜೆಪಿ ಮುಖಂಡರು ಆರೋಪಿಸಿದರು. ಸಚಿವ ಸ್ಥಾನದಿಂದ ಬಿ. ನಾಗೇಂದ್ರ ಅವರನ್ನು ವಜಾಗೊ ಳಿಸುವವರೆಗೂ ಬಿಜೆಪಿ ಹೋರಾಟ ಮುಂದುವರೆಯಲಿದೆ ಎಂದು ಎಚ್ಚರಿಸಿದರು.

# ಕಲೆ ಉಳಿದರೆ ಕಲಾವಿದರ ಬದುಕಿಗೆ ಭದ್ರತೆ: ಸಚಿವ ಈಶ್ವರ ಖಂಡ್ರೆ

**ಬೀದರ್, ಆ. 18:** ಕಲಾ ಪ್ರಕಾರಗಳು ಉಳಿದು ಬೆಳೆದರೆ ಮಾತ್ರ ಕಲಾವಿದರ ಬದುಕಿಗೆ ಆರ್ಥಿಕ ಭದ್ರತೆ ದೊರಕಲು ಸಾಧ್ಯ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.




ನಮ್ಮ ನಾಡಿನ ಕಲೆ, ಸಂಸ್ಕೃತಿ ಹಾಗೂ ಜಾನಪದ ಪರಂಪರೆಯನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಕಲಾವಿದರಿಗೆ ಆರ್ಥಿಕ ಭದ್ರತೆ ಕಲ್ಪಿಸುವುದರ ಜೊತೆಗೆ ಅವರ ಪ್ರತಿಭೆಗೆ ಸೂಕ್ತ ಪ್ರೋತ್ಸಾಹ ನೀಡಬೇಕು.

ಜಾನಪದ ಸಾಹಿತ್ಯವು ನಮ್ಮ ಪೂರ್ವಜರಿಂದ ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಹರಿದುಬಂದಿರುವ ಅಮೂಲ್ಯ ಪರಂಪರೆಯಾಗಿದೆ. ನಮ್ಮ ಹಿರಿಯರು ಹಂತಿಪದ, ಸೋಬಾನೆ ಪದ, ತತ್ವಪದ ಸೇರಿದಂತೆ ಹಲವು ಜಾನಪದ ಸಾಹಿತ್ಯ ಪ್ರಕಾರಗಳನ್ನು ರಚಿಸಿ, ಹಾಡುವ ಮೂಲಕ ಸಂಸ್ಕೃತಿಯನ್ನು ಜೀವಂತವಾಗಿಟ್ಟಿದ್ದಾರೆ. ಪ್ರತಿಯೊಬ್ಬರೂ ಕಲಾವಿದರಾಗಲು ಸಾಧ್ಯವಿಲ್ಲ. ಕಲೆ ಎಂಬುದು ದೇವರು ಕೊಟ್ಟ ವರ ವಾಗಿದ್ದು, ಅಂತಹ ಕಲಾವಿದರನ್ನು ಗೌರವಿಸಿ ಪ್ರೋತ್ಸಾಹಿಸುವುದು ಸಮಾಜದ ಜವಾಬ್ದಾರಿಯಾಗಿದೆ.

ಜಿಲ್ಲೆಯಲ್ಲಿ 1,406 ಕಲಾವಿದರಿಗೆ ಗುರುತಿನಚೀಟಿ ವಿತರಿಸುವ ಕಾರ್ಯ ಶ್ಲಾಘನೀಯವಾಗಿದೆ. ಇದರಿಂದ ಜಿಲ್ಲೆಯ ಕಲಾವಿದರನ್ನು ಗುರುತಿಸುವು ದರ ಜೊತೆಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಅರ್ಹ ಕಲಾವಿದರಿಗೆ ತಲುಪಿಸಲು ಸಹಕಾರಿಯಾಗಲಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಬುರಗಿ ವಿಭಾಗದ ಜಂಟಿ ನಿರ್ದೇಶಕ ಬಸವರಾಜ ಹೂಗಾರ ಮಾತನಾಡಿ, ಕರ್ನಾಟಕ ಸರ್ಕಾರ ರಚಿಸಿರುವ 32 ಟ್ರಸ್ಟ್‌ಗಳ ಪೈಕಿ ಬೀದರ್ ಜಿಲ್ಲೆಯಲ್ಲಿ ಜಯದೇವಿ ತಾಯಿ ಲಿಗಾಡೆ ಹಾಗೂ ಪ್ರಭುರಾವ್ ಕಂಬಳಿವಾಲೆ ಟ್ರಸ್ಟ್‌ಗಳು ಸೇರಿವೆ ಎಂದರು.

### ಜೆನ್ -ಜಿ ಗಳಿಗೆ ಮಾಲಾ ಕಣ್ಣಿ ಸೇವೆ ಮಾದರಿಯಾಗಲಿ:ಡಾ.ಸದಾನಂದ ಪೆರ್ಲ

# ನಾರಿಶಕ್ತಿ ಪ್ರಶಸ್ತಿ ಪ್ರದಾನ, ನೇತ್ರ ಚಿಕಿತ್ಸೆ, ನೇತ್ರದಾನ ದೇಹದಾನ ಪ್ರತಿಜ್ಞಾ ವಿಧಿ ಸಮಾರಂಭ

**ಕಲಬುರಗಿ, ಆ.18**–ದೇಶದ ಯುವಕರು ರಾಷ್ಟ್ರ ನಿರ್ಮಾಣದಲ್ಲಿ ತೊಡಗಲು ಜೆನ್ – ಜಿ ಸಮೂಹಕ್ಕೆ ನಾಲ್ಕು ಚಕ್ರ ಚಾರಿಟೇಬಲ್ ಟ್ರಸ್ಟ್ ನ ಮುಖ್ಯಸ್ಥೆ ಮಾಲಾ ಕಣ್ಣಿಯವರ ಸಮಾಜ ಸೇವೆ ಮಾದರಿ ಮತ್ತು ಅನುಕರಣೀಯ ಯವಾಗಲಿ ಎಂದು ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥ ಡಾ.ಸದಾನಂದ ಪೆರ್ಲ ಹೇಳಿದರು.

ನಾಲ್ಕುಚಕ್ರ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಮಾಲಾ ಕಣ್ಣಿ ಯವರ ಅಭಿನಂದನಾ ಕಾರ್ಯಕ್ರಮದ ಪ್ರಯುಕ್ತ ಆ. 18ರಂದು ಕಲಬುರಗಿಯ ಪತ್ರಿಕಾ ಭವನದಲ್ಲಿ ನಡೆದ ನಾರಿಶಕ್ತಿ ಪ್ರಶಸ್ತಿ ಪ್ರದಾನ, ನೇತ್ರ ಚಿಕಿತ್ಸೆ, ನೇತ್ರದಾನ, ದೇಹದಾನ ಪ್ರತಿಜ್ಞಾ ವಿಧಿ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು. ಹೆಣ್ಣು ಹುಟ್ಟಿದರೆ ಅಪಮಾನ ಎನ್ನುವ ಸಮಾಜದಲ್ಲಿ ಮಾಲಾ ಅವರಂತಹ ಹೆಣ್ಣು ಮಗಳ ಸೇವಾ ಗುಣ ಜೀವ ಪ್ರೀತಿ ಪರಿಸರ ಪ್ರೀತಿ ಶ್ಲಾಘನೀಯವಾದುದು. ಈಗಿನ ಜೆನ್ – ಜಿ ಸಮೂಹವು ಇಂತಹ ವಿಧಾಯಕ ಕಾರ್ಯಕ್ರಮ ಹಾಗೂ ವ್ಯಕ್ತಿಗಳಿಂದ ಪ್ರೇರಣೆ ಪಡೆದು ಬಲಿಷ್ಠ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡು ಸಾರ್ಥಕ ಜೀವನ ನಡೆಸಬೇಕು ಎಂದರು.



## ನಾರಿಶಕ್ತಿ ಪುರಸ್ಕೃತರು

**ವೈದ್ಯಕೀಯ ಕ್ಷೇತ್ರದಲ್ಲಿ ಡಾ ರಾಜೇಶ್ವರಿ ರೆಡ್ಡಿ, ಸಮಾಜ ಸೇವೆಯಲ್ಲಿ ನ್ಯಾಯವಾದಿ ಆರತಿ ತಿವಾರಿ, ಶಿಕ್ಷಣ ಕ್ಷೇತ್ರದಲ್ಲಿ ಡಾ ಲತಾದೇವಿ ಸಿದ್ದಪ್ಪ ಕರಿಕಲ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಕ್ಷೇತ್ರದಲ್ಲಿ ಅಂಬಿಕಾ ಓಗಿ, ಕಲಾಕ್ಷೇತ್ರದಲ್ಲಿ ಮೀನಾಕ್ಷಿ ಅಂಬಯ್ಯ ಗುತ್ತೇದಾರ್ ಅವರಿಗೆ ನಾರಿಶಕ್ತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.**

ಮುತ್ಯಾನ ಬಬಲಾದ ಯಳಸಂಗಿ ಸುಕ್ಷೇತ್ರ ಮಠದ ಡಾ.ಗುರುಪಾದಲಿಂಗ ಶಿವಯೋಗಿ ಸ್ವಾಮೀಜಿಯವರು ಸಸಿಗೆ ನೀರೆರೆದು ಕಾರ್ಯಕ್ರಮವನ್ನು ಉದ್ಘಾಟಿಸಿದ ನಂತರ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಜ್ಞಾವಿಧಿ ಪತ್ರ ಹಸ್ತಾಂತರಿಸಿದರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ರವಿಕಾಂತಿ ಎಸ್ ಖ್ಯಾತನಾಳ ಮಾತನಾಡಿ ಸಮಾಜದಲ್ಲಿ ಪರಿವರ್ತನೆಯ ಹೊಸ ದಿಶೆ ಪ್ರಾರಂಭಿಸಲು ಮಾಲಾ ನೇತೃತ್ವದ ಅಪಾರ ಕೊಡುಗೆ ನೀಡಿದೆ.

ನೇತ್ರದಾನ, ದೇಹದಾನ, ನೇತ್ರ ಪರೀಕ್ಷೆ ಮುಂತಾದ ಆರೋಗ್ಯ ಕಾರ್ಯಗಳು ಶ್ಲಾಘನೀಯವಾದದ್ದು, ಆಯುಷ್ಮಾನ್ ಭಾರತ ಸೇರಿದಂತೆ ಆರೋಗ್ಯ ಇಲಾಖೆಯ 18ಕ್ಕೂ ಹೆಚ್ಚು ಕಾರ್ಯಕ್ರಮಗಳ ಯಶಸ್ವಿಗೆ ಅವರು ರಾಯಭಾರಿಯಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಸುರೇಶ ಬಡಿಗೇರ ಅಭಿನಂದನಾ ಭಾಷಣ ಮಾಡಿ, ಮಾಲಾ ಕಣ್ಣಿ ಕಲಬುರಗಿಯ ಹೆಮ್ಮೆ, ದೀನದಲಿತರು ಶೋಷಿತರು ಹಾಗೂ ಹೆಣ್ಣು ಮಕ್ಕಳ ಪಾಲಿಗೆ ಆಶಾಕಿರಣವಾಗಿ ತಮ್ಮ ಇಡೀ ಜೀವನವನ್ನು ಸಮಾಜ ಸೇವೆಗೆ ಮುಡಿಪಾಗಿಟ್ಟವರು. ಅವರ ನಾಲ್ಕುಚಕ್ರ ಚಾರಿಟೇಬಲ್ ಟ್ರಸ್ಟ್ ಸಮಾಜಕ್ಕೆ ಶಕ್ತಿ ತುಂಬಿದೆ ಎಂದರು.

ತಂದೆ ತಾಯಿ ಹಾಗೂ ಬಂಧು–ಬಳಗದವರು ನೀಡಿದ ಸ್ವಾತಂತ್ರ್ಯ ಹಾಗೂ ಸಮಾಜದ ಬೆಂಬಲದಿಂದ ಇಂತಹ ಸಮಾಜಮುಖಿ ಸೇವಾ ಕಾರ್ಯ ಮಾಡಲು ಶಕ್ತಿ ಬಂದಿದೆ ಎಂದು ಬಡಿಗೇರ ಹೇಳಿ ಮಾಲಾ ಕಣ್ಣಿ ಅಭಿವಂದನೆ ಸಲ್ಲಿಸಿದರು.


ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಮಾಲಾ ಕಣ್ಣಿ, ಹೆಣ್ಣು ಕೇವಲ ನಾಲ್ಕು ಗೋಡೆಗೆ ಸೀಮಿತವಾಗಿರದೆ ಸಮಾಜ ಸೇವೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಹೇಳಿದರು.

# ಆ.26ರಂದು ವೀರನಹೊಸಹಳ್ಳಿಯಲ್ಲಿ ದಸರಾ ಗಜಪಡೆ ಪಯಣಕ್ಕೆ ಚಾಲನೆ

**ಮೈಸೂರು, ಆ.18:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ–2026ಕ್ಕೆ ದಿನಗಣನೆ ಆರಂಭವಾಗಿದೆ. ಅಕ್ಟೋಬರ್ 11ರಂದು ಮೈಸೂರು ದಸರಾ ಮಹೋತ್ಸವ ಉದ್ಘಾಟನೆ ಗೊಳ್ಳಲಿದ್ದು, ಅ.21ರಂದು ಜಂಬೂ ಸವಾರಿ ನಡೆಯಲಿದೆ. ಆರು ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ ಗಜಪಡೆ ಕ್ಯಾಪ್ಟನ್ ಅಭಿಮನ್ಯು ಈಬಾರಿ ಅಂಬಾರಿ ಹೋರುವುದಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ.

ವಿಜಯದಶಮಿ ಹಬ್ಬದಲ್ಲಿ ಜಂಬೂಸವಾರಿ ಮೆರವಣಿಗೆಯಲ್ಲಿ ಚಾಮುಂಡೇಶ್ವರಿ ತಾಯಿ ವಿರಾಜಮಾನ ವಾಗಿದ್ದ ಚಿನ್ನದ ಅಂಬಾರಿ ಹೊತ್ತು ಸಾಗುತ್ತಿದ್ದ ಅಭಿಮನ್ಯು ವಿಚಾರದಲ್ಲಿ ಈ ಬಾರಿ ಮಹತ್ವದ ಬದಲಾವಣೆ ಮಾಡಲಾಗಿದೆ. ಅಭಿಮನ್ಯು ಆನೆಗೆ 60 ವರ್ಷವಾಗಿರುವ ಹಿನ್ನಲೆಯಲ್ಲಿ ಈ ಬಾರಿ ಅಭಿಮನ್ಯು ದಸರಾದಿಂದ ಹೊರಗುಳಿಯಲಿದ್ದಾನೆ.

ಹುಣಸೂರು ತಾಲೂಕಿನ ನಾಗರ ಹೊಳೆ ರಾಷ್ಟ್ರೀಯ ಉದ್ಯಾನವನದ ಹೆಬ್ಬಾಗಿಲಾದ ವೀರನಹೊಸಹಳ್ಳಿಯಲ್ಲಿ ಆಗಸ್ಟ್ 26ರಂದು ಗಜಪಡೆಗೆ



ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಗಜಪಯಣಕ್ಕೆ ಅಧಿಕೃತ ಚಾಲನೆ ನೀಡಲಾಗುತ್ತದೆ.

**ಗಜಪಡೆಯಿಂದ ಅಭಿಮನ್ಯುಗೆ ಕೊಕ್:** ನಾಡಹಬ್ಬ ದಸರಾದಲ್ಲಿ ಪಾಲ್ಗೊಳ್ಳಲಿರುವ ಗಜಪಡೆಯ ಪಟ್ಟಿಯನ್ನು ಅರಣ್ಯ ಇಲಾಖೆಯು ಮಂಗಳವಾರ ಬಿಡುಗಡೆ ಮಾಡಿದೆ. ಅಂಬಾರಿ ಆನೆ ಅಭಿಮನ್ಯುವನ್ನೇ ಕೈಬಿಟ್ಟು ಅಚ್ಚರಿ ಮೂಡಿಸಿದೆ.ಒಟ್ಟು 12 ಆನೆಗಳ ತಂಡವನ್ನು ಪ್ರಕಟಿಸಲಾಗಿದ್ದು, ಇದರಲ್ಲಿ 8 ಗಂಡು ಹಾಗೂ 2 ಹೆಣ್ಣಾನೆ ಸೇರಿವೆ.ಸದ್ಯ ಮದದಲ್ಲಿರುವ ಭೀಮ ಹಾಗೂ ಹರ್ಷ ಆನೆಗಳನ್ನು ಮೀಸಲು ಎಂದು ಪರಿಗಣಿಸಲಾಗಿದೆ. ಧನಂಜಯ, ಮಹೇಂದ್ರ, ಏಕಲವ್ಯ, ಪ್ರಶಾಂತ, ಗೋಪಿ, ಶ್ರೀರಾಮ, ಸುಗ್ರೀವ, ಲಕ್ಷ್ಮಿ, ಕಾವೇರಿ, ರೂಪಾ, ಚೈತ್ರಾ ಹಾಗೂ ಶ್ರೀಕಂಠ ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.ಆಗಸ್ಟ್ 26ರಂದು ವೀರನಹೊಸಳ್ಳಿಯಿಂದ ಮೈಸೂರಿಗೆ ಗಜಪಡೆ ಪ್ರಯಾಣ ಆರಂಭ ಆಗಲಿದೆ.ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಬೆಂಗಳೂರಿನಲ್ಲಿ ಪಟ್ಟಿ ಬಿಡುಗಡೆ ಮಾಡಿದರು.

ಅರಣ್ಯ ಇಲಾಖೆಯ ನಿಯಮಾವಳಿಗಳ ಪ್ರಕಾರ ಅಭಿಮನ್ಯುಗೆ 60 ವರ್ಷ ತುಂಬಿದ ಹಿನ್ನೆಲೆಯಲ್ಲಿ ಅಂಬಾರಿ ಹೊತ್ತು ಸಾಗುತ್ತ ಹೊಣೆಗಾರಿಕೆಯಿಂದ ವಿಶ್ರಾಂತಿ ನೀಡಲಾಗಿದ್ದು, ಇದೀಗ ಅಂಬಾರಿ ಹೊರಲು ಹೊಸ ಆನೆಯ ಶೋಧಕ್ಕೆ ಅರಣ್ಯ ಇಲಾಖೆ ಮುಂದಾಗಿದೆ. ಇನ್ನು ಇದೆ ಮೊದಲ ಬಾರಿಗೆ ದಸರಾದಲ್ಲಿ ಹರ್ಷ, ಚೈತ್ರ, ರೂಪ, ಶ್ರೀರಾಮ ಎಂಬ ನಾಲ್ಕು ಆನೆಗಳು ಭಾಗಿಯಾಗುತ್ತಿವೆ. ಮೊದಲನೇ ಹಂತದಲ್ಲಿ 9 ಆನೆಗಳು ಮತ್ತು ಎರಡನೇ ಹಂತದಲ್ಲಿ ಮೂರು ಆನೆಗಳನ್ನು ಸಾಂಸ್ಕೃತಿಕ ನಗರಿ ಮೈಸೂರಿಗೆ ಕರೆತರಲಾಗುತ್ತಿದೆ.

### ದಿಢೀರ್ ಪರಿಶೀಲನೆಯ ಮೂಲಕ ಗ್ರಾಮ ಪಂಚಾಯತಿಗಳಿಗೆ ಚುರುಕು: ವಿಬಿ ಜಿ ರಾಮ್‌ಜಿ ಕಾಮಗಾರಿಗಳಿಗೆ ವೇಗ ನೀಡಲು ಸಿಇಓ ಸೂಚನೆ



**ವಿಜಯಪುರ,ಆ.18:**ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ ಅವರು ಮಂಗಳವಾರ ಬೆಳ್ಳಂಬೆಳಗ್ಗೆ 8 ಗಂಟೆಯಿಂದಲೇ ಕ್ಷೇತ್ರ ಭೇಟಿ ಆರಂಭಿಸಿ, ವಿಜಯಪುರ ತಾಲ್ಲೂಕಿನ ಐನಾಪುರ, ಮದಭಾವಿ, ಹೊನ್ನುಟಗಿ ಹಾಗೂ ಆಹೇರಿ ಗ್ರಾಮ ಪಂಚಾಯತಿಗಳಿಗೆ ದಿಢೀರ್ ಭೇಟಿ ನೀಡಿ, ಪಂಚಾಯಿತಿ ಆಡಳಿತ, ಅಧಿಕಾರಿ–ಸಿಬ್ಬಂದಿ ಹಾಜರಾತಿ, ಸಾರ್ವಜನಿಕ ಸೇವೆ, ವಿಬಿ ಜಿ ರಾಮ್‌ಜಿ ಯೋಜನೆಯ ಅನುಷ್ಠಾನ ಹಾಗೂ ವಿವಿಧ ಗ್ರಾಮೀಣ ಅಭಿವೃದ್ಧಿ ಕಾಮಗಾರಿಗಳ ಪ್ರಗತಿಯನ್ನು ಸ್ಥಳದಲ್ಲಿಯೇ ಪರಿಶೀಲಿಸಿದರು.

ಸಿಇಓ ಅವರು ಕಚೇರಿ ವೇಳೆಯ ಆರಂಭಕ್ಕೂ ಮುನ್ನವೇ ಕ್ಷೇತ್ರಕ್ಕೆ ತೆರಳಿ ಗ್ರಾಮ ಪಂಚಾಯಿತಿಗಳ ಕಾರ್ಯನಿರ್ವಹಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿರುವುದು, ಗ್ರಾಮೀಣ ಅಭಿವೃದ್ಧಿ ಕಾರ್ಯಗಳಿಗೆ ಅವರು ನೀಡುತ್ತಿರುವ ಆದ್ಯತೆ ಹಾಗೂ ಆಡಳಿತದಲ್ಲಿ ಸಮಯಪಾಲನೆ ಮತ್ತು ಜವಾಬ್ದಾರಿತನಕ್ಕೆ ಒತ್ತು ನೀಡುತ್ತಿರುವುದನ್ನು ಪ್ರತಿಬಿಂಬಿಸಿತು.

ದಿಢೀರ್ ಪರಿಶೀಲನೆಯ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿ–ಸಿಬ್ಬಂದಿಯ ಕರ್ತವ್ಯನಿಷ್ಠ, ಹಾಜರಾತಿ ಹಾಗೂ ಸಾರ್ವಜನಿಕ ಸೇವೆಯ ಸ್ಥಿತಿಗತಿಗಳನ್ನು ಪರಿಶೀಲಿಸಿದ ಅವರು, ಗ್ರಾಮ ಪಂಚಾಯಿತಿಗಳು ಸರ್ಕಾರದ ಯೋಜನೆಗಳ ಅನು?ನ ಮತ್ತು ಸಾರ್ವಜನಿಕ ಸೇವೆಯ ಪ್ರಮುಖ ಕೇಂದ್ರಗಳಾಗಿರುವುದರಿಂದ ಅಧಿಕಾರಿ–ಸಿಬ್ಬಂದಿ ನಿಯಮಿತವಾಗಿ ಕರ್ತವ್ಯಕ್ಕೆ ಹಾಜರಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು ಎಂದು ಸೂಚಿಸಿದರು.

# ಕಲಾವಿದರಿಗೆ ಪೂರಕವಾದ ಯೋಜನೆಗಳು ಪ್ರೇರಕ: ಗಾದೆಪ್ಪ

**ಬಳ್ಳಾರಿ ಆ 18.** ಕಲಾವಿದರಿಗೆ ಪೂರಕವಾಗಿರುವ ಬಹೂಪಯೋಗಿ ಯೋಜನೆಗಳು ಎಲ್ಲಾ ಕಲಾ ಪ್ರತಿಭೆಗಳಿಗೆ ತಲುಪಬೇಕು. ನನ್ನಿಂದ ಏನು ಸಹಕಾರ ಆಗಬೇಕು ನಾನು ಮಾಡುತ್ತೇನೆ ಎಂದು ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಪಿ.ಗಾದೆಪ್ಪ ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಮೇಧ ಕಾಲೇಜು ಪ್ರಾಂಶುಪಾಲ ರಾಮ್‌ಕಿರಣ್ ಮಾತನಾಡಿ, ನಮ್ಮ ಕಾಲೇಜಿನಲ್ಲಿ ಕಾರ್ಯಕ್ರಮ ಮಾಡುತ್ತಿ ರುವುದು ತುಂಬಾ ಖುಷಿಯಾದ ಸಂಗತಿ.

ನಮ್ಮ ಕಾಲೇಜಿಂದ ಓದೋದೊಂದೇ ಅಲ್ಲ, ಈ ರೀತಿ ಸಾಂಸ್ಕೃತಿಕ ಮತ್ತು ಕಲೆಗೆ ಬಹಳಷ್ಟು ಅವಕಾಶ ಕೊಡುತ್ತಿವೆ ಎಂದರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ ಅವರು ಮಾತನಾಡಿ, ಮಹರ್ಷಿ ಜಯದೇವ್ ಅವರ ಬಗ್ಗೆ ಉಪನ್ಯಾಸ ನೀಡಿದರು. ಇವರು 12ನೇ ಶತಮಾನದಲ್ಲಿ ಓಡಿಸ್ಸಾಗೆ ಸಂಬಂಧಪಟ್ಟ ಕವಿ. 21 ಶತಮಾನ ದಲ್ಲಿಯೂ ನಾವು ಸ್ಮರಿಸುವ ಕಾರ್ಯಕ್ರಮಗಳು, ಕವಿತೆಗಳು ಬಹಳಷ್ಟು ಬರೆದಿದ್ದಾರೆ. ನಿಜವಾಗಿಯೂ ನಮ್ಮ ಸೌಭಾಗ್ಯ ಎಂದು ಹೇಳಿದರು.



ಸಂಸ್ಕಾರ ಭಾರತಿ ಕ್ರಾಂತಿಯ ಕಾರ್ಯದರ್ಶಿ ಶ್ರೀನಿವಾಸ್ ಮಾತನಾಡಿ, ಇವರು ಇತ್ತೀಚಿನ ದಿನಗಳಲ್ಲಿ ಕಲೆ ಸಂಸ್ಕೃತಿ ಮರೆಯಾಗಿದೆ. ಶ್ರೀ ಮಾತೃ ಮಹಿಳಾ ಮಂಡಳಿಯವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿನ ಮಕ್ಕಳಲ್ಲಿ ಈ ಕಲೆ ಪ್ರಕಾಶಿಸುವ ಪ್ರಯತ್ನ ಮಾಡೋಣ ಎಂದರು.

ಕಲಾವಿದರ ವೇದಿಕೆ ಅಧ್ಯಕ್ಷ ಎಲ್ಲನಗೌಡ ಶಂಕರಬಂಡೆ ಮತ್ತು ಗಣ್ಯ ವ್ಯಕ್ತಿಗಳು ಮಕ್ಕಳಿಗೆ ಪ್ರಮಾಣ ಪತ್ರವನ್ನು ವಿತರಿಸಿದರು.

ಕೆ.ಸಿ. ಸುಂಕಣ್ಣ ಮತ್ತು ತಂಡ ಅವರದಿಂದ ಸಾಂಸ್ಕೃತಿಕ ನೃತ್ಯ ನೆರವೇರಿಸಿ ಕೊಟ್ಟರು. ಸಿ. ತುಳಸಿ ಮತ್ತು ತಂಡದವರದಿಂದ ತೊಗಲು ಗೊಂಬೆ ಕಾರ್ಯಕ್ರಮ ಆಯೋಜನೆ ಮಾಡಿದ್ದರು.ವಚನ ಗಾಯನ ಶರಣ ಬಸವ ಮತ್ತು ವೀರೇಶ್, ಹನಗ ಇವರು ಪ್ರಾರ್ಥನೆ ಗೀತೆ ಹಾಡಿದರು. ಪ್ರಜ್ಞೆಯವರು ನಿರೂಪಣೆ ಮಾಡಿದರು. ಮಾತೃ ಮಹಿಳಾ ಮಂಡಳಿಯ ಅಧ್ಯಕ್ಷೆ ಕೆ.ಪುಷ್ಪ ಚಂದ್ರಶೇಖರ್ ಇವರು ಶಾಲೆ ಮಕ್ಕಳಲ್ಲಿ ಇರುವ ಪ್ರತಿಭೆ ಹೊರ ತರುವ ಒಂದು ಪ್ರಯತ್ನದಲ್ಲಿ ನಮ್ಮ ಸಂಸ್ಥೆ ಕಡೆಯಿಂದ ಈ ಇತರ ಹಲವಾರು ಕಾರ್ಯಕ್ರಮಗಳು ಪ್ರತಿ ವರ್ಷವನ್ನು ಹಮ್ಮಿಕೊಳ್ಳಲಾಗುತ್ತದೆ. ಬಡ ವಿದ್ಯಾರ್ಥಿಗಳಿಗೆ ಯಾರಿಗೆಲ್ಲ ಆಸಕ್ತಿ ಇರುತ್ತೆ ನಮ್ಮ ಸಂಸ್ಥೆ ಕಡೆಯಿಂದ ಉಚಿತವಾಗಿ ನಾವು ಭರತನಾಟ್ಯವನ್ನು ಕಲಿಸುತ್ತೇವೆ ಎಂದು ಹೇಳಿದರು.

## ಹನೂರು ಎನ್‌ಕೌಂಟರ್‌ಗೆ ತೀಕ್ಷ್ಣ ಪ್ರತಿಕ್ರಿಯೆ

# ಎನ್‌ಕೌಂಟರ್ ಮಾಡಲು ಅವರೇನು ವೀರಪ್ಪನ್ ರೇಂಜ್‌ನವರಾ: ಎಚ್.ಡಿ.ಕುಮಾರಸ್ವಾಮಿ



**ಬಾಗಲಕೋಟೆ, ಆ. 18:** ಹನೂರುನಲ್ಲಿ ಎನ್‌ಕೌಂಟರ್ ಮಾಡಲು ಅವರೇನು ವೀರಪ್ಪನ್ ರೇಂಜ್‌ನವರಾ ಕಾಲಿಗೆ ಗುಂಡು ಹಾರಿಸಿ, ಬೇಟೆಯಾಡುತ್ತಿದ್ದರೆ ಅವರನ್ನು ಹಿಡಿಯಬಹುದಿತ್ತು. ಅದೆಲ್ಲ ಬಿಟ್ಟು ನೇರವಾಗಿ ಎನ್‌ಕೌಂಟರ್ ಮಾಡುವ ಮೂಲಕ ಅಮಾಯಕರ ಜೀವ ತೆಗೆಯಲಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸರ್ಕಾರದ ನಡೆಯನ್ನು ಖಂಡಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಕಾರ್ಯಕ್ರಮವನ್ನು ಉದ್ಘಾಟಿಸಿದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನಲ್ಲಿ ಇತ್ತೀಚೆಗೆ ನಡೆದ ಅರಣ್ಯ ಇಲಾಖೆ ಸಿಬ್ಬಂದಿಯ ಗುಂಡಿನ ದಾಳಿಯಲ್ಲಿ ಮೂವರು ಬಲಿಯಾದ ಭೀಕರ ಘಟನೆಯನ್ನು ಖಂಡಿಸುವುದಾಗಿ, ಈ ಎನ್‌ಕೌಂಟ್‌ರ್ ಘಟನೆಯ ಹಿಂದೆ ಹಲವು ಅನುಮಾನಗಳಿದ್ದು, ರಾಜ್ಯ ಕಾಂಗ್ರೆಸ್ ಸರ್ಕಾರದ ನಡೆ ಹಾಗೂ ತನಿಖೆಯ ಪಾರದರ್ಶಕತೆಯನ್ನು ನೇರವಾಗಿ ಪ್ರಶ್ನಿಸಿದ್ದಾರೆ.

**ಜೀವಂತ ಬಂಧಿಸಲು ಸಾಧ್ಯವಿರಲಿಲ್ಲವೇ?:** ಹನೂರು ಶೂಟೌಟ್ ಬಗ್ಗೆ ತೀವ್ರ ಆಕ್ರೋಶ ಹೊರಹಾಕಿದ ಕುಮಾರಸ್ವಾಮಿ, ಅರಣ್ಯ ಪ್ರದೇಶಕ್ಕೆ ತೆರಳಿದವರು ಅಥವಾ ಬೇಟೆಗೆ ಬಂದವರು ವೀರಪ್ಪನ್ ಮಟ್ಟದ ಭೀಕರ ಅಪರಾಧಿಗಳೇನು? ಅವರನ್ನು ಜೀವಂತವಾಗಿ ಬಂಧಿಸಲು ಅರಣ್ಯ ಸಿಬ್ಬಂದಿಗೆ ಸಾಧ್ಯವಿರಲಿಲ್ಲವೇ? ಇಲಾಖೆಯ ನಿಯಮಾವಳಿಗಳ ಪ್ರಕಾರ ಅತ್ಯಗತ್ಯ ಸಂದರ್ಭ ಎದುರಾದರೆ ಕಾಲಿನ ಭಾಗಕ್ಕೆ ಗುಂಡು ಹಾರಿಸಿ ವಶಕ್ಕೆ ಪಡೆಯಬಹುದಾಗಿತ್ತು. ಆದರೆ, ಒಂದೇ ಘಟನೆಯಲ್ಲಿ ಮೂವರು ಸ್ಥಳದಲ್ಲೇ ಪ್ರಾಣ ಕಳೆದುಕೊಂಡು, ಮತ್ತೊಬ್ಬ ವ್ಯಕ್ತಿ ತೀವ್ರ ಗಾಯಗೊಂಡು ಆಸ್ಪತ್ರೆ ಸೇರಿರುವುದು ಅತ್ಯಂತ ಗಂಭೀರ ಹಾಗೂ ಕಳವಳಕಾರಿ ವಿಚಾರ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿಬ್ಬಂದಿ ತಮ್ಮ ಆತ್ಮರಕ್ಷಣೆಗಾಗಿ ದಾಳಿ ನಡೆಸಿದ್ದಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ, ಘಟನೆಯಲ್ಲಿ ಭಾಗಿಯಾದ ಯಾವೊಬ್ಬ ಅರಣ್ಯ ಸಿಬ್ಬಂದಿಗೂ ಸಣ್ಣ ಗಾಯವೂ ಆಗದಿರುವುದು ಹಲವು ಸಂಶಯಗಳಿಗೆ ಎಡೆಮಾಡಿಕೊಡುತ್ತದೆ. ಆದ್ದರಿಂದ, ಈ ದುರಂತದ ನೈಜತೆಯ ಸತ್ಯಾಸತ್ಯತೆ ಹೊರಬರಲು ನಿಷ್ಪಕ್ಷಪಾತ ತನಿಖೆ ಅತ್ಯಗತ್ಯ ಎಂದು ಅವರು ಆಗ್ರಹಿಸಿದರು.

ಇದೇ ವೇಳೆ ರಾಜ್ಯದ ಪ್ರಸ್ತುತ ರಾಜಕೀಯ ವಿದ್ಯಮಾನಗಳ ಕುರಿತು ಮಾತನಾಡಿದ ಅವರು, ಆರ್‌ಎಸ್‌ಎಸ್‌ನಂತಹ ವಿಷಯಗಳ ಮೇಲೆ ಅನಗತ್ಯ ಚರ್ಚೆ ನಡೆಸಿ ಕಾಲಹರಣ ಮಾಡುವ ಬದಲು, ಮೊದಲು ಸಂಕಷ್ಟದಲ್ಲಿರುವ ಜನರ ನೆರವಿಗೆ ಧಾವಿಸುವಂತೆ ಸರ್ಕಾರಕ್ಕೆ ಕಿವಿಮಾತು ಹೇಳಿದರು.

ಕಲಬುರಗಿ, ಯಾದಗಿರಿ, ರಾಯಚೂರು ಸೇರಿದಂತೆ ಕಲ್ಯಾಣ ಕರ್ನಾಟಕದ ಭಾಗಗಳಲ್ಲಿ ಮಳೆಯ ತೀವ್ರ ಕೊರತೆಯಿಂದಾಗಿ ಭೀಕರ ಬರ ಪರಿಸ್ಥಿತಿ ಎದುರಾಗಿದೆ. ಕುಡಿಯುವ ನೀರು ಹಾಗೂ ಉದ್ಯೋಗವಿಲ್ಲದೆ ಜನರು ಬದುಕಿಗಾಗಿ ಬೇರೆ ಊರುಗಳಿಗೆ ಗುಳೆ ಹೋಗುತ್ತಿದ್ದಾರೆ. ಆದರೆ, ಸರ್ಕಾರ ಕೇವಲ ಪ್ರಚಾರಕ್ಕಾಗಿ ಸಚಿವರನ್ನು ಬರ ಅಧ್ಯಯನಕ್ಕೆ ಕಳುಹಿಸುತ್ತಿದೆಯೇ ಹೊರತು, ನೈಜ ಪರಿಹಾರ ನೀಡುತ್ತಿಲ್ಲ. ಸಚಿವರು ಹೊಲಗಳಲ್ಲಿ ನಿಂತು ಫೋಟೋ ತೆಗೆಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಬಾರದು ಎಂದು ಲೇವಡಿ ಮಾಡಿದರು.

ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಅವರೇ ಒಂದು ಜಿಲ್ಲೆಗೆ 500 ಕೋಟಿ ರೂಪಾಯಿ ಅನುದಾನ ಬೇಕು ಎಂದಿರುವಾಗ, ರಾಜ್ಯ ಸರ್ಕಾರ ಪ್ರತಿಯೊಂದು ಜಿಲ್ಲೆಗೆ ನೀಡಿರುವ ನಿಜವಾದ ಪರಿಹಾರ ಧನವೆಷ್ಟು ಎಂಬುದನ್ನು ಸ್ಪಷ್ಟಪಡಿಸಲಿ ಎಂದು ಸವಾಲು ಹಾಕಿದರು. ರೈತರ ಹೋರಾಟಕ್ಕೆ ಬೆಂಬಲ: ಬಿಡದಿ ಪ್ರದೇಶದಲ್ಲಿ ಜಮೀನು ನೀಡದಿರಲು ನಿರ್ಧರಿಸಿ ಕಳೆದ 500ಕ್ಕೂ ಹೆಚ್ಚು ದಿನಗಳಿಂದ ಅಹೋರಾತ್ರಿ ಧರಣಿ ನಡೆಸುತ್ತಿರುವ ರೈತರ ಹೋರಾಟಕ್ಕೆ ಜೆಡಿಎಸ್ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಕುಮಾರಸ್ವಾಮಿ ಪುನರುಚ್ಚರಿಸಿದರು. ತಮ್ಮ ಪಕ್ಷ ಎಂದಿಗೂ ರೈತರ ಹಿತರಕ್ಷಣೆಗೆ ಬದ್ಧವಾಗಿದ್ದು, ಭೂಮಿ ಕಳೆದುಕೊಳ್ಳುತ್ತಿರುವ ರೈತರ ಪರವಾಗಿ ಗಟ್ಟಿಯಾಗಿ ನಿಲ್ಲಲಿದೆ ಎಂದರು.

ನೈಸ್ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ನ್ಯಾಯಾಲಯ ನೀಡಿರುವ ನಿರ್ದೇಶನಗಳನ್ನು ತಕ್ಷಣವೇ ಜಾರಿಗೊಳಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿಗಳಿಗೆ ಅಧಿಕೃತ ಪತ್ರ ಬರೆದಿರುವುದಾಗಿ ಕುಮಾರಸ್ವಾಮಿ ತಿಳಿಸಿದರು.

ಜುಲೈ 28ರಂದೇ ಕೋರ್ಟ್ ಆದೇಶ ನೀಡಿದ್ದರೂ ಸರ್ಕಾರ ಅದನ್ನು ಪರಿಶೀಲಿಸದೆ ನಿರ್ಲಕ್ಷ್ಯ ವಹಿಸಿರುವುದು ಸರಿಯಲ್ಲ. ದಶಕಗಳಿಂದ ರೈತರ ಅಮೂಲ್ಯ ಭೂಮಿಯನ್ನು ವಶಪಡಿಸಿಕೊಂಡು ಕನಿಷ್ಠ ಸೂಕ್ತ ಪರಿಹಾರವನ್ನೂ ನೀಡದೆ ಅನ್ಯಾಯ ಮಾಡಲಾಗಿದೆ. ಸರ್ಕಾರ ಕೂಡಲೇ ತನ್ನ ಮೌನ ಮುರಿದು, ನ್ಯಾಯಾಲಯದ ಆದೇಶದಂತೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.



ಚಿಕ್ಕಮಗಳೂರು ಬಳಿ ಮಂಗಳವಾರ ಕೃಷಿ ಚಟುವಟಿಕೆಗಳು ಹೆಚ್ಚಾಗಿ ಕಂಡುಬಂದವು.

# ಗುತ್ತಿಗೆ ಸಿಬ್ಬಂದಿ ಕಾಯಂ ಮಾಡಿ ಎಲ್‌ಐಸಿಗೆ ಹೈಕೋರ್ಟ್ ನಿರ್ದೇಶನ



**ಕಲಬುರಗಿ, ಆ. 18:** ಕಾಯಂ ಸ್ವರೂಪದ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ಎಲ್ಲ ಪ್ರಕ್ರಿಯೆಗಳನ್ನು ಅನುಸರಿಸಿ ನೇಮಕಾತಿ ಮಾಡಿಕೊಂಡ ಬಳಿಕ ಅವರನ್ನು ಗುತ್ತಿಗೆ ಆಧಾರದಲ್ಲಿಯೇ ಮುಂದುವರೆಸುವ ಬದಲಾಗಿ ಅವರ ಸೇವೆಯನ್ನು ಕಾಯಮಾತಿ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಹೈಕೋರ್ಟ್‌ನ ಕಲಬುರಗಿ ವಿಭಾಗೀಯ ಪೀಠವು, ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಕಲಬುರಗಿ ಶಾಖೆಗೆ ನಿರ್ದೇಶನ ನೀಡಿದೆ.

ತಾವು 1999ರಿಂದ 2024ರ ಅವಧಿಯಲ್ಲಿ ಗುತ್ತಿಗೆ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದು, ಕಾಯಂ ಸ್ವರೂಪದ ಹುದ್ದೆಗಳಂತೆ ಅರ್ಜಿ ಆಹ್ವಾನಿಸಿ, ಸಂದರ್ಶನ ನಡೆಸಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಆದರೆ, ಗುತ್ತಿಗೆ ಸಿಬ್ಬಂದಿಯನ್ನಾಗಿ ಮುಂದುವರಿಸಲಾಗಿದೆ.

ಆದ್ದರಿಂದ ತಮ್ಮ ಸೇವೆಯನ್ನು ಕಾಯಂಗೊಳಿಸಲು ಎಲ್‌ಐಸಿಗೆ ನಿರ್ದೇಶನ ನೀಡುವಂತೆ ಕೋರಿ ಸಿಬ್ಬಂದಿ ಶ್ರೀಧರ ಗೌಡ, ಜ್ಯೋತಿ, ವಿನೋದ್, ಉಮೇಶ್, ಚಿದಾನಂದ, ವಿಜಯಾನಂದ ಹಾಗೂ ಮಡಿವಾಳಪ್ಪ ಅವರು ಹೈಕೋರ್ಟ್‌ನ ಕಲಬುರಗಿ ಪೀಠದ ಮೆಟ್ಟಿಲೇರಿದ್ದರು.

ಇದಕ್ಕೂ ಮುನ್ನ 2024ರ ನವೆಂಬರ್‌ನಲ್ಲಿ ಪ್ರಕರಣದ ವಿಚಾರಣೆ ನಡೆಸಿದ್ದ ಏಕಸದಸ್ಯ ಪೀಠವು, ಸುಪ್ರೀಂ ಕೋರ್ಟ್‌ನ ರಣಬೀರ್ ಸಿಂಗ್ ವರ್ಸಸ್ ಎಸ್.ಕೆ. ರಾಯ್ ಪ್ರಕರಣವನ್ನು ಉಲ್ಲೇಖಿಸಿ, ಇಷ್ಟು ವರ್ಷ ಗುತ್ತಿಗೆ ಸಿಬ್ಬಂದಿಯಾಗಿ ಕೆಲಸ ಮಾಡಿದ್ದಕ್ಕಾಗಿ ಸಿಬ್ಬಂದಿಗೆ ವರ್ಷಕ್ಕೆ 1 ಲಕ್ಷದಂತೆ ಎಷ್ಟು ವರ್ಷ ಕೆಲಸ ಮಾಡಿದ್ದಾರೆಯೋ ಅಷ್ಟು ವರ್ಷ ಪರಿಹಾರ ನೀಡಬೇಕು ಎಂದು ಆದೇಶಿಸಿತ್ತು. ಕಾಯಮಾತಿ ಬಯಸಿದ್ದ ಗುತ್ತಿಗೆ ನೌಕರರು ಹಾಗೂ ಪರಿಹಾರ ನೀಡಲು ಹಿಂದೇಟು ಹಾಕಿದ ಎಲ್‌ಐಸಿ ಈ ಆದೇಶ ಪ್ರಶ್ನಿಸಿ, ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದವು. ಅರ್ಜಿದಾರರ ಪರವಾಗಿ ವಿಭಾಗೀಯ ಪೀಠದ ಎದುರು ವಾದ ಮಂಡಿಸಿದ್ದ ವಕೀಲರಾದ ಪಿ.ವಿಲಾಸ್ ಕುಮಾರ್ ಹಾಗೂ ನಿತೇಶ್ ಪಡಿಯಾಲ್ ಅವರು, ಈಗ ನೇಮಕವಾಗಿರುವ ಗುತ್ತಿಗೆ ಸಿಬ್ಬಂದಿಯು 1993ರಲ್ಲಿ ಎಲ್‌ಐಸಿಯು ತಾತ್ಕಾಲಿಕ ಸಿಬ್ಬಂದಿ ನೇಮಕಾತಿ ನಿಯಮಾವಳಿಗಳನ್ನು ರೂಪಿಸಿದ ಬಳಿಕ ಖಾಲಿ ಹುದ್ದೆಗಳಿಗೆ ನೇಮಕಗೊಂಡಿದ್ದಾರೆ.

ಅಲ್ಲದೇ, ಕೆಲವರು ಹತ್ತಾರು ವರ್ಷ ಕೆಲಸ ಮಾಡಿದ್ದಾರೆ. ಅವರನ್ನು ಗುತ್ತಿಗೆ ಸಿಬ್ಬಂದಿ ಎಂದು ಪರಿಗಣಿಸಲಾಗದು. ಅವರನ್ನು ಪರಿಹಾರ ನೀಡಿ ಹುದ್ದೆಯಿಂದ ಬಿಡುಗಡೆ ಮಾಡುವ ಬದಲು ಕಾಯಮಾತಿಗೆ ಪರಿಗಣಿಸಬೇಕು ಎಂದು ಪೀಠದ ಎದುರು ಅರಿಕೆ ಮಾಡಿಕೊಂಡಿದ್ದರು.

ವಾದ–ಪ್ರತಿವಾದಗಳನ್ನು ಆಲಿಸಿದ ನ್ಯಾಯಮೂರ್ತಿಗಳಾದ ಆರ್. ನಟರಾಜ್ ಹಾಗೂ ಪ್ರದೀಪ್ ಸಿಂಗ್ ಯೆರೂರ್ ಅವರನ್ನೊಳಗೊಂಡ ವಿಭಾಗೀಯ ಪೀಠವು, ಎಲ್‌ಐಸಿಯು ಕಾಯಂ ಸ್ವರೂಪದ ಹುದ್ದೆಗಳ ನೇಮಕಾತಿ ಮಾದರಿಯಲ್ಲೇ ನಿಯಮಾನುಸಾರ ಗುತ್ತಿಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದೆ. ಹಾಗಾಗಿ, ಗುತ್ತಿಗೆಯಲ್ಲಿಯೇ ಮುಂದುವರೆಸುವಂತಿಲ್ಲ. ತೀರ್ಪು ಪ್ರಕಟವಾದ ಮೂರು ತಿಂಗಳೊಳಗಾಗಿ ಈ ಸಿಬ್ಬಂದಿಯ ಸೇವೆಯನ್ನು ಕಾಯಂಗೊಳಿಸಬೇಕು ಎಂದು ಆದೇಶ ನೀಡಿದೆ.

## ಬಳ್ಳಾರಿಯ ಮೇಧಾ ಕಾಲೇಜಿನಲ್ಲಿ ಅಂತರಾಷ್ಟ್ರೀಯ ಯುವ ದಿನಾಚರಣೆ

### ಯುವಶಕ್ತಿ ರಾಷ್ಟ್ರಶಕ್ತಿಯಾಗಲಿ: ಡಾ.ಇಂದ್ರಾಣಿ ಕರೆ



**ಬಳ್ಳಾರಿ, ಆ.18.** ಯುವಕರು ದೇಶದ ಅಮೂಲ್ಯ ಸಂಪತ್ತು ಹಾಗೂ ನಾಳೆಯ ನಾಯಕರಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ಪಷ್ಟ ಗುರಿಯೊಂದಿಗೆ ಭವಿಷ್ಯ ರೂಪಿಸಿ ಕೊಳ್ಳಬೇಕು ಎಂದು ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿ ಡಾ.ಇಂದ್ರಾಣಿ ಅವರು ಹೇಳಿದರು.

ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಹೆಚ್‌ಐವಿ/ಏಡ್ಸ್ ನಿಯಂತ್ರಣ ಘಟಕ ಹಾಗೂ ಶ್ರೀ ಮೇಧಾ ಪದವಿ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಕಾಲೇಜು ಆವರಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನವು ಭವಿಷ್ಯ ನಿರ್ಮಾಣದ ಪ್ರಮುಖ ಹಂತ. ಯಾವುದೇ ಕಾರಣಕ್ಕೂ ಗುರಿಯಿಂದ ವಿಮುಖರಾಗದೆ ಶಿಸ್ತುಬದ್ಧ ಜೀವನ ನಡೆಸಬೇಕು. ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡುವ ಹೆಚ್‌ಐವಿ, ಸಿಫಿಲಿಸ್‌ನಂತಹ ಸೋಂಕುಗಳ ಬಗ್ಗೆ ಎಚ್ಚರ ವಹಿಸಬೇಕು. ಯುವಜನರು ಮಾದಕ ದ್ರವ್ಯ ಸೇರಿದಂತೆ ಎಲ್ಲಾ ದುಶ್ಚಟಗಳಿಂದ ದೂರವಿರಬೇಕು ಹಾಗೂ ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾರಿಯುತವಾಗಿ ಬಳಸಿ, ಯಾವುದೇ ವಿಷಯ ಹಂಚಿಕೊಳ್ಳುವ ಮುನ್ನ ಸತ್ಯಾಸತ್ಯತೆ ಪರಿಶೀಲಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಸಿ.ಕೆ. ರಾಮಕೃಷ್ಣ ಅವರು ಮಾತನಾಡಿ, ಎಚ್‌ಐವಿ/ಏಡ್ಸ್ ನಿಯಂತ್ರಣದಲ್ಲಿ ಸಮಾಜದ ಪಾತ್ರ ಮುಖ್ಯವಾಗಿದ್ದು, ವಿದ್ಯಾರ್ಥಿಗಳು ಈ ಬಗ್ಗೆ ವೈಜ್ಞಾನಿಕ ಮಾಹಿತಿ ಹೊಂದಿರಬೇಕು. ಆರೋಗ್ಯ ಇಲಾಖೆಯ ಜಾಗೃತಿ ಕಾರ್ಯಕ್ರಮಗಳಿಗೆ ಸಂಸ್ಥೆ ಸದಾ ಬೆಂಬಲ ನೀಡಲಿದೆ ಎಂದು ತಿಳಿಸಿದರು.

## ತಮಿಳುನಾಡು ವಿಧಾನಸಭೆಯಲ್ಲಿ ಚರ್ಚೆಗೆ ಗ್ರಾಸವಾದ ಶೂಟೌಟ್ ಪ್ರಕರಣ

# ಮೃತರ ಕುಟುಂಬದವರಿಗೆ ತಲಾ 10 ಲಕ್ಷ ರೂ. ಪರಿಹಾರ ಘೋಷಣೆ



**ಚಾಮರಾಜನಗರ, ಆ.18:** ಹನೂರು ಬಳಿ ಅರಣ್ಯ ಸಿಬ್ಬಂದಿ ನಡೆಸಿದ ಗುಂಡಿನ ದಾಳಿಗೆ ಮೂವರು ತಮಿಳುನಾಡು ಮೂಲದ ವ್ಯಕ್ತಿಗಳು ಬಲಿಯಾದ ಪ್ರಕರಣ ತಮಿಳುನಾಡು ವಿಧಾನಸಭೆಯಲ್ಲಿ ಭಾರಿ ಕಾವು ಪಡೆದುಕೊಂಡಿದೆ.

ಘಟನೆಗೆ ತೀವ್ರ ಸಂತಾಪ ವ್ಯಕ್ತಪಡಿಸಿರುವ ತಮಿಳು ನಾಡು ಸರ್ಕಾರ, ಮೃತರ ಕುಟುಂಬಕ್ಕೆ ತಲಾ 10 ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡಿದೆ. ಅರಣ್ಯ ಇಲಾಖೆ ಸಿಬ್ಬಂದಿ ಬಿಡುಗಡೆ ಮಾಡಿರುವ ಫೋಟೋಗಳ ಕುರಿತು ತಮಿಳುನಾಡು ಶಾಸಕರು ತೀವ್ರ ಅನುಮಾನ ವ್ಯಕ್ತಪಡಿಸಿದ್ದಾರೆ.

ಸಿಬ್ಬಂದಿ ಹಂಚಿಕೊಂಡಿರುವ ಚಿತ್ರ ಗಳಲ್ಲಿ ಮೃತರು ತೊಟ್ಟಿದ್ದ ಚಪ್ಪಲಿಗಳು ಹೊಸದಾಗಿದ್ದು, ಅದರ ಮೇಲಿದ್ದ ಬೆಲೆ ಚೀಟಿ (ಸ್ಟಿಕ್ಕರ್) ಕೂಡ ಹೊರಟು ಹೋಗಿಲ್ಲ ಎಂದು ಸದನದಲ್ಲಿ ಗಮನ ಸೆಳೆಯಲಾಯಿತು. ಈ ಅಂಶವು ಘಟನೆಯ ಸುತ್ತ ಹಲವು ಅನುಮಾನಗಳನ್ನು ಹುಟ್ಟು ಹಾಕಿದ್ದು, ಇದು ನಕಲಿ ಎನ್‌ಕೌಂಟರ್ ಇರಬಹುದು ಎಂಬ ಶಂಕೆಯನ್ನು ತಮಿಳುನಾಡು ಜನಪ್ರತಿನಿಧಿಗಳು ವ್ಯಕ್ತಪಡಿಸಿದ್ದಾರೆ.

ಮೆಟ್ಟೂರು ಜಲಾಶಯ ನಿರ್ಮಾಣದ ಸಮಯದಲ್ಲಿ ಹನೂರು ಭಾಗಕ್ಕೆ ಬಂದು ನೆಲೆಸಿದ ಮೃತರೆಲ್ಲರೂ ಮೂಲತಃ ತಮಿಳುನಾಡಿನವರಾಗಿದ್ದಾರೆ. ನೆರೆ ರಾಜ್ಯದಲ್ಲಿದ್ದು ಜೀವಿಸುತ್ತಿರುವ ತಮಿಳರ ಸುರಕ್ಷತೆ ಮತ್ತು ಹಕ್ಕುಗಳನ್ನು ರಕ್ಷಿಸುವುದು ಸರ್ಕಾರದ ಕರ್ತವ್ಯ ಎಂದು ಶಾಸಕರು ಸದನದಲ್ಲಿ ಪ್ರತಿಪಾದಿಸಿದರು.

ಘಟನೆಯಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಕ್ಕೆ ತಲಾ 1 ಕೋಟಿ ರೂಪಾಯಿ ಪರಿಹಾರ ನೀಡಬೇಕು ಮತ್ತು ನೈಜ ಸತ್ಯಾಂಶ ಹೊರಬರಲು ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು ಎಂದು ತಮಿಳುನಾಡು ಶಾಸಕರು ಸರ್ಕಾರವನ್ನು ಆಗ್ರಹಿಸಿದ್ದಾರೆ.

# ಸೆ.5ರಿಂದ ರಾಯಚೂರಿನಲ್ಲಿ ದಕ್ಷಿಣ ಭಾರತ ಬ್ಯಾಡ್ಮಿಂಟನ್ ಟೂರ್ನಿ



**ರಾಯಚೂರು, ಆ. 18:** ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್, ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳ ಸಹಯೋಗದೊಂದಿಗೆ ಸೆಪ್ಟೆಂಬರ್ 5ರಿಂದ 8ರ ವರೆಗೆ ದಕ್ಷಿಣ ಭಾರತ ಬ್ಯಾಡ್ಮಿಂಟನ್ ಟೂರ್ನಿಯನ್ನು ರಾಯಚೂರು ನಗರದಲ್ಲಿ ಏರ್ಪಡಿಸಲಾಗಿದೆ ಎಂದು ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ರಾಜ್ಯಾಧ್ಯಕ್ಷ ಕುಮಾರ ಬಂಗಾರಪ್ಪ ತಿಳಿಸಿದರು.

ಪ್ರತಿ ಆರು ವರ್ಷಗಳಿಗೊಮ್ಮೆ ಕರ್ನಾಟಕಕ್ಕೆ ಒಲಿಯುವ ದಕ್ಷಿಣ ಭಾರತಮಟ್ಟದ ಈ ಬೃಹತ್ ಟೂರ್ನಿಯನ್ನು ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಆಯೋಜಿಸಲಾಗುತ್ತಿತ್ತು. ಆದರೆ, ಈ ಬಾರಿ ಗ್ರಾಮೀಣ ಭಾಗ ಹಾಗೂ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ರಾಯಚೂರು ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ ಎಂದು ನಗರದಲ್ಲಿಂದು ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು.

ಟೂರ್ನಿಯಲ್ಲಿ ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಅತಿಥೇಯ ಕರ್ನಾಟಕ ಸೇರಿದಂತೆ ಒಟ್ಟು 7 ರಾಜ್ಯಗಳಿಂದ ಸುಮಾರು 250 ರಿಂದ 300 ಪ್ರಮುಖ ಕ್ರೀಡಾಪಟುಗಳು ಸೇರಿ ತರಬೇತುದಾರರು ಮತ್ತು ತಾಂತ್ರಿಕ ತಂಡದ ಸದಸ್ಯರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಇಲ್ಲಿನ ಮಹಾತ್ಮ ಗಾಂಧಿ ಒಳಾಂಗಣ ಕ್ರೀಡಾಂಗಣದ 6 ಕೋರ್ಟ್‌ಗಳಲ್ಲಿ ರಾಷ್ಟ್ರೀಯ ಮಟ್ಟದ ಮಾನದಂಡಗಳಿಗೆ ಅನುಗುಣವಾಗಿ ಈ ಟೂರ್ನಿ ನಡೆಯಲಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಅಜಯ್ ಸಿಂಗ್ ಸೇರಿ ಜಿಲ್ಲೆಯ ಶಾಸಕರು, ಜನಪ್ರತಿನಿಧಿಗಳು, ಅಧಿಕಾರಿ ಗಳು, ಬ್ಯಾಡ್ಮಿಂಟನ್ ಸಂಸ್ಥೆಯ ಪದಾಧಿಕಾರಿಗಳು ಟೂರ್ನಿ ಯಶಸ್ಸಿಗೆ ಸಹಕಾರ ನೀಡಲಿದ್ದಾರೆ. ಟೂರ್ನಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಕ್ರೀಡಾಪಟುಗಳು ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಟೂರ್ನಿಯಲ್ಲಿ ಭಾಗವಹಿಸಲು ಅರ್ಹತೆ ಪಡೆಯಲಿದ್ದಾರೆ ಎಂದರು.

## ಶ್ರಾವಣ ಮಾಸದ ಪ್ರಯುಕ್ತ ಆ.24ರಂದು ಗುರು ಅಜ್ಜಯ್ಯನ 20ನೇ ವರ್ಷದ ವಿಶೇಷ ಪೂಜಾ ಕಾರ್ಯಕ್ರಮ




**ಬಳ್ಳಾರಿ,ಆ,18 :** ತಾಲೂಕಿನ ಹೊನ್ನಳ್ಳಿ ತಾಂಡಾದಲ್ಲಿ ಶ್ರೀ ಗುರು ಅಜ್ಜಯ್ಯ ಹಾಗೂ ಹೇಮಜ್ಜಯ್ಯ ಸೇವಾ ಸಮಿತಿ, ಹೊನ್ನಳ್ಳಿ ತಾಂಡ, ಬಳ್ಳಾರಿ ವತಿಯಿಂದ ಶ್ರೀ ಗುರು ಅಜ್ಜಯ್ಯನವರ 20ನೇ ವರ್ಷದ ಶ್ರಾವಣ ಮಾಸದ ವಿಶೇಷ ಪೂಜಾ ಕಾರ್ಯಕ್ರಮವನ್ನು ಆ.24ರಂದು ಅದ್ದೂರಿಯಾಗಿ ಆಯೋಜಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷ, ವಕೀಲ ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆಯನ್ನು ನೀಡಿರುವ, ಆ.24ರಂದು ಸಂಜೆ 4 ಗಂಟೆಯಿಂದ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿದ್ದು, ರುದ್ರಾಭಿಷೇಕ, ಗಂಗಾ ಪೂಜೆ, ಮಹಾಮಂಗಳಾರತಿ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ, ಮತ್ತು ಆ ದಿನ ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ಜರುಗಲಿದ್ದು ಅದರಲ್ಲಿ ಕೋಲಾಟ ಸೇರಿದಂತೆ ಸಾಂಸ್ಕೃತಿಕ ವಿವಿಧ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ. ಶ್ರೀ ಗುರು ಅಜ್ಜಯ್ಯ ಹಾಗೂ ಶ್ರೀ ಹೇಮಜ್ಜಯ್ಯನವರ ಸನ್ನಿಧಿಗೆ ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಜೀವನದಲ್ಲಿ ನೆಮ್ಮದಿ, ಸಂತೋಷ ಹಾಗೂ ಶಾಂತಿಗಾಗಿ ಪ್ರಾರ್ಥಿಸುವವರು, ವಿವಿಧ ಸಂಕಷ್ಟಗಳಿಂದ ಪರಿಹಾರ ಬಯಸುವವರು ಹಾಗೂ ಸಂತಾನ ಭಾಗ್ಯಕ್ಕಾಗಿ ಪ್ರಾರ್ಥಿಸುವ ದಂಪತಿಗಳು ಸನ್ನಿಧಿಗೆ ಆಗಮಿಸುತ್ತಿದ್ದಾರೆ. ಗುರುಗಳ ಮೇಲೆ ನಂಬಿಕೆ ಇಟ್ಟು ಪ್ರಾರ್ಥಿಸಿದ ಬಳಿಕ ತಮ್ಮ ಬದುಕಿನಲ್ಲಿ ಒಳಿತಿನ ಬದಲಾವಣೆಗಳಾಗಿವೆ ಎಂದು ಅನೇಕ ಭಕ್ತರು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ಮಲ್ಲಿಕಾರ್ಜುನ ಹೇಳಿದರು.

# ಮಹಿಳೆಯರ ಪ್ರತಿಭೆಗೆ ಹುಮ್ಮಸ್ಸು ತುಂಬಬೇಕು: ನಾರಾ ವೈಜಯಂತಿ ರೆಡ್ಡಿ



**ಬಳ್ಳಾರಿ, ಆ.18:** ಮಹಿಳೆಯರಿಗೆ ವೇದಿಕೆ ಕಲ್ಪಿಸುವ ಮೂಲಕ ಅವರಲ್ಲಿನ ಪ್ರತಿಭೆಗೆ ಹುಮ್ಮಸ್ಸು ತುಂಬುವ ಕೆಲಸ ನಾವು ಮಾಡುತ್ತಿದ್ದೇವೆ ಎಂದು ಟಚ್ ಫಾರ್ ಲೈಫ್ ಫೌಂಡೇಶನ್‌ನ ನಿರ್ದೇಶಕಿ ನಾರಾ ವೈಜಯಂತಿ ರೆಡ್ಡಿ ಹೇಳಿದರು.

ಮಂಗಳವಾರ ನಗರದ ಖಾಸಗಿ ಹೋಟೇಲಿನ ಸಭಾಂಗಣದಲ್ಲಿ ಫೌಂಡೇಶನ್ ವತಿಯಿಂದ ಏರ್ಪಡಿಸಿದ್ದ ಕಾಂತಿಯ ಹೊಸ ಕ್ರಾಂತಿ– ಒಂದು ದಿನದ ಪ್ರಸಾದನ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಎಲ್ಲ ಮಹಿಳೆಯರಲ್ಲಿಯೂ ಒಂದು ಪ್ರತಿಭೆ ಇರುತ್ತದೆ, ಅವರಿಗೆ ಸರಿಯಾದ ಪ್ರೋತ್ಸಾಹ ಸಿಕ್ಕಿರುವುದಿಲ್ಲ, ಆ ಪ್ರೋತ್ಸಾಹ ನೀಡುವ ಕೆಲಸ ನಾವು ಮಾಡುತ್ತಿದ್ದೇವೆ ಎಂದರು.

ದಿನನಿತ್ಯದ ಬದುಕಿನಲ್ಲಿ ಮಹಿಳೆಯರು ತಮ್ಮ ಕುಟುಂಬ, ಮಕ್ಕಳು–ಪತಿಗಾಗಿ, ಕುಟುಂಬದ ಸದಸ್ಯರಿಗಾಗಿ ಶ್ರಮಿಸುತ್ತಾರೆ, ಕಾಲಾಂತರದಲ್ಲಿ ನನ್ನಲ್ಲೂ ಒಂದು ಪ್ರತಿಭೆ ಇತ್ತು ಅಂತ ಒಂದು ದಿನ ಅನಿಸುತ್ತದೆ, ಹೀಗಾಗಿ ಮಹಿಳೆಯರ ಪ್ರತಿಭೆ ವ್ಯರ್ಥ ಆಗಬಾರದೆಂಬ ಕಾರಣಕ್ಕೆ ಅವರನ್ನು ಪ್ರೋತ್ಸಾಹಿಸಲು ಈ ಕಾರ್ಯಾಗಾರ ಆಯೋಜಿಸಿದ್ದೇವೆ ಎಂದು ನಾರಾ ವೈಜಯಂತಿ ರೆಡ್ಡಿ ಹೇಳಿದರು.

ಕಲಿಕಾರ್ಥಿಗಳ ಸಂಖ್ಯೆ ಹೆಚ್ಚಿರುವುದು ಕಂಡು ಬಂದಿದ್ದು, ಮುಂದಿನ ದಿನಗಳಲ್ಲಿ ಮತ್ತೊಂದು ಇದೇ ರೀತಿಯ ಕಾರ್ಯಾಗಾರ ಏರ್ಪಡಿಸಲಾಗುವುದು ಎಂದರು.

ಐದು ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಯುವತಿಯರು, ಗೃಹಿಣಿಯರು ಕಾರ್ಯಾಗಾರದಲ್ಲಿ ಭಾಗಿಯಾದರು. ಭಾಗಿಯಾದ ಕಲಿಕಾರ್ಥಿಗಳಿಗೆ ನಾರಾ ವೈಜಯಂತಿ ರೆಡ್ಡಿ ಅವರು ಪ್ರಮಾಣಪತ್ರ ಹಾಗೂ ಉಚಿತವಾಗಿ ಮೇಕಪ್ ಕಿಟ್ ನೀಡಲಾಯಿತು.

## ಅಜಾತಶತ್ರು ವಾಜಪೇಯಿ ಪುಣ್ಯತಿಥಿ

# ಭಾರತೀಯ ರಾಜಕಾರಣದಲ್ಲಿ ವಾಜಪೇಯಿ ಅವರದು ವಿಶಿಷ್ಟ ಸ್ಥಾನ: ಡಾ.ಶೈಲೇಂದ್ರ ಬೆಲ್ದಾಳೆ



**ಬೀದರ್, ಆ. 18:** ಭಾರತೀಯ ರಾಜಕಾರಣದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಅಜಾತಶತ್ರು ಎಂದು ಹೆಸರಾಗಿರುವ ಅವರಿಗೆ ವಿರೋಧಿಗಳೇ ಇರಲಿಲ್ಲ. ಅಂಥ ಅಗಧವಾದ ವ್ಯಕ್ತಿತ್ವವನ್ನು ರೂಪಿಸಿಕೊಂಡು ರಾಜಕಾರಣದ ಧ್ರುವತಾರೆ ಎನಿಸಿಕೊಂಡಿದ್ದಾರೆ ಎಂದು ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಹೇಳಿದರು.

ಇಲ್ಲಿನ ಪ್ರತಾಪ್ ನಗರದಲ್ಲಿ ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅವರ ಕಚೇರಿಯಲ್ಲಿ ಆಯೋಜಿಸಿದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಪುಣ್ಯತಿಥಿ ಅಂಗವಾಗಿ, ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ವಾಜಪೇಯಿ ಅವರ ರಾಷ್ಟ್ರಸೇವೆ, ಆದರ್ಶ ನಾಯಕತ್ವ ಹಾಗೂ ದೇಶದ ಅಭಿವೃದ್ಧಿಗೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

ಸ್ವತಃ ಕವಿಯಾಗಿರುವ ವಾಜಪೇಯಿ ಅವರದು ಕವಿ ಹೃದಯ, ಸರಳ, ಸೌಜನ್ಯ, ಪ್ರಾಮಾಣಿಕತೆ, ದೂರದೃಷ್ಟಿ ಹಾಗೂ ಅಪ್ರತಿಮ ವಾಕ್ಚಾತುರ್ಯದಿಂದ ಅವರು ದೇಶದ ಜನರ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ ಎಂದು ಹೇಳಿದರು.

ಪ್ರಧಾನ ಮಂತ್ರಿಯಾಗಿ ವಾಜಪೇಯಿ ಅವರು ದೇಶದ ಮೂಲಸೌಕರ್ಯ ಅಭಿವೃದ್ಧಿ, ಆರ್ಥಿಕ ಪ್ರಗತಿ, ರಾಷ್ಟ್ರೀಯ ಭದ್ರತೆ ಹಾಗೂ ಭಾರತದ ಜಾಗತಿಕ ಸ್ಥಾನಮಾನವನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಕ್ರಮಗಳನ್ನು ಕೈಗೊಂಡಿದ್ದರು. ದೇಶದ ಹಿತವೇ ತಮ್ಮ ರಾಜಕೀಯದ ಮುಖ್ಯ ಧ್ಯೇಯವಾಗಿಸಿಕೊಂಡು, ಯಾವುದೇ ಸಂದರ್ಭದಲ್ಲಿಯೂ ರಾಷ್ಟ್ರದ ಹಿತಾಸಕ್ತಿಗೆ ರಾಜಿಯಾಗದ ನಾಯಕತ್ವವನ್ನು ಅವರು ಪ್ರದರ್ಶಿಸಿದ್ದರು ಎಂದು ಸ್ಮರಿಸಿದರು.

ಪಕ್ಷದ ಮುಖಂಡರಾದ ಬಾಬುರಾವ್ ಮದಕಟ್ಟಿ, ಪ್ರಶಾಂತ ಬೇಮಳಖೇಡ, ಸಂತೋಷ್ ಜಗದಾಳೆ, ಬಸವರಾಜ ಸಿಂದೋಲ್ ತಾಂಡಾ, ಶ್ರೀನಿವಾಸ ಸಿಂದೋಲ್, ಶಿವಕುಮಾರ ಕೊಳಾರೆ, ವಿಶಾಲ ಅತಿವಾಳ, ಅಮರ್ ಕಪಲಾಪುರ, ಸಂತೋಷ್, ವೀರೇಶ ಬಮಣಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಿಜೆಪಿ ಕಚೇರಿಯಲ್ಲಿ ಗೌರವ: ನಗರದ ನೌಬಾದ್‌ನಲ್ಲಿರುವ ಬೀದರ್ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಗೌರವಸಲ್ಲಿಸಲಾಯಿತು. ಪಕ್ಷದ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಅವರು ವಾಜಪೇಯಿಯವರ ಭಾವಚಿತ್ರಕ್ಕೆ ಪುಷ್ಪಗೌರವ ಸಲ್ಲಿಸಿದರು.

# ಸಶಕ್ತ ಯುವಕರ ರೂಪಿಸಲು ಭಾರತ್ ಜೋಡೊ ಯುವಸಂಘಕ್ಕೆ ಆದ್ಯತೆ: ಸಿಇಓ



**ರಾಯಚೂರು, ಆ. 18:** ಗ್ರಾಮೀಣ ಪ್ರದೇಶದಲ್ಲಿ ಸಶಕ್ತ ಯುವಕರನ್ನು ರೂಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಜಾರಿಗೊಳಿಸಿದ ಭಾರತ್ ಜೋಡೊ ಯುವಸಂಘಗಳ ರಚನೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗಮನಹರಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರಕುಮಾರ ಕಾಂದೂ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಯುವಕರನ್ನು ಸಂಘಟಿಸಲು ಮತ್ತು ಸರ್ಕಾರಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಯುವ ಸಂಘಗಳನ್ನು ರಚಿಸಲು ಸರ್ಕಾರ ನಿರ್ಧರಿಸಿದೆ. ಪ್ರತಿ ಸಂಘಕ್ಕೆ ?10 ಲಕ್ಷ ಮಂಜೂರಾಗುತ್ತದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲ ಹಳ್ಳಿಗಳಲ್ಲಿ ಸಂಘ ರಚನೆ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ತಿಳಿಸಿದರು.

> **ಜಿಲ್ಲಾದ್ಯಂತ ತೀವ್ರ ಮಳೆ ಕೊರತೆಯಿಂದಾಗಿ ಕೃಷಿ ಕೆಲಸ ಕಾರ್ಯಗಳಿಗೆ ಹಿನ್ನಡೆಯಾಗಿದೆ. ವಿಬಿ ಜಿ ರಾಮ್ ಜಿ ಯೋಜನೆಯಡಿ ಕೂಲಿಕಾರರಿಗೆ ಕೆಲಸ ಒದಗಿಸಬೇಕು**
> **–ಈಶ್ವರಕುಮಾರ ಕಂದೂ, ಜಿ.ಪಂ ಸಿಇಒ**


ಯುವಕ, ಯುವತಿಯನ್ನು ಸಂಘಟಿಸಿ, ಭಾರತ್ ಜೋಡೊ ಯುವಸಂಘ ರಚನೆ ಮತ್ತು ಕಾರ್ಯಚಟುವಟಿಕೆಗೆ ಚಾಲನೆ ನೀಡಬೇಕು. ಪ್ರತಿ ತಿಂಗಳು ಕನಿಷ್ಠ ಒಂದು ಬಾರಿಯಾದರೂ ಯುವ ಸಂಘದ ಪದಾಧಿಕಾರಿಗಳ ಸಭೆ ನಡೆಸಿ, ಶ್ರಮದಾನ, ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಬೇಕು. ಜಿಲ್ಲೆಯಾದ್ಯಂತ 1,452 ಸಂಘಗಳನ್ನು ರಚಿಸಲಾಗಿದೆ. ಆಗಸ್ಟ್ 25ರೊಳಗೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸಂಘಗಳನ್ನು ರಚಿಸಿ, ಅಧ್ಯಕ್ಷ, ಉಪಾಧ್ಯಕ್ಷರನ್ನು ನೇಮಿಸಬೇಕು ಎಂದರು.

ದೇವದುರ್ಗ ತಾಲ್ಲೂಕಿನ ಸೋಮನಮರಡಿ ಪಿಡಿಒ ಲಕ್ಷ್ಮೀ ಅಷ್ಟಗಿ ಹಾಗೂ ರಾಯಚೂರು ತಾಲ್ಲೂಕಿನ ಸಗಮಕುಂಟಾದ ಪಿಡಿಒ ಕರಿಯಪ್ಪ ಕ್ರಮವಾಗಿ ಜುಲೈ ಮತ್ತು ಆಗಸ್ಟ್ ತಿಂಗಳ ಉತ್ತಮ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

# ಹಾರ್ಮುಜ್ ಜಲಸಂಧಿ ಅಮೆರಿಕದ ಪ್ರದೇಶ: ಟ್ರಂಪ್ ಹೇಳಿಕೆ ತಳ್ಳಿಹಾಕಿದ ಇರಾನ್

**ವಾಷಿಂಗ್ಟನ್/ಟೆಹ್ರಾನ್, ಆ.18:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಮತ್ತೊಮ್ಮೆ ಹಾರ್ಮುಜ್ ಜಲಸಂಧಿಯನ್ನು ಅಮೆರಿಕದ ಪ್ರದೇಶವಾಗಬೇಕೆಂದು ಸೂಚಿಸಿದರು, "ಹೊಸ ಅಮೆರಿಕ ಪ್ರದೇಶ" ಎಂಬ ಶೀರ್ಷಿಕೆಯಡಿಯಲ್ಲಿ ಕಾರ್ಯತಂತ್ರದ ಜಲಮಾರ್ಗವನ್ನು ತೋರಿಸುವ ನಕ್ಷೆಯನ್ನು ಟ್ರೂತ್ ಸೋಷಿಯಲ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಹೈಲೈಟ್ ಮಾಡಲಾದ ಪ್ರದೇಶವು ಇರಾನ್, ಒಮಾನ್ ಮತ್ತು ಯುಎಇ ಕರಾವಳಿಯ ಕೆಲವು ಭಾಗಗಳನ್ನು ಒಳಗೊಂಡಿತ್ತು. ಕಳೆದ ವಾರ ಟ್ರಂಪ್ "ನಾನು ಅದನ್ನು ಉಳಿಸಿಕೊಳ್ಳುತ್ತೇನೆ ಎಂದು ಭಾವಿಸುತ್ತೇನೆ" ಎಂದು ಬರೆದಾಗ ಇದೇ ರೀತಿಯ ಸಂದೇಶವನ್ನು ಪೋಸ್ಟ್ ಪ್ರತಿಧ್ವನಿಸಿತು, ಅವರು ಪದೇ ಪದೇ ಅಮೆರಿಕದ ನಿಯಂತ್ರಣದಲ್ಲಿದೆ ಎಂದು ಹೇಳಿಕೊಂಡ ಜಲಮಾರ್ಗವನ್ನು ಉಲ್ಲೇಖಿಸಿ. ಆದಾಗ್ಯೂ, ಶ್ವೇತಭವನದ ಅಧಿಕಾರಿಗಳು ನಂತರ ಜಲಸಂಧಿಯನ್ನು ಅಮೆರಿಕದ ಪ್ರದೇಶವೆಂದು ಘೋಷಿಸುವ ಬಗ್ಗೆ ಅವರು ತಮಾಷೆ ಮಾಡುತ್ತಿದ್ದಾರೆ ಎಂದು ಹೇಳಿದರು. ಹಾರ್ಮುಜ್ ಜಲಸಂಧಿಯು ಎರಡು ರಾಷ್ಟ್ರಗಳ ನಡುವಿನ ಸುಮಾರು ಆರು ತಿಂಗಳ ಯುದ್ಧದ ಕೇಂದ್ರಬಿಂದುವಾಗಿದೆ. ಪರ್ಷಿಯನ್ ಕೊಲ್ಲಿಯಿಂದ ಜಾಗತಿಕ ಮಾರುಕಟ್ಟೆಗಳಿಗೆ ತೈಲ ಮತ್ತು ಅನಿಲವನ್ನು ಸಾಗಿಸುವ ಗಲ್ಫ್ ರಾಷ್ಟ್ರಗಳಿಗೆ ಈ ಜಲಮಾರ್ಗವು ನಿರ್ಣಾಯಕ ಮಾರ್ಗವಾಗಿದೆ, ಆದರೆ ವಾಷಿಂಗ್ಟನ್ ಮತ್ತು ಟೆಹ್ರಾನ್ ಎರಡೂ ಅದರ ಮೇಲೆ ನಿಯಂತ್ರಣವನ್ನು ಹೊಂದಿವೆ. ಇರಾನ್ನ ಉಪ ವಿದೇಶಾಂಗ ಸಚಿವ ಕಾಜೆಮ್ ಘರಿಬಬಾದಿ ಅವರು ಟ್ರಂಪ್ ಅವರ ಇತ್ತೀಚಿನ ಹೇಳಿಕೆಯನ್ನು "ಭ್ರಮೆ" ಎಂದು ತಳ್ಳಿಹಾಕಿದರು, "ಶೀಘ್ರದಲ್ಲೇ ಹಾರ್ಮುಜ್ ಜಲಸಂಧಿಯ ಬಗ್ಗೆ ಅವರ ಭ್ರಮೆಯನ್ನು ಸರಿಪಡಿಸಲಾಗುತ್ತದೆ, ಅಥವಾ ನಾವು ಈ ಮೋಸಗೊಂಡ ವ್ಯಕ್ತಿಯ ಭ್ರಮೆಗಳನ್ನು ಸರಿಪಡಿಸುತ್ತೇವೆ" ಎಂದು ಸಾಮಾಜಿಕ ಮಾಧ್ಯಮದಲ್ಲಿ ಅಣಕಿಸುತ್ತಾ ಬರೆದಿದ್ದಾರೆ. ಟ್ರಂಪ್ ಇರಾನ್ನ ಕರಾವಳಿಯುದ್ದಕ್ಕೂ ಇರುವ ಜಲರಾಶಿಯನ್ನು "ಅರೇಬಿಯನ್ ಕೊಲ್ಲಿ" ಎಂದು "ಸರಿಯಾಗಿ" ಉಲ್ಲೇಖಿಸಿದ್ದಾರೆ, ಈ ಪ್ರದೇಶದಲ್ಲಿ ಯುಎಸ್–ಮಿತ್ರ ಅರಬ್ ರಾಷ್ಟ್ರಗಳು ಇದನ್ನು ಆದ್ಯತೆ ನೀಡುತ್ತವೆ ಎಂದು ಅವರು ಗಮನಿಸಿದರು.



ಅಮೆರಿಕವು ಹಾರ್ಮುಜ್ ಜಲಸಂಧಿಯನ್ನು "ಒಡೆತನದಲ್ಲಿದೆ" ಎಂದು ಟ್ರಂಪ್ ಪದೇ ಪದೇ ಹೇಳಿಕೊಂಡಿದ್ದಾರೆ, ಅದರ ಕೆಲವು ಭಾಗಗಳು ಇರಾನ್ ಮತ್ತು ಒಮಾನ್ನ ಪ್ರಾದೇಶಿಕ ಸಮುದ್ರಗಳೊಳಗೆ ಬರುತ್ತವೆ. ಆದಾಗ್ಯೂ, ಕಡಲ ಕಾನೂನು ತಜ್ಞರು, ಅಧ್ಯಕ್ಷೀಯ ಘೋಷಣೆಯ ಮೂಲಕ ಭೂಪ್ರದೇಶದ ಮೇಲೆ ಅಮೆರಿಕದ ಹಕ್ಕನ್ನು ಸ್ಥಾಪಿಸಲು ಸಾಧ್ಯವಿಲ್ಲ ಎಂದು ಹೇಳಿದರು. "ಯುಎಸ್ ಕಾನೂನಿನ ಅಡಿಯಲ್ಲಿ, ಅಧ್ಯಕ್ಷೀಯ ಘೋಷಣೆ (ಅಥವಾ) ತೀರ್ಪಿನ ಮೂಲಕ ಭೂಪ್ರದೇಶವನ್ನು ಹಕ್ಕು ಸಾಧಿಸುವುದು ಸಾಕಾಗುವುದಿಲ್ಲ. ಮೊದಲು ತೆರವುಗೊಳಿಸಬೇಕಾದ ಪ್ರಮುಖ ಸಾಂವಿಧಾನಿಕ ಅವಶ್ಯಕತೆಗಳಿವೆ" ಎಂದು ಲಂಡನ್ ವಿಶ್ವವಿದ್ಯಾಲಯದ ಸಿಟಿಯಲ್ಲಿ ಮ್ಯಾರಿಟೈಮ್ ಕಾನೂನು ಪ್ರಾಧ್ಯಾಪಕ ಮತ್ತು ಮಲೇಷ್ಯಾದ ಮ್ಯಾರಿಟೈಮ್ ಇನ್ಸ್ಟಿಟ್ಯೂಟ್‌ನ ಫೆಲೋ ಜೇಸನ್ ಚುವಾ ಸಿಎನ್‌ಎನ್ಗೆ ತಿಳಿಸಿದರು. "ಅಂತರರಾಷ್ಟ್ರೀಯ ಕಾನೂನಿನ ಅಡಿಯಲ್ಲಿ, ಸ್ವಾಧೀನವು ವಿಶ್ವಸಂಸ್ಥೆಯ ಚಾರ್ಟರ್ಗೆ ವಿರುದ್ಧವಾಗಿದೆ. ಜಲಮೂಲಗಳು ಸೇರಿದಂತೆ ಪ್ರದೇಶಗಳನ್ನು ಒಪ್ಪಂದ ಅಥವಾ ಒಪ್ಪಂದದ ಮೂಲಕ ಮಾತ್ರ ತೆಗೆದುಕೊಳ್ಳಬಹುದು" ಎಂದು ಚುವಾ ಹೇಳಿದರು, ಭೂಪ್ರದೇಶವನ್ನು ಆಕ್ರಮಿಸಿಕೊಂಡರೂ ಸಹ ಕಾನೂನುಬದ್ಧ ಹಕ್ಕು ನೀಡುವುದಿಲ್ಲ ಎಂದು ಹೇಳಿದರು.

ಸ್ವಾನ್ಸೀ ವಿಶ್ವವಿದ್ಯಾಲಯದ ಶಿಪ್ಪಿಂಗ್ ಕಾನೂನು ಪ್ರಾಧ್ಯಾಪಕ ಸೈಮನ್ ಬಾಫೆನ್, ಜಲಸಂಧಿಯ ಮೇಲಿನ ವಾಷಿಂಗ್ಟನ್ನ ಹಕ್ಕು ಎಂದಿಗೂ ಫಲಪ್ರದವಾಗುವ ಸಾಧ್ಯತೆಯಿಲ್ಲ ಎಂದು ಹೇಳಿದರು. "ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ, ಇರಾನ್ ಜಲಸಂಧಿಯಲ್ಲಿನ ತನ್ನ ಪ್ರಾದೇಶಿಕ ನೀರನ್ನು ಅಮೆರಿಕಕ್ಕೆ ಬಿಟ್ಟುಕೊಡಲು ಒಪ್ಪಿಕೊಂಡರೆ ಮಾತ್ರ ಇದನ್ನು ಮಾಡಬಹುದು" ಎಂದು ಅವರು ಹೇಳಿದರು, ಅಂತಹ ಸನ್ನಿವೇಶವನ್ನು "ತುಂಬಾ ಅಸಂಭವ" ಎಂದು ವಿವರಿಸಿದರು. ಹೆಚ್ಚು ಸಮರ್ಥನೀಯ ಫಲಿತಾಂಶವೆಂದರೆ ಯುಎಸ್, ಇರಾನ್ ಮತ್ತು ಒಮಾನ್ ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಮತ್ತು ಜಲಮಾರ್ಗವನ್ನು ಬಳಸುವ ಹಡಗುಗಳ ಮೇಲೆ ಸುಂಕ ವಿಧಿಸಲು ಒಪ್ಪಿಕೊಳ್ಳುವುದನ್ನು ಒಳಗೊಂಡಿರಬಹುದು ಎಂದು ಬಾಫೆನ್ ಸೂಚಿಸಿದರು. ಆದಾಗ್ಯೂ, ಅಂತಹ ವ್ಯವಸ್ಥೆಯು ಸಾಂಪ್ರದಾಯಿಕ ಅಂತರರಾಷ್ಟ್ರೀಯ ಕಾನೂನು ಮತ್ತು 1982 ರ ವಿಶ್ವಸಂಸ್ಥೆಯ ಸಮುದ್ರ ಕಾನೂನಿನ ಸಮಾವೇಶದ ನಿಬಂಧನೆಗಳೊಂದಿಗೆ ಸಂಘರ್ಷಿಸುತ್ತದೆ ಎಂದು ಅವರು ಗಮನಿಸಿದರು. ಹಾರ್ಮುಜ್ ಜಲಸಂಧಿಯ ಮೇಲೆ ಇರಾನ್ ಅಥವಾ ಒಮಾನ್ ಎರಡೂ ಅನಿಯಂತ್ರಿತ ಹಕ್ಕುಗಳನ್ನು ಹೊಂದಿಲ್ಲ ಎಂದು ಚುವಾ ಒತ್ತಿ ಹೇಳಿದರು. "ಸಂಚಾರ ಸ್ವಾತಂತ್ರ್ಯ ಚಾಲ್ತಿಯಲ್ಲಿದೆ. ಅದು ಕಾನೂನು," ಅವರು ಹೇಳಿದರು. "ಜಲಸಂಧಿಯು ಇರಾನಿನ ಆಸ್ತಿಯೂ ಅಲ್ಲ ಅಥವಾ ಸಾಮಾನ್ಯ ಅರ್ಥದಲ್ಲಿ ರಿಯಲ್ ಎಸ್ಟೇಟ್ ತುಣುಕಿನ ಭಾಗವೂ ಅಲ್ಲ. ಇದು ಅಂತರರಾಷ್ಟ್ರೀಯ ಸಮುದ್ರ ಸಂಚಾರ ಆಡಳಿತಕ್ಕೆ ಒಳಪಟ್ಟಿರುವ ಸಾರ್ವಭೌಮ ಪ್ರದೇಶವಾಗಿದೆ" ಎಂದು ಚುವಾ ಹೇಳಿದರು. "ನೌಕಾಪಡೆಯು ಜಲಮಾರ್ಗವನ್ನು ನಿಯಂತ್ರಿಸಬಹುದು. ಅದನ್ನು ನಿಯಂತ್ರಿಸುವ ಮೂಲಕ ಅದು ಶೀರ್ಷಿಕೆಯ ಕಾನೂನನ್ನು ಪುನಃ ಬರೆಯಲು ಸಾಧ್ಯವಿಲ್ಲ" ಎಂದು ಅವರು ಹೇಳಿದರು.

# ಅಮೆರಿಕದ ಮುಂದೆ ಇರಾನ್ ಬೇಡಿಕೆಗಳ ಸರಣಿ ಪಟ್ಟಿ

**ಟೆಹ್ರಾನ್, ಆ.18:** ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವ ಮೊದಲು ಅಮೆರಿಕ ಪೂರೈಸಬೇಕು ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಗಾಲಿಬಾಫ್ ಇಂದು ಬೇಡಿಕೆಗಳ ಸರಣಿಯನ್ನು ಹೊರಡಿಸಿದ್ದಾರೆ. ಜಾಗತಿಕ ಕಚ್ಚಾ ತೈಲ ಹರಿವಿನ ಐದನೇ ಒಂದು ಭಾಗಕ್ಕಿಂತ ಹೆಚ್ಚಿನದನ್ನು ನಿರ್ವಹಿಸುವ ನಿರ್ಣಾಯಕ ಜಲಮಾರ್ಗದ ಮೂಲಕ ಸಂಚಾರವು ಯುದ್ಧದ ಆರಂಭದಿಂದಲೂ ತೀವ್ರವಾಗಿ ಕುಸಿದಿದೆ. ಇರಾನ್ ಬಂದರುಗಳ ಮೇಲಿನ ಯುಎಸ್ ದಿಗ್ಬಂಧನವನ್ನು ತೆಗೆದುಹಾಕುವುದು, ಇರಾನ್ನ ಹೆಪ್ಪುಗಟ್ಟಿದ ಸ್ವತ್ತುಗಳನ್ನು ಬಿಡುಗಡೆ ಮಾಡುವುದು, ಇರಾನ್ನ ತೈಲದ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವುದು ಮತ್ತು ಎಲ್ಲಾ ಮಿಲಿಟರಿ ಬೆದರಿಕೆಗಳು ಮತ್ತು ಕಾರ್ಯಾಚರಣೆಗಳನ್ನು ಕೊನೆಗೊಳಿಸುವುದು ಷರತ್ತುಗಳಲ್ಲಿ ಸೇರಿವೆ ಎಂದು ಇರಾನ್ನ ಸರ್ಕಾರಿ ಸ್ವಾಮ್ಯದ ಇಸ್ಲಾಮಿಕ್ ರಿಪಬ್ಲಿಕ್ ನ್ಯೂಸ್ ಏಜೆನ್ಸಿ (ಐಆರ್‌ಎನ್‌ಎ) ಗಾಲಿಬಾಫ್ ಹೇಳಿರುವುದಾಗಿ ಉಲ್ಲೇಖಿಸಿದೆ. ಜೂನ್‌ನಲ್ಲಿ ಟೆಹ್ರಾನ್ನೊಂದಿಗೆ ಮಾಡಿಕೊಂಡ ತಿಳುವಳಿಕೆ ಪತ್ರದ (ಎಂಒಯು) ಪ್ರಕಾರ ತಾನು ಬದ್ಧವಾಗಿರುವ "ಇತರ ನಿಯಮಗಳನ್ನು" ಜಾರಿಗೆ ತರಲು ಗಾಲಿಬಾಫ್ ವಾಷಿಂಗ್ಟನ್ಗೆ



ಕರೆ ನೀಡಿದರು. ಯುದ್ಧವನ್ನು ನಿಲ್ಲಿಸಲು ಮತ್ತು ಇರಾನ್‌ನ ಪರಮಾಣು ಕಾರ್ಯಕ್ರಮ ಮತ್ತು 60 ದಿನಗಳಲ್ಲಿ "ಅಂತಿಮ ಒಪ್ಪಂದ"ವನ್ನು ತಲುಪಲು ನಿರ್ಬಂಧಗಳನ್ನು ತೆಗೆದುಹಾಕುವಂತಹ ಬಾಕಿ ಇರುವ ಸಮಸ್ಯೆಗಳನ್ನು ಚರ್ಚಿಸಲು ಸಂವಾದವನ್ನು ಸುಗಮಗೊಳಿಸಲು ಈ ಒಪ್ಪಂದವನ್ನು ಉದ್ದೇಶಿಸಲಾಗಿತ್ತು. ಸೋಮವಾರ ಯಾವುದೇ ಪ್ರಗತಿಯಿಲ್ಲದೆ ಗಡುವು ಮುಕ್ತಾಯಗೊಂಡಿತು.

ಮಂಗಳವಾರದ ಆರಂಭದಲ್ಲಿ, ಹಾರ್ಮುಜ್ ಜಲಸಂಧಿಯಲ್ಲಿ ಒಂದು ಹಡಗಿನ ಮೇಲೆ "ಅಪರಿಚಿತ ಉತ್ಕ್ಷೇಪಕ" ಡಿಕ್ಕಿ ಹೊಡೆದು ಒಬ್ಬ ವ್ಯಕ್ತಿ ಸಾವನ್ನಪ್ಪಿದ್ದಾನೆ ಎಂದು ಯುಕೆ ಕಡಲ ವ್ಯಾಪಾರ ಕಾರ್ಯಾಚರಣೆಗಳಿಗೆ (ಯುಕೆಎಂಟಿಒ) ಸಲ್ಲಿಸಿದ ವರದಿಯಲ್ಲಿ ತಿಳಿಸಲಾಗಿದೆ.


ಜೂನ್ ಒಪ್ಪಂದದ ಅವಧಿ ಮುಗಿದಿರುವುದರಿಂದ ಯುಎಸ್–ಇರಾನ್ ಸಂಘರ್ಷಕ್ಕೆ ತ್ವರಿತ ಪರಿಹಾರ ಸಿಗುವ ಸಾಧ್ಯತೆ ಕಡಿಮೆಯಾಗುತ್ತಿದೆ ಎಂಬ ಕಳವಳ ಹೆಚ್ಚಾಗಿದೆ. ವ್ಯಾಪಾರಿಗಳು ದೀರ್ಘಕಾಲದ ಮುಖಾಮುಖಿಯ ನಿರೀಕ್ಷೆಯನ್ನು ನಿರ್ಣಯಿಸುತ್ತಿದ್ದಂತೆ ತೈಲಬೆಲೆ ಮತ್ತು ಸರ್ಕಾರಿ ಸಾಲ ವೆಚ್ಚಗಳು ಇಂದು ಏರಿವೆ. ಜಾಗತಿಕ ತೈಲ ಮಾನದಂಡವಾದ ಬ್ರೆಂಟ್ ಕಚ್ಚಾ ತೈಲವು ಆರಂಭಿಕ ವಹಿವಾಟಿನಲ್ಲಿ ಬ್ಯಾರೆಲ್ಗೆ 0.1 ಶೇಕಡಾ ಏರಿಕೆಯಾಗಿ 91 ಡಾಲರ್ಗೆ ತಲುಪಿದೆ, ಇದು ಜುಲೈ ಅಂತ್ಯದ ನಂತರದ ಅತ್ಯುನ್ನತ ಮಟ್ಟವಾಗಿದೆ. ಯುಎಸ್ ಮಾನದಂಡವಾದ ಡಬ್ಲ್ಯೂಟಿಐ ಫ್ಯೂಚರ್ಸ್ ಬ್ಯಾರೆಲ್ಗೆ 0.7 ಶೇಕಡಾ ಏರಿಕೆಯಾಗಿ 85 ಡಾಲರ್ಗೆ ತಲುಪಿದೆ. ವಾಷಿಂಗ್ಟನ್ನ ಗಲ್ಫ್ ಮಿತ್ರ ಓಮನ್ ಜಲಸಂಧಿಯಲ್ಲಿ ಅಮೆರಿಕದ ಪ್ರಯತ್ನಗಳಿಗೆ ಅಡ್ಡಿಪಡಿಸಿದರೆ ಅದರ ಮೇಲೆ ಬಾಂಬ್ ಹಾಕುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಬೆದರಿಕೆ ಹಾಕಿದ್ದಾರೆ, ಇದು ರಾಜತಾಂತ್ರಿಕ ಇತ್ಯರ್ಥವು ಆಶಾದಾಯಕ ಚಿಂತನೆಯಾಗಿಯೇ ಉಳಿದಿದೆ ಎಂಬ ವ್ಯಾಪಾರಿಗಳಲ್ಲಿ ಅಸಂಖ್ಯಾತ ಕಳವಳಗಳನ್ನು ಹೆಚ್ಚಿಸಿದೆ. ಯುಎಸ್–ಇರಾನ್ ಸಂಘರ್ಷವು ಇಂಧನ ಬೆಲೆಗಳನ್ನು ಹೆಚ್ಚಿಸುವ ಸಾಧ್ಯತೆಯನ್ನು ಮಾರುಕಟ್ಟೆಗಳು ತೂಗುತ್ತಿರುವುದರಿಂದ ಯುಎಸ್ ಸರ್ಕಾರದ ಬಾಂಡ್ ಇಳುವರಿಗಳು ಇಂದು ಏರಿವೆ. ಹೆಚ್ಚುವರಿಯಾಗಿ, ಹೆಚ್ಚಿನ ಇಂಧನ ವೆಚ್ಚಗಳು ಹಣದುಬ್ಬರದ ಒತ್ತಡವನ್ನು ಹೆಚ್ಚಿಸಬಹುದು ಮತ್ತು ಕೇಂದ್ರೀಯ ಬ್ಯಾಂಕ್ಗಳು ಬಡ್ಡಿದರಗಳನ್ನು ದೀರ್ಘಕಾಲದವರೆಗೆ ಹೆಚ್ಚಿನ ಮಟ್ಟದಲ್ಲಿ ಇರಿಸಿಕೊಳ್ಳುವ ಸಾಧ್ಯತೆಯನ್ನು ಹೆಚ್ಚಿಸಬಹುದು. ದೊಡ್ಡ ಸಾರ್ವಜನಿಕ ಸಾಲದ ಹೊರೆಗಳು ಸಾಲ ವೆಚ್ಚವನ್ನು ಹೆಚ್ಚಿಸಲು ಕಾರಣವಾಗುತ್ತಿವೆ.

ರಾಯಿಟರ್ಸ್ ಪ್ರಕಾರ, ಗಖ 30–ವರ್ಷಗಳ ಖಜಾನೆ ಬಾಂಡ್ನ ಮೇಲಿನ ಇಳುವರಿ ಇಂದು ದಿನದೊಳಗೆ 5.33 ಪ್ರತಿಶತದಷ್ಟು ಗರಿಷ್ಠ ಮಟ್ಟವನ್ನು ತಲುಪಿದೆ, ಇದು ಸುಮಾರು ಎರಡು ದಶಕಗಳಲ್ಲಿ ಅತ್ಯುನ್ನತ ಮಟ್ಟವನ್ನು ತಲುಪಿದೆ. ಜರ್ಮನಿಯ 10–ವರ್ಷಗಳ ಸರ್ಕಾರಿ ಬಾಂಡ್ ಇಳುವರಿಯೂ 15–ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿದೆ. ಸರ್ಕಾರಗಳ ಮೇಲಿನ ನಿರಂತರ ಹಣಕಾಸಿನ ಒತ್ತಡಗಳನ್ನು ಪ್ರತಿಬಿಂಬಿಸುವ ಮೂಲಕ 30–ವರ್ಷಗಳ ಸರ್ಕಾರಿ ಬಾಂಡ್ ಇಳುವರಿ "ಹಲವಾರು ದೇಶಗಳಲ್ಲಿ ಬಹು–ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿದೆ" ಎಂದು ಡಾಯ್ಚ ಬ್ಯಾಂಕ್ ವಿಶ್ಲೇಷಕರು ಇಂದು ಹೇಳಿದ್ದಾರೆ.

# ಹಾರ್ಮುಜ್: ಹಡಗಿಗೆ ಅಪರಿಚಿತ ಸ್ಫೋಟಕ ಡಿಕ್ಕಿ– ಸಿಬ್ಬಂದಿಗೆ ಗಾಯ

**ದುಬೈ, ಆ.18:** ಮಂಗಳವಾರ ಹಾರ್ಮುಜ್ ಜಲಸಂಧಿಯ ಮೂಲಕ ಸಾಗುತ್ತಿದ್ದ ಹಡಗೊಂದಕ್ಕೆ ಅಪರಿಚಿತ ಸ್ಫೋಟಕ ಡಿಕ್ಕಿ ಹೊಡೆದಿದ್ದು, ಅದರ ಎಂಜಿನ್ ಕೋಣೆಗೆ ಹಾನಿಯಾಗಿದ್ದು, ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ್ದಾರೆ ಎಂದು ಯುಕೆ ಮಾರಿಟೈಮ್ ಟ್ರೇಡ್ ಆಪರೇಷನ್ಸ್ ಕೇಂದ್ರ ತಿಳಿಸಿದೆ. "ಹಾರ್ಮುಜ್ ಜಲಸಂಧಿಯ ಮೂಲಕ ಹೊರಹೋಗುವ ಸಾಗಣೆಯನ್ನು ನಡೆಸುತ್ತಿರುವಾಗ ಹಡಗಿಗೆ ಅಪರಿಚಿತ ಸ್ಫೋಟಕ ಡಿಕ್ಕಿ ಹೊಡೆದಿದೆ ಎಂದು ಕಂಪನಿ ಭದ್ರತಾ ಅಧಿಕಾರಿ ವರದಿ ಮಾಡಿದ್ದಾರೆ" ಎಂದು ಯುಕೆಎಂಟಿಒ ಹೇಳಿಕೆಯಲ್ಲಿ ತಿಳಿಸಿದೆ.

ಈ ಘರ್ಷಣೆಯ ಪರಿಣಾಮವಾಗಿ ಎಂಜಿನ್ ಕೋಣೆ ಹಾನಿಗೊಳಗಾಗಿದ್ದು, ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ್ದಾರೆ ಎಂದು ಅದು ಹೇಳಿದೆ. ಉಳಿದ ಸಿಬ್ಬಂದಿಗೆ ಒಮಾನಿ ಕೋಸ್ಟ್ ಗಾರ್ಡ್ ಸಹಾಯ ಮಾಡುತ್ತಿದೆ. ಯಾವುದೇ ಪರಿಸರದ ಮೇಲೆ ಪರಿಣಾಮ ಬೀರುವ ವರದಿಯಾಗಿಲ್ಲ, ಆದರೆ ಅಧಿಕಾರಿಗಳು ಘಟನೆಯ ತನಿಖೆ ನಡೆಸುತ್ತಿದ್ದಾರೆ ಎಂದು ಯುಕೆಎಂಟಿಒ ತಿಳಿಸಿದೆ. ಹಾರ್ಮುಜ್ ಜಲಸಂಧಿಯನ್ನು ಸಾಗಿಸುವ ಹಡಗುಗಳು ಎಚ್ಚರಿಕೆಯಿಂದಿರಬೇಕು ಮತ್ತು ಯಾವುದೇ ಅನುಮಾನಾಸ್ಪದ ಚಟುವಟಿಕೆಯನ್ನು ವರದಿ ಮಾಡುವಂತೆ ಸಂಸ್ಥೆ ಸೂಚಿಸಿದೆ. ಯುಎಸ್–ಇರಾನ್ ಯುದ್ಧದ ಮಧ್ಯೆ ಕಾರ್ಯತಂತ್ರದ ಜಲಮಾರ್ಗದ ಸುತ್ತಲಿನ ಉದ್ವಿಗ್ನತೆ ಹೆಚ್ಚುತ್ತಿರುವ ಕಾರಣ ಈ ಘಟನೆ ಸಂಭವಿಸಿದೆ, ಇದು ವಾಣಿಜ್ಯ ಸಾಗಣೆ ಮತ್ತು ಜಾಗತಿಕ ಇಂಧನ ಪೂರೈಕೆಗಳಿಗೆ ಅಡ್ಡಿಯಾಗುವ ಬಗ್ಗೆ ಕಳವಳ ವ್ಯಕ್ತಪಡಿಸಿದೆ. ಜಾಗತಿಕ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲ ಸಾಗಣೆಗಳಲ್ಲಿ ಗಮನಾರ್ಹ ಪಾಲು ಹಾದುಹೋಗುವ ಹಾರ್ಮುಜ್ ಜಲಸಂಧಿಯು ಸಂಘರ್ಷದಲ್ಲಿ ಪ್ರಮುಖ



ಪ್ರಚೋದನಾ ಬಿಂದುವಾಗಿದೆ. ಕಡಲ ಟ್ರ್ಯಾಕಿಂಗ್ ದತ್ತಾಂಶದ ಪ್ರಕಾರ, ಜಲಮಾರ್ಗದ ಮೂಲಕ ಸಾಗಣೆ ಸಂಚಾರ ತೀವ್ರವಾಗಿ ಕಡಿಮೆಯಾಗಿದೆ, ಹಿಂದಿನ 24 ಗಂಟೆಗಳಲ್ಲಿ ಬೆರಳೆಣಿಕೆಯಷ್ಟು ವಾಣಿಜ್ಯ ಹಡಗುಗಳು ಮಾತ್ರ ಹಾದುಹೋಗಿವೆ ಎಂದು ವರದಿಯಾಗಿದೆ. ಜಲಸಂಧಿಯ ಮೂಲಕ ಸಂಚಾರ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ರಾಜತಾಂತ್ರಿಕ ಪ್ರಯತ್ನಗಳ ನಡುವೆಯೂ ಈ ಘಟನೆ ಸಂಭವಿಸಿದೆ. ಜಲಮಾರ್ಗದ ಕುರಿತು ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವಿನ ಮಾತುಕತೆಗಳಲ್ಲಿ ಒಮಾನ್ ಪಾತ್ರ ವಹಿಸಿದೆ. ಗಮನಾರ್ಹವಾಗಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಓಮನ್ ಮೇಲೆ ಬಾಂಬ್ ದಾಳಿ ಮಾಡುವುದಾಗಿ ಬೆದರಿಕೆ ಹಾಕಿದರು, ಹಾರ್ಮುಜ್ ಜಲಸಂಧಿಯ ಮೂಲಕ ಹಡಗು ಸಾಗುವಂತೆ ಮಾಡಲು ಇರಾನ್ನೊಂದಿಗೆ ಮಾತುಕತೆ ನಡೆಸಿದ್ದಕ್ಕಾಗಿ, ಇದು ಮಧ್ಯಪ್ರಾಚ್ಯದ ಶ್ರೇಷ್ಠ ಶಾಂತಿ ಒಪ್ಪಂದ ಎಂದು ಟ್ರಂಪ್ ಒಮ್ಮೆ ಶ್ಲಾಘಿಸಿದ ಒಔಗ ನ ಅವಶ್ಯಕತೆಯೂ ಆಗಿತ್ತು. ಅಧಿಕಾರಿಗಳು ಕ್ಷಿಪಣಿಯನ್ನು ಗುರುತಿಸಿಲ್ಲ ಅಥವಾ ಘಟನೆಗೆ ಯಾರು ಕಾರಣರಾಗಿರಬಹುದು ಎಂದು ಹೇಳಿಲ್ಲ. ಹಡಗಿನ ರಾಷ್ಟ್ರೀಯತೆ ಮತ್ತು ಗಾಯಗೊಂಡ ಸಿಬ್ಬಂದಿಯ ಸ್ಥಿತಿಯನ್ನು ಬಹಿರಂಗಪಡಿಸಲಾಗಿಲ್ಲ.

# ಭಾರತದ ಚುನಾವಣಾ ವ್ಯವಸ್ಥೆ ಅಮೆರಿಕಕ್ಕೆ ಪರಿಪೂರ್ಣ ಮಾದರಿ: ಟ್ರಂಪ್

**ವಾಷಿಂಗ್ಟನ್, ಆ.18:** ಭಾರತದ ಚುನಾವಣಾ ವ್ಯವಸ್ಥೆಯನ್ನು ಅಮೆರಿಕಕ್ಕೆ ಪರಿಪೂರ್ಣ ಮಾದರಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉಲ್ಲೇಖಿಸಿದ್ದಾರೆ, ಮತದಾನದ ನಿಯಮಗಳನ್ನು ಬಿಗಿಗೊಳಿಸುವ ಕಾನೂನನ್ನು ಜಾರಿಗೆ ತರಲು ಕಾಂಗ್ರೆಸ್ಗೆ ತಮ್ಮ ಕರೆಯನ್ನು ನವೀಕರಿಸುವಾಗ ಅದರ ಫೋಟೋ ಗುರುತಿನ ಬಳಕೆ ಮತ್ತು ಅಂಚೆ ಮತಪತ್ರಗಳ ಮೇಲಿನ ಸೀಮಿತ ಅವಲಂಬನೆಯನ್ನು ತೋರಿಸಿದ್ದಾರೆ. ಟ್ರಂಪ್ ಅವರ ಹೇಳಿಕೆಗಳು ಭಾರತದ ಚುನಾವಣಾ ವ್ಯವಸ್ಥೆಯನ್ನು ಮತದಾರರ ಪ್ರವೇಶ, ಚುನಾವಣಾ ಭದ್ರತೆ ಮತ್ತು ಮೇಲ್–ಇನ್ ಮತಪತ್ರಗಳ ಬಳಕೆಯ ಬಗ್ಗೆ ವಿವಾದಾತ್ಮಕ ಯುಎಸ್ ಚರ್ಚೆಗೆ ತಂದಿವೆ. ನವೆಂಬರ್ 3 ರ ಮಧ್ಯಂತರ ಚುನಾವಣೆಗಳಿಗೆ ಮುಂಚಿತವಾಗಿ ಟ್ರಂಪ್ ಮತ್ತು ಅವರ ರಿಪಬ್ಲಿಕನ್ ಮಿತ್ರಪಕ್ಷಗಳು ಬಿಗಿಯಾದ ಮತದಾನ ನಿಯಮಗಳಿಗೆ ಒತ್ತಾಯಿಸುತ್ತಿರುವುದರಿಂದ ಸೇವ್ ಅಮೇರಿಕಾ ಕಾಯ್ದೆಯನ್ನು ಸೆನೆಟ್‌ನಲ್ಲಿ ಸ್ಥಗಿತಗೊಳಿಸಲಾಗಿದೆ. ಟ್ರೂತ್ ಸೋಶಿಯಲ್‌ನ ಪೋಸ್ಟ್‌ನಲ್ಲಿ, ಟ್ರಂಪ್ ಭಾರತದ 2024 ರ ಸಾರ್ವತ್ರಿಕ ಚುನಾವಣೆಯನ್ನು ಉಲ್ಲೇಖಿಸಿ, 646 ಮಿಲಿಯನ್ಗಿಂತಲೂ ಹೆಚ್ಚು ಜನರು ಮತ ಚಲಾಯಿಸಿದ್ದಾರೆ ಮತ್ತು ಶೇಕಡಾ 1 ಕ್ಕಿಂತ ಕಡಿಮೆ ಜನರು ಮೇಲ್ ಮೂಲಕ ತಮ್ಮ ಮತ ಚಲಾಯಿಸಿದ್ದಾರೆ ಎಂದು ಹೇಳಿದ್ದಾರೆ. ಕಡ್ಡಾಯ ಫೋಟೋ ಗುರುತಿನ ಚೀಟಿ ಇಲ್ಲದೆ ಚುನಾವಣೆಗಳನ್ನು ಹೇಗೆ ನಡೆಸಬಹುದು ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಯುಎಸ್ ಅಧಿಕಾರಿಗಳನ್ನು ಪ್ರಶ್ನಿಸಿದ್ದನ್ನು ಅವರು ನೆನಪಿಸಿಕೊಂಡರು.

ಟ್ರಂಪ್ ಆಡಳಿತವು ಸೇಫ್‌ಗಾರ್ಡ್ ಅಮೆರಿಕನ್



ವೋಟರ್ ಎಲಿಜಿಬಿಲಿಟಿ ಕಾಯ್ದೆಗೆ ಬೆಂಬಲವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವಾಗ ಅವರ ಹೇಳಿಕೆಗಳು ಬಂದಿವೆ, ಇದು ಮತದಾರರ ನೋಂದಣಿಗೆ ಪೌರತ್ವದ ದಾಖಲೆ ಪುರಾವೆಯ ಅಗತ್ಯವಿರುತ್ತದೆ ಮತ್ತು ಫೆಡರಲ್ ಚುನಾವಣೆಗಳಿಗೆ ರಾಷ್ಟ್ರವ್ಯಾಪಿ ಮತದಾರರ ಗುರುತಿನ ಅವಶ್ಯಕತೆಯನ್ನು ಸ್ಥಾಪಿಸುತ್ತದೆ.

ಭಾರತದಲ್ಲಿನ ಯುಎಸ್ ರಾಯಭಾರಿ ಸೆರ್ಗಿಯೊ ಗೋರ್ ಟ್ರಂಪ್ ಅವರ ಹೇಳಿಕೆಗಳನ್ನು ಬೆಂಬಲಿಸಿದರು. "ಅಧ್ಯಕ್ಷ ಡೊನಾಲ್ಡ್ ಜೆ. ಟ್ರಂಪ್ ಸಂಪೂರ್ಣವಾಗಿ ಸರಿ! 646 ಮಿಲಿಯನ್ ಮತದಾರರು, ಭಾರತದ ಕೊನೆಯ ಚುನಾವಣೆಯಲ್ಲಿ ಪ್ರತಿಯೊಬ್ಬರಿಗೂ ಐಡಿ ಅಗತ್ಯವಿದೆ. ಕಾಂಗ್ರೆಸ್ ದಿ ಸೇವ್ ಅಮೆರಿಕಾ ಕಾಯ್ದೆಯನ್ನು ಅಂಗೀಕರಿಸಬೇಕು!" ಶಾಸನವು ಮೇಲ್–ಇನ್ ಮತದಾನಕ್ಕಾಗಿ ಬಿಗಿಯಾದ ನಿಯಮಗಳನ್ನು, ಮತದಾರರ ಅರ್ಹತೆಯ ಬಲವಾದ ಪರಿಶೀಲನೆಯನ್ನು ಮತ್ತು ನೋಂದಣಿ ಪಟ್ಟಿಯಿಂದ ಅನರ್ಹ ಮತದಾರರನ್ನು ಗುರುತಿಸಲು ಮತ್ತು ತೆಗೆದುಹಾಕಲು ವಿಸ್ತೃತ ಅಧಿಕಾರವನ್ನು ಪ್ರಸ್ತಾಪಿಸುತ್ತದೆ. ನಾಗರಿಕರಲ್ಲದವರು ಮತ ಚಲಾಯಿಸುವುದನ್ನು ತಡೆಯಲು ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿ ಸಾರ್ವಜನಿಕ ವಿಶ್ವಾಸವನ್ನು ಬಲಪಡಿಸಲು ಕ್ರಮಗಳು ಅಗತ್ಯವಿದೆ ಎಂದು ಶ್ವೇತಭವನ ವಾದಿಸಿದೆ. ಆಡಳಿತವು ಭಾರತ ಮತ್ತು ಬ್ರೆಜಿಲ್ ಅನ್ನು ಮತದಾರರ ಗುರುತನ್ನು ಬಯೋಮೆಟ್ರಿಕ್ ವ್ಯವಸ್ಥೆಗಳಿಗೆ ಲಿಂಕ್ ಮಾಡಿದ ದೇಶಗಳ ಉದಾಹರಣೆಗಳಾಗಿ ಪದೇ ಪದೇ ಉಲ್ಲೇಖಿಸಿದೆ, ಇದು ಪೌರತ್ವದ ಸ್ವಯಂ–ದೃಢೀಕರಣದ ಮೇಲೆ ಗಖ ಅವಲಂಬನೆ ಎಂದು ವಿವರಿಸುವ ದೇಶಗಳೊಂದಿಗೆ ಅವುಗಳನ್ನು ವ್ಯತಿರಿಕ್ತಗೊಳಿಸುತ್ತದೆ.

ಫೆಡರಲ್ ಚುನಾವಣೆಗಳಿಗೆ ಪೌರತ್ವ ಪರಿಶೀಲನೆಯನ್ನು ಬಲಪಡಿಸಲು ಮತ್ತು ಮೇಲ್ ಮತ್ತು ಗೈರುಹಾಜರಿ ಮತಪತ್ರಗಳನ್ನು ನಿಯಂತ್ರಿಸುವ ಕಾರ್ಯವಿಧಾನಗಳನ್ನು ಬಿಗಿಗೊಳಿಸಲು ಫೆಡರಲ್ ಸಂಸ್ಥೆಗಳಿಗೆ ನಿರ್ದೇಶನ ನೀಡುವ ಮೂಲಕ ಟ್ರಂಪ್ ಮಾರ್ಚ್ 2026 ರಲ್ಲಿ ಮತ್ತೊಂದು ಕಾರ್ಯನಿರ್ವಾಹಕ ಆದೇಶಕ್ಕೆ ಸಹಿ ಹಾಕಿದರು.

ದೊಡ್ಡ ಪ್ರಮಾಣದ ಚುನಾವಣಾ ಪ್ರಕ್ರಿಯೆ ಮತ್ತು ಅದರ ಮತದಾರರ ಗುರುತಿನ ಅವಶ್ಯಕತೆಗಳನ್ನು ಉಲ್ಲೇಖಿಸುವ ಮೂಲಕ, ಟ್ರಂಪ್ ಅಮೆರಿಕದ ಮತದಾನದ ನಿಯಮಗಳಿಗೆ ಬದಲಾವಣೆಗಳನ್ನು ಒತ್ತಾಯಿಸುವಲ್ಲಿ ಭಾರತೀಯ ವ್ಯವಸ್ಥೆಯನ್ನು ಹೆಚ್ಚಾಗಿ ಉಲ್ಲೇಖ ಬಿಂದುವಾಗಿ ಬಳಸುತ್ತಿದ್ದಾರೆ.

# ಕಾಂಗೋದಲ್ಲಿ ಎಬೋಲಾ: ಏಕಾಏಕಿ 2,325 ಸಾವು, ಇದು ದಾಖಲೆಯ ಮಾರಕ

ಜಿನೀವಾ, ಆಗಸ್ಟ್ 18: ಕಾಂಗೋದಲ್ಲಿ ಎಬೋಲಾ ಏಕಾಏಕಿ 2,325 ಜನರು ಸಾವನ್ನಪ್ಪಿದ್ದಾರೆ, ಇದು ದೇಶದಲ್ಲಿ ಇದುವರೆಗೆ ದಾಖಲಾದ ಅತ್ಯಂತ ಮಾರಕ ಎಬೋಲಾ ಏಕಾಏಕಿ ಎಂದು ವಿಶ್ವ ಆರೋಗ್ಯ ಸಂಸ್ಥೆ ಮಂಗಳವಾರ ತಿಳಿಸಿದೆ.

ಯುಎನ್ ಆರೋಗ್ಯ ಸಂಸ್ಥೆ ಉಲ್ಲೇಖಿಸಿದ ಸರ್ಕಾರಿ ಮಾಹಿತಿಯ ಪ್ರಕಾರ, ಎಬೋಲಾ ವೈರಸ್ನ ಬುಂಡಿಬುಗ್ಯೊ ತಳಿಗೆ ಸಂಬಂಧಿಸಿದ ಈ ಏಕಾಏಕಿ 2018–2020 ಸಾಂಕ್ರಾಮಿಕ ರೋಗಕ್ಕಿಂತ 26 ಹೆಚ್ಚು ಜೀವಗಳನ್ನು ಬಲಿ ಪಡೆದಿದೆ.

5,000 ಕ್ಕೂ ಹೆಚ್ಚು ದೃಢಪಡಿಸಿದ ಪ್ರಕರಣಗಳು ವರದಿಯಾಗಿವೆ, ಪ್ರಕರಣದ ಮರಣ ಪ್ರಮಾಣವು 46% ತಲುಪಿದೆ ಎಂದು ಡಬ್ಲ್ಯುಎಚ್‌ಒ ಘಟನೆ ವ್ಯವಸ್ಥಾಪಕ ಥಿಯರ್ನೊ ಬಾಲ್ಡೆ ಜಿನೀವಾದಲ್ಲಿ ವರದಿಗಾರರಿಗೆ ಏಕಾಏಕಿ ಕೇಂದ್ರಬಿಂದುವಾಗಿರುವ ಬುನಿಯಾದಿಂದ ವೀಡಿಯೊ ಲಿಂಕ್ ಮೂಲಕ ತಿಳಿಸಿದರು. ಬಾಸ್–ಉಯೆಲೆ ಪ್ರಾಂತ್ಯದಲ್ಲಿಯೂ ಪ್ರಕರಣಗಳು ಪತ್ತೆಯಾಗಿದ್ದು, ಒಟ್ಟು ಪೀಡಿತ ಪ್ರಾಂತ್ಯಗಳ ಸಂಖ್ಯೆಯನ್ನು ಆರಕ್ಕೆ ತರಲಾಗಿದೆ.

"ಪರಿಸ್ಥಿತಿ ಸಾಕಷ್ಟು ಕಷ್ಟಕರವಾಗಿದೆ, ಆದರೆ ಜನರು ಈ ಏಕಾಏಕಿ ನಿಯಂತ್ರಿಸಲು ಇಲ್ಲಿ ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ" ಎಂದು ಬಾಲ್ಡೆ ಹೇಳಿದರು.

ಪ್ರತಿಕ್ರಿಯಾ ತಂಡಗಳು ಸ್ಥಳೀಯ ಸಮುದಾಯಗಳಿಂದ "ಬಹುತೇಕ ಪ್ರತಿದಿನ" ಪ್ರತಿರೋಧವನ್ನು ಎದುರಿಸುತ್ತಿವೆ ಎಂದು ಅವರು ಹೇಳಿದರು, ಸೋಮವಾರ ಆಂಬ್ಯುಲೆನ್ಸ್ ಮೇಲೆ ದಾಳಿ ನಡೆಸಲಾಯಿತು.

ಕ್ಲೋರಿನ್ ಮತ್ತು ಕೈಗವಸುಗಳು ಸೇರಿದಂತೆ ರಕ್ಷಣಾ ಸಾಧನಗಳೊಂದಿಗೆ ಈಗಾಗಲೇ ಹಳ್ಳಿಗಳಲ್ಲಿ ಸಮಾಧಿಗಳನ್ನು ನಡೆಸುತ್ತಿರುವ ಜನರಿಗೆ ತರಬೇತಿ ನೀಡುವ ಮತ್ತು ಸಜ್ಜುಗೊಳಿಸುವ ಮೂಲಕ ಸುರಕ್ಷಿತ ಮತ್ತು ಗೌರವಾನ್ವಿತ ಸಮಾಧಿ ಪದ್ಧತಿಗಳನ್ನು ವಿಸ್ತರಿಸುವ ಅಗತ್ಯವನ್ನು ಬಾಲ್ಡೆ ಒತ್ತಿ ಹೇಳಿದರು.

ಆರು ರಿಂದ ಏಳು ವಾರಗಳ ಹಿಂದೆ ಸಮುದಾಯ ಸಾವುಗಳಿಂದ ಪ್ರತಿಕ್ರಿಯಾ ತಂಡಗಳು ಮುಳುಗಿದ್ದ ಲಿಟಾ ಮತ್ತು ನಿಜಿ ಸೇರಿದಂತೆ ಪ್ರದೇಶಗಳಲ್ಲಿ ಪರಿಸ್ಥಿತಿ ಸ್ಥಿರವಾಗಿದೆ ಎಂದು ಅವರು ಹೇಳಿದರು.

# ಬಿಡಬ್ಲ್ಯೂಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್: ಲಕ್ಷ್ಯ ಸೇನ್–ಉನ್ನತಿ ಹೂಡಾ 2ನೇ ಸುತ್ತಿಗೆ ಮುನ್ನಡೆ

**ನವದೆಹಲಿ, ಆ.18:** 2021 ರ ವಿಶ್ವ ಚಾಂಪಿಯನ್ಶಿಪ್ ಕಂಚಿನ ಪದಕ ವಿಜೇತಾ ಲಕ್ಷ್ಯ ಸೇನ್ ಮತ್ತು ಚೊಚ್ಚಲ ಆಟಗಾರ್ತಿ ಉನ್ನತಿ ಹೂಡಾ ಅವರು 16ನೇ ಶ್ರೇಯಾಂಕದ ಆಲಿಸನ್ ಲೀ ಮತ್ತು ಲಾರೆನ್ ಲ್ಯಾಮ್ ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ಮಂಗಳವಾರ ಇಲ್ಲಿನ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬಿಡಬ್ಲ್ಯೂಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್ಶಿಪ್ 2026 ರ ಎರಡನೇ ದಿನದಂದು ಭಾರತದ ಅಗ್ರ ಮಹಿಳಾ ಡಬಲ್ಸ್ ಸಂಯೋಜನೆ ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜಾಲಿ ಅವರು 16ನೇ ಶ್ರೇಯಾಂಕದ ಆಲಿಸನ್ ಲೀ ಮತ್ತು ಲಾರೆನ್ ಲ್ಯಾಮ್ ಅವರನ್ನು ಸೋಲಿಸಿದರು. ಪ್ರಸ್ತುತ ವಿಶ್ವ ಶ್ರೇಯಾಂಕದಲ್ಲಿ 39 ನೇ ಸ್ಥಾನದಲ್ಲಿರುವ ಗಾಯತ್ರಿ ಮತ್ತು ಟ್ರೀಸಾ, 39 ನಿಮಿಷಗಳಲ್ಲಿ ಲ್ಯಾಮ್ ಮತ್ತು ಲೀ ಅವರನ್ನು 21–15, 21–12 ಸೆಟ್‌ಗಳಿಂದ ಸೋಲಿಸಿ ಪ್ರಿ–ಕ್ವಾರ್ಟರ್ ಫೈನಲ್‌ಗೆ




ಮುನ್ನಡೆದರು. ಮಹಿಳಾ ಸಿಂಗಲ್ಸ್‌ನಲ್ಲಿ, ಹದಿಹರೆಯದ ಸ್ಪರ್ಧಿ ಉನ್ನತಿ ಹೂಡಾ ಮ್ಯಾನ್ಮಾರ್ನ ಥೆಟ್ ಹ್ತಾರ್ ತುಜಾರ್ ಅವರನ್ನು 40 ನಿಮಿಷಗಳಲ್ಲಿ 22–20, 21–16 ಅಂತರದಿಂದ ಸೋಲಿಸಿ 32ರ ಸುತ್ತಿಗೆ ತಲುಪಿದರು. ದಿನದ ನಂತರ, 14ನೇ ಶ್ರೇಯಾಂಕದ ಸೇನ್ ಆಸ್ಟ್ರಿಯಾದ ಕಾಲಿನ್ಸ್ ಫಿಲಿಮನ್ ತಮ್ಮ ಎತ್ತರವನ್ನು ಬಳಸಿಕೊಂಡು ಆರಂಭಿಕ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಿದರು. ಆದರೆ ಲಕ್ಷ್ಯ ಎರಡನೇ ಮತ್ತು ಮೂರನೇ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಿ 16–21, 21–8, 21–4 ಅಂತರದಿಂದ ಗೆದ್ದು ಮುಂದಿನ ಸುತ್ತಿಗೆ ಮುನ್ನಡೆದರು. ಮಿಶ್ರ ಡಬಲ್ಸ್‌ನಲ್ಲಿ, ರೋಹನ್ ಕಪೂರ್ ಮತ್ತು ರುತ್ವಿಕಾ ಶಿವಾನಿ ಗಡ್ಡೆ ಕೂಡ ಕೆನಡಾದ ಜೊನಾಥನ್ ಲೈ ಮತ್ತು ಕ್ರಿಸ್ಟಲ್ ಲೈ ವಿರುದ್ಧ ಒಂದು ಗಂಟೆ ಎಂಟು ನಿಮಿಷಗಳ ಕಾಲ ನಡೆದ ಸ್ಪರ್ಧೆಯಲ್ಲಿ 20–22, 21–19, 21–17 ಅಂತರದಿಂದ ಸೋತರು. ದಿನದ ಅತ್ಯಂತ ನಾಟಕೀಯ ಕ್ಷಣಗಳಲ್ಲಿ ಒಂದು ಮಿಶ್ರ ಡಬಲ್ಸ್‌ನಲ್ಲಿ ಬಂದಿತು, ಭಾರತದ ಆಶಿತ್ ಸೂರ್ಯ ಮತ್ತು ಅಮೃತ ಪ್ರಮುಥೇಶ್ ಅಪರೂಪದ ಗೋಲ್ಡನ್ ಪಾಯಿಂಟ್ ಮುಕ್ತಾಯದ ನಂತರ ಹೊರಬಿದ್ದರು.

# ಟೆಸ್ಟ್ ಕ್ರಿಕೆಟ್‌ನಲ್ಲಿ ರಿಷಭ್ ದಾಖಲೆ

**ನವದೆಹಲಿ, ಆ. 18:** ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತದ ಸ್ಟಾರ್ ವಿಕೆಟ್ ಕೀಪರ್ ಮತ್ತು ಬ್ಯಾಟ್ಸ್ಮನ್ ರಿಷಭ್ ಪಂತ್ ಇತಿಹಾಸ ನಿರ್ಮಿಸಿದ್ದು, ಟೆಸ್ಟ್ ಕ್ರಿಕೆಟ್‌ನಲ್ಲಿ 100 ಸಿಕ್ಸರ್ ಬಾರಿಸಿದ ಮೊದಲ ಭಾರತೀಯ ಕ್ರಿಕೆಟಿಗ ಮತ್ತು ವಿಶ್ವದ ನಾಲ್ಕನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಟೆಸ್ಟ್‌ನ ನಾಲ್ಕನೇ ದಿನದ ಇನ್ನಿಂಗ್ಸ್‌ನಲ್ಲಿ ಲಹಿರು ಕುಮಾರ ಎಸೆತದಲ್ಲಿ ಸಿಕ್ಸರ್ ಬಾರಿಸುವ ಮೂಲಕ ಪಂತ್ ಈ ಮೈಲಿಗಲ್ಲು ಸ್ಥಾಪಿಸಿದರು. ಮತ್ತು ಈ ಸಿಕ್ಸರ್ ಅವರ 20ನೇ ಟೆಸ್ಟ್ ಅರ್ಧಶತಕವನ್ನೂ ದಾಖಲಿಸಿತು. ಜೊತೆಗೆ ಕೇವಲ 51 ಪಂದ್ಯಗಳಲ್ಲಿ 100 ಸಿಕ್ಸರ್ ಬಾರಿಸುವ ಮೂಲಕ ವೇಗದ ಆಟಗಾರ ಎನಿಸಿಕೊಂಡಿದ್ದಾರೆ.

ಇಂಗ್ಲೆಂಡ್‌ನ ಮಾಜಿ ನಾಯಕ ಬೆನ್ ಸ್ಟೋಕ್ಸ್ ತಮ್ಮ 82ನೇ ಟೆಸ್ಟ್‌ನಲ್ಲಿ ಈ ದಾಖಲೆಯನ್ನು ತಲುಪಿದ್ದರು. 138 ಸಿಕ್ಸರ್‌ಗಳೊಂದಿಗೆ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಬ್ರೆಂಡನ್ ಮೆಕಲಮ್ 107 ಸಿಕ್ಸರ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಪಂತ್ ಈಗ 100 ಸಿಕ್ಸರ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದರೆ, ಆಸ್ಟ್ರೇಲಿಯಾದ ಮಾಜಿ ವಿಕೆಟ್ ಕೀಪರ್ ಆಡಮ್ ಗಿಲ್ಕ್ರಿಸ್ಟ್ ಕೂಡ 100 ಸಿಕ್ಸರ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ. ವೆಸ್ಟ್ ಇಂಡೀಸ್ ನ ಕ್ರಿಸ್ ಗೇಲ್ ಅವರು 98 ಸಿಕ್ಸರ್‌ಗಳೊಂದಿಗೆ ನಾಲ್ಕನೇ ಸ್ಥಾನದ್ಲಲಿದ್ದಾರೆ.

